


# ಪ್ರೊ. ಎಂ.ಎ. ಹೆಗಡೆ
# ಯಕ್ಷಗಾನ ಪ್ರಸಂಗ ಮಾಲಿಕಾ



ತ್ರಿಶಂಕು ಚರಿತ್ರೆ

ಸೀತಾ ವಿಯೋಗ

ಮರುತ್ ಜನ್ಮ

ಗಯ ಯಜ್ಞ
ರಾಮಧಾನ್ಯ ಚರಿತ್ರೆ

ಖಾಂಡವ ದಹನ


ಗೌರವ ಸಂಪಾದಕರು : ಡಾ. ಜಿ.ಎಲ್. ಹೆಗಡೆ
ಸಂಪಾದಕರು : ಕದ್ರಿ ನವನೀತ ಶೆಟ್ಟಿ



ಕರ್ನಾಟಕ ಯಕ್ಷಗಾನ ಅಕಾಡೆಮಿ
ಜಯಚಾಮರಾಜೇಂದ್ರ ರಸ್ತೆ, ಬೆಂಗಳೂರು-೫೬೦೦೦೨



ಪ್ರೊ. ಎಂ.ಎ. ಹೆಗಡೆ ಯಕ್ಷಗಾನ ಪ್ರಸಂಗ ಮಾಲಿಕಾ ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

# ಪ್ರೊ. ಎಂ.ಎ. ಹೆಗಡೆ ಯಕ್ಷಗಾನ ಪ್ರಸಂಗ ಮಾಲಿಕಾ

## ಕವಿ ಪರಿಚಯ

ಎಂ.ಎ. ಹೆಗಡೆ (ಮಹಾಬಲೇಶ್ವರ ಅಣ್ಣಪ್ಪ ಹೆಗಡೆ) ಇವರು ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಜೋಗಿನಮನೆಯವರು. ೧೯೪೮ರಲ್ಲಿ ಜನನ. ಶಿರಸಿಯಲ್ಲಿ ಪದವಿ ಶಿಕ್ಷಣವನ್ನು ಪಡೆದ ಇವರು ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು ಸಿದ್ದಾಪುರದ ಮಹಾತ್ಮಾ ಗಾಂಧಿ ಶತಾಬ್ದಿ ಮಹಾವಿದ್ಯಾಲಯದಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ೨೦೦೬ರಲ್ಲಿ ನಿವೃತ್ತರಾಗಿ ಶಿರಸಿಯಲ್ಲಿ ನೆಲೆಸಿದ್ದರು.

ಅಲಂಕಾರತತ್ವ, ಹಿಂದೂ ಸಂಸ್ಕಾರಗಳು, ಪ್ರಮಾಣ ಪರಿಚಯ, ಭಾರತೀಯ ದರ್ಶನಗಳು ಮತ್ತು ಭಾಷೆ, ಭಾರತೀಯ ತತ್ವಶಾಸ್ತ್ರ ಪರಿಚಯ, ಕುಮಾರಿಲಭಟ್ಟ, ಕೆರೆಮನೆ ಶಂಭುಹೆಗಡೆ, ಮರೆಯಲಾಗದ ಮಹಾಬಲ ಮುಂತಾದ ಸ್ವತಂತ್ರ ಕೃತಿಗಳನ್ನು ರಚಿಸಿದ್ದಾರೆ. ಅನೇಕ ಕೃತಿಗಳನ್ನು ಅನುವಾದಿಸಿದ್ದಾರೆ. ಶಬ್ದ ಮತ್ತು ಜಗತ್ತು, ಭಗವದ್ಭಕ್ತಿ ರಸಾಯನಂ, ಸಿದ್ಧಾಂತ ಬಿಂದು, ಗೀತಾ ಗೂಢಾರ್ಥ ದೀಪಿಕಾ, ಪರಮಾನಂದ ಸುಧಾ, ಧ್ವನ್ಯಾಲೋಕ ಮತ್ತು ಲೋಚನ, ಅಭಿನಯ ದರ್ಪಣ ಮುಂತಾದ ಕೃತಿಗಳನ್ನು ವಿಸ್ತಾರವಾದ ಟಿಪ್ಪಣಿಗಳೊಂದಿಗೆ ಅನುವಾದಿಸಿದ್ದಾರೆ.

ಸ್ವತಃ ಯಕ್ಷಗಾನ ಕಲಾವಿದರಾದ ಇವರು ಪ್ರಸಿದ್ಧ ವೇಷಧಾರಿಗಳೂ ತಾಳಮದ್ದಳೆಯ ಅರ್ಥಧಾರಿಗಳೂ ಆಗಿದ್ದರು. ಇಪ್ಪತ್ತಕ್ಕೂ ಹೆಚ್ಚು ಯಕ್ಷಗಾನ ಪ್ರಸಂಗಗಳನ್ನೂ, ಕಲೆಯ ಕುರಿತಾದ ಲೇಖನಗಳನ್ನೂ ಬರೆದಿದ್ದಾರೆ. ಹಸ್ತಪ್ರತಿಗಳನ್ನು ಶೋಧಿಸಿ ಬೆಳಕಿಗೆ ತಂದಿದ್ದಾರೆ. ಅನೇಕ ಸಂಘ ಸಂಸ್ಥೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು, ಮಾರ್ಗದರ್ಶಕರಾಗಿದ್ದರು.

ಯಕ್ಷಗಾನ ಸಾಹಿತ್ಯ ಸಮ್ಮೇಳನ, ತಾಳಮದ್ದಳೆ ಸಮ್ಮೇಳನಗಳ ಅಧ್ಯಕ್ಷರಾಗಿ, ಗೋಷ್ಠಿಗಳಲ್ಲಿ ಪ್ರಬಂಧಕಾರರಾಗಿ ಪಾಲ್ಗೊಂಡಿದ್ದರು. ಅನೇಕ ಸಂಘಸಂಸ್ಥೆಗಳು ಇವರನ್ನು ಸಮ್ಮಾನಿಸಿವೆ. ಸಂಸ್ಕೃತ ವಿಶ್ವವಿದ್ಯಾಲಯದಿಂದ ಪ್ರೊ. ಎಂ. ಹಿರಿಯಣ್ಣ ಪ್ರಶಸ್ತಿ, ಸಾಹಿತ್ಯ ಅಕಾಡೆಮಿಯಿಂದ ಭಾರತೀಯದರ್ಶನಗಳು ಮತ್ತು ಭಾಷೆ ಕೃತಿಗೆ ಪಶಸ್ತಿ ಲಭಿಸಿದೆ. ಯಕ್ಷಗಾನ ಸೇವೆಗಾಗಿ ಚಿಟ್ಟಾಣಿ ಪ್ರಶಸ್ತಿ, ಸದಾನಂದ ಪ್ರಶಸ್ತಿಯೇ ಮುಂತಾದ ಪ್ರಶಸ್ತಿಗಳು ದೊರೆತಿವೆ. ಸ್ವರ್ಣವಲ್ಲೀ ಮಠದಿಂದ 'ವೈಖರೀ ವಾಚಸ್ಪತಿ'ಯೆಂಬ ಬಿರುದು ಸಂದಿದೆ.

# ಪ್ರೊ. ಎಂ.ಎ. ಹೆಗಡೆ
# ಯಕ್ಷಗಾನ ಪ್ರಸಂಗ ಮಾಲಿಕಾ


ಗೌರವ ಸಂಪಾದಕರು

**ಡಾ. ಜಿ.ಎಲ್. ಹೆಗಡೆ**

ಸಂಪಾದಕರು

**ಕದ್ರಿ ನವನೀತ ಶೆಟ್ಟಿ**



**ಕರ್ನಾಟಕ ಯಕ್ಷಗಾನ ಅಕಾಡೆಮಿ**

೨ನೇ ಮಹಡಿ, ಚಾಲುಕ್ಯ ವಿಭಾಗ, ಕನ್ನಡ ಭವನ, ಜಯಚಾಮರಾಜೇಂದ್ರ ರಸ್ತೆ,
ಬೆಂಗಳೂರು–೫೬೦೦೦೨
ದೂರವಾಣಿ : ೦೮೦–೨೨೧೧೩೧೪೬
ಇಮೇಲ್ : kybabanaglore@gmial.com

**PROF. M.A. HEGADE YAKSHAGANA PRASANGA MAALIKA**
Collection of Yakshagana Poems (Prasanga) of
Prof. M.A. Hegade

Chief Editor :
**Dr. G.L. Hagade**
President
Karnataka Yakshagana Academy, Bengaluru
Tel : 080-22113146

Editor :
**Kadri Navaneetha Shetty**
Kadri Kambala Guthu, Mangaluru - 575 004
Mobile : 9448123061

Published by
**S.H. Shivarudrappa**
Registrar, Karnataka Yakshagana Academy, Bengaluru
Tel : 080-29603146

© : Karnataka Yakshagana Academy

First Impression : 2022
Size : Demy 1/8
Paper Used : 80 GSM Maplitho
Pages : 184
Price : Rs. 150
Copies : 500

Cover Design : **Kallur Nagesh**

Page setting & Printed at
**Aakrithi Prints**
Mangaluru - 575 001
Tel.: 0824 2972002

# ಪ್ರೊ ಎಂ.ಎ. ಹೆಗಡೆ
# ಯಕ್ಷಗಾನ ಪ್ರಸಂಗ ಮಾಲಿಕಾ

**ತ್ರಿಶಂಕು ಚರಿತ್ರೆ**

**ಸೀತಾ ವಿಯೋಗ**

**ಮರುತ್ ಜನ್ಮ**

**ಗಯ ಯಜ್ಞ**

**ರಾಮಧಾನ್ಯ ಚರಿತ್ರೆ**

**ಖಾಂಡವ ದಹನ**


ಗೌರವ ಸಂಪಾದಕರು

**ಡಾ. ಜಿ.ಎಲ್. ಹೆಗಡೆ**

ಸಂಪಾದಕರು

**ಕದ್ರಿ ನವನೀತ ಶೆಟ್ಟಿ**



**ಕರ್ನಾಟಕ ಯಕ್ಷಗಾನ ಅಕಾಡೆಮಿ**

ಬೆಂಗಳೂರು–೫೬೦೦೦೨

## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ್ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಡಾ. ಪ್ರದೀಪ್ ಸಾಮಗ (ಯೋಜನಾ ಕಾರ್ಯದರ್ಶಿ), ನಟರಾಜ ಉಪಾಧ್ಯ (ಯೋಜನಾ ಸಹಕಾರ್ಯದರ್ಶಿ), ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಅಶ್ವಿನಿ ಹೊದಲ, ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾ ಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ, ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ, ಶ್ರೀಕಾಂತ್ ನಾಯಕ್, ರಘುರಾಜ್ ಶರ್ಮಾ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಮ್. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ವಾಸುದೇವ ಸಾಮಗ, ಎಂ.ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣುಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ, ಉಡುಪಿ, ಯಕ್ಷಸಿಂಚನ, ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್ ಎಮ್ ಹೆಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ.ಎಸ್, ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ.ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ರಾಘವೇಂದ್ರ ಮಯ್ಯ (ಲೆಕ್ಕಪತ್ರ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

# ಅಮರ ಮಾಲಿಕಾ

ಪ್ರೊ. ಎಂ.ಎ. ಹೆಗಡೆಯವರು ಉಭಯಭಾಷಾ ಕೋವಿದರು, ಯಕ್ಷರಂಗದ ಹಿರಿಯ ವಿದ್ವಾಂಸರು, ಕಲಾವಿದರು, ಪ್ರಸಂಗಕರ್ತರು. ಎರಡು ಅವಧಿಗಳಲ್ಲಿ ಕರ್ನಾಟಕ ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿ ಸದಸ್ಯರೊಂದಿಗೆ, ಕಲಾವಿದರೊಂದಿಗೆ ಆತ್ಮೀಯತೆಯಿಂದ ವ್ಯವಹರಿಸಿ ಸರ್ವರ ಗೌರವಾದರಗಳಿಗೆ ಪಾತ್ರರಾದವರು.

ಅವರ ಅಕಾಲಿಕ ಮರಣ ಯಕ್ಷಗಾನ ವಲಯಕ್ಕೆ ದೊಡ್ಡ ನಷ್ಟ. ಅವರ ಯಕ್ಷಗಾನ ಪ್ರಸಂಗಗಳನ್ನು ಗ್ರಂಥರೂಪದಲ್ಲಿ ಲೋಕಾರ್ಪಣೆಗೊಳಿಸುವ ಮೂಲಕ ಕರ್ನಾಟಕ ಯಕ್ಷಗಾನ ಅಕಾಡೆಮಿಯು ಅವರಿಗೆ ಶ್ರದ್ಧಾಂಜಲಿಯನ್ನು ಸಮರ್ಪಿಸುತ್ತಿದೆ.

ಈ ಕೃತಿಯ ಪ್ರಕಟಣೆಗೆ ಅನುಮತಿ ನೀಡಿದ ಎಂ.ಎ. ಹೆಗಡೆಯವರ ಧರ್ಮಪತ್ನಿ ಶ್ರೀಮತಿ ಸಾವಿತ್ರಿ ಹೆಗಡೆ ಹಾಗೂ ಅವರ ಚಿರಂಜೀವಿಗಳಿಗೆ ಕೃತಜ್ಞತೆಗಳು.

ಅಂತೆಯೇ ನಮ್ಮ ಅಕಾಡೆಮಿಯ ಸದಸ್ಯ ಶ್ರೀ ಕದ್ರಿ ನವನೀತ ಶೆಟ್ಟಿಯವರು ಹೆಗಡೆಯವರ ಆರು ಪ್ರಸಂಗಗಳ ಕೃತಿಯ ಸಂಪಾದಕರಾಗಿ ಉತ್ಸಾಹದಿಂದ ಕಾರ್ಯೋನ್ಮುಖರಾಗಿ ಅಲ್ಪಾವಧಿಯಲ್ಲಿ ಈ ಕೃತಿಯನ್ನು ಬಿಡುಗಡೆಗೆ ಅನುಗೊಳಿಸಿದ್ದಾರೆ. ಈ ಕಾರ್ಯದಲ್ಲಿ ಅಕಾಡೆಮಿಯ ರಿಜಿಸ್ಟ್ರಾರ್ ಆದ ಶ್ರೀ ಎಸ್.ಎಚ್. ಶಿವರುದ್ರಪ್ಪನವರು ಮತ್ತು ಸಿಬ್ಬಂದಿಗಳು ಕೃತಿ ಪ್ರಕಟಣೆಗೆ ಸಹಕಾರ ನೀಡಿರುತ್ತಾರೆ. ಇವರೆಲ್ಲರಿಗೂ ಧನ್ಯವಾದಗಳು.

ಪ್ರೊ. ಎಂ.ಎ. ಹೆಗಡೆಯವರ ಪ್ರಸಂಗಗಳು ಅಮರ ಪ್ರಸಂಗಗಳಾಗಲಿ ಎಂಬ ಶುಭಪ್ರತೀಕ್ಷೆ ಅಕಾಡೆಮಿಯದು.

**ಡಾ. ಜಿ.ಎಲ್. ಹೆಗಡೆ**

ಅಧ್ಯಕ್ಷರು

ಕರ್ನಾಟಕ ಯಕ್ಷಗಾನ ಅಕಾಡೆಮಿ

# ಎರಡು ಮಾತು

ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾಗಿದ್ದ ಪ್ರೊ. ಎಂ.ಎ. ಹೆಗಡೆಯವರ ಅಕಾಲಿಕ ನಿಧನ ಯಕ್ಷಲೋಕಕ್ಕೆ ತುಂಬಲಾರದ ನಷ್ಟ. ಕರ್ನಾಟಕ ಸರಕಾರವು ನನ್ನನ್ನು ಕರ್ನಾಟಕ ಯಕ್ಷಗಾನ ಅಕಾಡೆಮಿಯ ಆಡಳಿತಾಧಿಕಾರಿಯಾಗಿ ನಿಯೋಜಿಸಿತು. ಸರ್ವ ಸದಸ್ಯರ ಸಭೆಯಲ್ಲಿ ಪ್ರೊ. ಎಂ.ಎ. ಹೆಗಡೆಯವರ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಸದಸ್ಯರಾದ ಶ್ರೀ ಕದ್ರಿ ನವನೀತ ಶೆಟ್ಟಿಯವರು ಹೆಗಡೆಯವರ ಪ್ರಸಂಗ ಸಂಪುಟವನ್ನು ಅಕಾಡೆಮಿ ಪ್ರಕಟಿಸುವುದಾದರೆ ಸಂಪಾದಕನ ಹೊಣೆಗಾರಿಕೆಯನ್ನು ತಾನು ವಹಿಸುತ್ತೇನೆ ಎಂದಾಗ ಸರ್ವಾನುಮತದಿಂದ ಸಭೆ ಅನುಮೋದಿಸಿತು.

ಯಕ್ಷವಾಹಿನಿಯ ಯಕ್ಷಪ್ರಸಂಗ ಕೋಶ – ಅಂತರ್‌ಜಾಲ ಪ್ರಕಾಶನದ ಪ್ರಾಯೋಜಕತ್ವವನ್ನು ಅಕಾಡೆಮಿಯೇ ವಹಿಸಿ ಕೊಂಡಿರುವುದರಿಂದ ಹೆಗಡೆಯವರ ಆರು ಪ್ರಸಂಗಗಳನ್ನು ಯಕ್ಷವಾಹಿನಿಯವರ ಸಹಕಾರದಿಂದ ಪಡೆದುಕೊಳ್ಳುವುದಾಗಿ ನಿರ್ಧರಿಸಲಾಯಿತು.

ಈ ಸಂಪುಟದಲ್ಲಿರುವ ಪ್ರಸಂಗಗಳು ತೆಂಕು ಬಡಗಿನ ಆಟ ಕೂಟಗಳಲ್ಲಿ ನಿತ್ಯ ನೂತನ ಪ್ರಸಂಗಗಳಾಗಿ ಮೆರೆಯಲಿ ಎಂಬುದು ನಮ್ಮೆಲ್ಲರ ಆಶಯ.

**ಶ್ರೀ ಅಶೋಕ್ ಎನ್. ಚಲವಾದಿ**
ಆಡಳಿತಾಧಿಕಾರಿ

# ಯಕ್ಷಾಂಬಿಕೆಗೆ ಮಾಲೆ

## ಯಕ್ಷದೇವಿಯ ಕೊರಳಿಗೆ ಯಕ್ಷಸಾಹಿತ್ಯ ಸ್ವರ್ಣ ಪುಷ್ಪಮಾಲಿಕೆ

ಪ್ರೊ. ಎಂ.ಎ. ಹೆಗಡೆಯವರ ಆರು ಅನರ್ಘ್ಯ ಯಕ್ಷಗಾನ ಪ್ರಸಂಗಗಳೆಂಬ ಸ್ವರ್ಣ ಪುಷ್ಪಗಳನ್ನು 'ಯಕ್ಷಗಾನ ಪ್ರಸಂಗ ಮಾಲಿಕಾ' ಸ್ವರೂಪದಲ್ಲಿ ಯಕ್ಷದೇವಿಗೆ ಅರ್ಪಿಸುತ್ತಿದ್ದೇವೆ.

ಅಕಾಲದಲ್ಲಿ ನಮ್ಮನ್ನಗಲಿದ ನಮ್ಮ ಅಧ್ಯಕ್ಷರಾದ ಪ್ರೊ. ಎಂ.ಎ. ಹೆಗಡೆಯವರಿಗೆ ಯಕ್ಷಗಾನ ಅಕಾಡೆಮಿಯ ಸರ್ವ ಸದಸ್ಯರ ಸಭೆಯಲ್ಲಿ ಸಂತಾಪ ಸೂಚಿಸಲಾಯಿತು. ಆ ಸಂದರ್ಭದಲ್ಲಿ ಹೆಗಡೆಯವರ ಯಕ್ಷಗಾನ ಪ್ರಸಂಗಗಳನ್ನು ಅಕಾಡೆಮಿಯ ವತಿಯಿಂದ ಪ್ರಕಾಶಿಸಬೇಕೆನ್ನುವ ನಿರ್ಧಾರವನ್ನು ಸರ್ವಾನುಮತದಿಂದ ಸಭೆ ಅಂಗೀಕರಿಸಿತು.

ಈ ಸಂಪುಟದ ಸಂಪಾದಕತ್ವದ ಹೊಣೆಗಾರಿಕೆಯನ್ನು ವಿಶ್ವಾಸದಿಂದ ನನಗೊಪ್ಪಿಸಿರುವ ಆಡಳಿತಾಧಿಕಾರಿ ಶ್ರೀ ಅಶೋಕ ಎನ್. ಚಲವಾದಿ ಹಾಗೂ ರಿಜಿಸ್ಟ್ರಾರ್ ಶ್ರೀ ಎಸ್.ಎಚ್. ಶಿವರುದ್ರಪ್ಪ ಅವರಿಗೆ ಹಾರ್ದಿಕ ನಮನಗಳು.

ಯಕ್ಷವಾಹಿನಿಯ ಕಾರ್ಯದರ್ಶಿ ಶ್ರೀ ನಟರಾಜ ಉಪಾಧ್ಯರು ತುಂಬು ಹೃದಯ ದೊಂದಿಗೆ ಆರು ಪ್ರಸಂಗಗಳ ಅಕ್ಷರ ಜೋಡಣೆಯ ಕಡತಗಳನ್ನು ನಮಗೊಪ್ಪಿಸಿದ್ದಾರೆ. ಹೆಗಡೆಯವರ ಸುಪುತ್ರಿ ಶ್ರೀಮತಿ ಬಕುಳಾ ಹೆಗಡೆ, ಸುಪುತ್ರ ಶ್ರೀ ವಿನಾಯಕ ಹೆಗಡೆಯವರು ಕೃತಿ ಮುದ್ರಣಕ್ಕೆ ಸಂತೋಷದಿಂದ ಅನುಮತಿ ನೀಡಿದ್ದಾರೆ. ಯಕ್ಷ ಪ್ರಸಂಗ ಕೋಶ ಯೋಜನಾ ಸಮೂಹದ ಪರಿಚಯವನ್ನು ಈ ಕೃತಿಯಲ್ಲಿ ನೀಡುತ್ತಿದ್ದೇವೆ.

ಶ್ರೀ ಕಲ್ಲೂರು ನಾಗೇಶ ಅವರ ಆಕೃತಿ ಪ್ರಿಂಟ್ಸ್‌ನ ಶ್ರೀಮತಿ ಭಾರತಿ ಮತ್ತು ಶ್ರೀಮತಿ ಗಾಯತ್ರಿ ಅವರು ಅಲ್ಪಕಾಲದಲ್ಲಿ ಈ ಸಂಪುಟವನ್ನು ಸುಂದರ ಮುಖಪುಟ ದೊಂದಿಗೆ ಸ್ಫುಟಗೊಳಿಸಿದ್ದಾರೆ.

**ಕೃತಜ್ಞತೆಗಳು**

ಅಂತರಜಾಲ ಪ್ರಕಾಶನ ಪ್ರಾಯೋಜಕರು: ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ; ಅಂತರಜಾಲ ಪ್ರತಿ ಬರವಣಿಗೆ: ಎಂ.ಎ. ಹೆಗಡೆ, ನಟರಾಜ ಉಪಾಧ್ಯ; ಅಂತರಜಾಲ ಪ್ರತಿ ತಿದ್ದುಪಡಿ: ಎಂ.ಎ. ಹೆಗಡೆ, ಶ್ರೀಧರ ಡಿ.ಎಸ್., ಗಿಂಡೀಮನೆ ಮೃತ್ಯುಂಜಯ; ಅಂತರಜಾಲ ಪ್ರತಿ ಉತ್ಪಾದನೆ: ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ; ಅಂತರಜಾಲ ಪ್ರತಿ ಪ್ರಕಾಶನ: ರವಿ ಮಡೋಡಿ, ಡಾ. ಪ್ರದೀಪ ಸಾಮಗ, ನಟರಾಜ ಉಪಾಧ್ಯ

**ಕದ್ರಿ ನವನೀತ ಶೆಟ್ಟಿ**

ಸದಸ್ಯರು, ಕರ್ನಾಟಕ ಯಕ್ಷಗಾನ ಅಕಾಡೆಮಿ

## ಪುಟನೋಟ


1.
ತ್ರಿಶಂಕು ಚರಿತ್ರೆ
13

2.
ಸೀತಾ ವಿಯೋಗ
63

3.
ಮರುತ್ ಜನ್ಮ
108

4.
ಗಯ ಯಜ್ಞ
127

5.
ರಾಮಧಾನ್ಯ ಚರಿತ್ರೆ
148

6.
ಖಾಂಡವ ದಹನ
161

# ತ್ರಿಶಂಕು ಚರಿತ್ರೆ

ಪ್ರಸಂಗ ವಿಧ :
ಪೌರಾಣಿಕ

ಆಧಾರ ಗ್ರಂಥ :
ಭಾಗವತ

ಭಾಷೆ :
ಕನ್ನಡ

ಒಟ್ಟು ಪದ್ಯಗಳು:
೨೩೭

# ತ್ರಿಶಂಕು ಚರಿತ್ರೆ

## ಪಾತ್ರಗಳು

**ತ್ರಯ್ಯಾರುಣ** – ಸಾಕೇತದ ರಾಜ

**ಮಂತ್ರಿಗಳು**

**ವಸಿಷ್ಠ**

**ಸತ್ಯವ್ರತ**

**ಕುಮುದ** – ಸತ್ಯವ್ರತನ ಗೆಳೆಯ

**ವಿಮಲೆ** – ವಣಿಜ ಕನ್ಯೆ

**ವಿಂಧ್ಯಕೇತು** – ರಾಕ್ಷಸ

**ಕನಕವರ್ಣ** – ವಣಿಜ, ವಿಮಲೆಯ ತಂದೆ

**ಮದುಮಗ**

**ತಾಳಕೇತು** – ಕಿರಾತ

**ಹೈಮವತಿ** – ಕೌಶಿಕನ ಮಡದಿ

**ಮಧ್ಯಮಕುಮಾರ** – ಕೌಶಿಕನ ಮಗ; ಚಿಕ್ಕ ಹುಡುಗ

**ಚಿತ್ರಕರ್ಮ** – ಮಾಲವದೇಶದ ರಾಜ

**ಮಂತ್ರಿ**

**ಶೂರಸೇನ** – ಚಿತ್ರಕರ್ಮನ ಮಗ

**ಕೌಶಿಕ**

ಸಂದರ್ಭಕ್ಕೆ ತಕ್ಕಂತಹ

**ದೂತರು, ಬ್ರಾಹ್ಮಣರು, ಹಳ್ಳಿಗರು, ಸಖಿಯರು**

# ತ್ರಿಶಂಕು ಚರಿತ್ರೆ

## ಕಥಾ ಸಾರಾಂಶ

ಸಾಕೇತದ ದೊರೆ ತ್ರಯ್ಯಾರುಣ. ಓಲಗಗೊಟ್ಟು ರಾಜ್ಯಾಧಿಕಾರ ವನ್ನು ಮಗನಾದ ಸತ್ಯವ್ರತನಿಗೆ ನೀಡುವ ಬಗೆಗೆ ಮಂತ್ರಿಗಳ ಅಭಿಪ್ರಾಯವನ್ನು ಕೇಳುತ್ತಾನೆ. ಮಂತ್ರಿಗಳು ಕುಮಾರನನ್ನು ಹೊಗಳಿ ತಮ್ಮ ಸಮ್ಮತಿಯನ್ನು ಸೂಚಿಸುತ್ತಾರೆ. ಆದರೆ ಪುರೋಹಿತರಾದ ವಸಿಷ್ಠರು ಮುಹೂರ್ತ ಬಂದಿಲ್ಲವೆಂದೂ ಕೆಲವು ಕಾಲ ತಡೆಯ ಬೇಕೆಂದೂ ಹೇಳುತ್ತಾರೆ. ರಾಜನು ಸಮ್ಮತಿಸುತ್ತಾನೆ. ಸತ್ಯವ್ರತನು ಮಿತ್ರನಾದ ಕುಮುದನ ಜೊತೆಗೆ ವಸಂತದಲ್ಲಿ ವನವಿಹಾರಕ್ಕೆ ಹೊರಡುತ್ತಾನೆ. ಅಲ್ಲಿ ಕುಸುಮಾಪಚಯಕ್ಕೆ ಬಂದ ವಣಿಜಕನ್ಯೆ ವಿಮಲೆಯನ್ನು ಕಂಡು ಮೋಹಗೊಂಡು ಮದುವೆಯಾಗುವಂತೆ ಕೇಳುತ್ತಾನೆ. ಅವಳು ತನ್ನ ತಂದೆಯಾದ ಕನಕವರ್ಣನಲ್ಲಿ ಯಾಚಿಸು ವಂತೆ ಹೇಳುತ್ತಾಳೆ. ಕುಮಾರನು ಸಮ್ಮತಿಸುತ್ತಾನೆ. ಸತ್ಯವ್ರತನು ಮನೆಗೆ ಮರಳುತ್ತಿರುವಾಗ ಹಳ್ಳಿಗರು ರಾಕ್ಷಸನ ಬಾಧೆಯನ್ನು ತೋಡಿಕೊಳ್ಳುತ್ತಾರೆ. ಜನರ ಸಂಕಟವನ್ನು ನಿವಾರಿಸಲು ಸತ್ಯವ್ರತ ಹೊರಡುತ್ತಾನೆ.

ವಿಂಧ್ಯಮೂಲದಲ್ಲಿರುವ ವಿಂಧ್ಯಕೇತುವನ್ನೂ ಅವನ ಬಳಗ ವನ್ನೂ ಸಂಹರಿಸಿ ಬರುವ ಹೊತ್ತಿಗೆ ಎರಡು ತಿಂಗಳು ಕಳೆಯುತ್ತದೆ. ತಿರುಗಿ ಬಂದ ಸತ್ಯವ್ರತ ತಂದೆಗೆ ವಿವರಗಳನ್ನು ತಿಳಿಸಿ ವಿಮಲೆಯನ್ನು ನೆನೆದು ಮಿತ್ರನಾದ ಕುಮುದನನ್ನು ಕನಕವರ್ಣನಲ್ಲಿಗೆ ಕಳುಹುತ್ತಾನೆ. ಅಲ್ಲಿ ಮದುವೆಯ ತಯಾರಿ ನಡೆದಿರುತ್ತದೆ. ಕನಕವರ್ಣ ಸಂಗತಿ ಯನ್ನು ತಿಳಿದು ನಾಳೆಯೇ ಮದುವೆಯೆಂದು ತಿಳಿಸಿ ಮೊದಲೇ ತಿಳಿದಿದ್ದರೆ ಸತ್ಯವ್ರತನಿಗೇ ಮದುವೆ ಮಾಡಿಕೊಡುತ್ತಿದ್ದೆ. ಈಗ ಕೈಮೀರಿದೆ, ಮನ್ನಿಸಬೇಕು ಎಂದು ವಿನಂತಿಸಲು ಹೇಳುತ್ತಾನೆ. ಕುಮುದ ಸತ್ಯವ್ರತನಿಗೆ ವಿಷಯ ತಿಳಿಸುತ್ತಾನೆ.

ಸತ್ಯವ್ರತ ಅವಳನ್ನು ಪಡೆಯುವ ಬಗೆಗೆ ಚಿಂತಿಸಿ ಸಪ್ತಪದಿಯು ಪೂರ್ತಿಯಾಗುವವರೆಗೂ ಪರವಧುವಾಗುವುದಿಲ್ಲ. ಅವಳನ್ನು

ತಂದರೆ ದೋಷವಿಲ್ಲ ಎಂದು ತೀರ್ಮಾನಿಸಿ ಮದುವೆ ಮಂಟಪಕ್ಕೆ ಬರುತ್ತಾನೆ. ವಧುವನ್ನು ಮಂಟಪಕ್ಕೆ ತರುವವರೆಗೆ ಕಾದು ಅವಳನ್ನು ಅಪಹರಿಸಿಕೊಂಡು ಬರುತ್ತಾನೆ. ಎಲ್ಲರ ಎದುರಿಗೇ ಈ ಕೃತ್ಯ ನಡೆಯುತ್ತದೆ. ಮದುಮಗ ಗೋಳಿಡುತ್ತಾನೆ. ಕನಕವರ್ಣ ರಾಜನಲ್ಲಿ ಬಂದು ದೂರುತ್ತಾನೆ. ತ್ರಯ್ಯಾರುಣ ಮಗನನ್ನು ಕರೆಸಿ ವಿಚಾರಿಸಿ ಅವನ ಸಮರ್ಥನೆಯನ್ನೊಪ್ಪದೆ ಹನ್ನೆರಡು ವರ್ಷ ವನದಲ್ಲಿರುವಂತೆ ಶಿಕ್ಷೆಯನ್ನು ವಿಧಿಸಿ ಗುರುಗಳಲ್ಲಿಗೆ ಬಂದು ರಾಜ್ಯ ತ್ಯಾಗದ ಅಪೇಕ್ಷೆಯನ್ನು ವ್ಯಕ್ತಪಡಿಸುತ್ತಾನೆ. ಗುರುಗಳು ಕುಮಾರನದು ತಪ್ಪಿರಲಿಲ್ಲವೆಂದು ತಿಳಿಸುತ್ತಾರೆ. ಆದರೆ ತಂದೆ ಮನಸ್ಸಿಗೆ ನೋವನ್ನುಂಟುಮಾಡಿದ ಅಪರಾಧಕ್ಕಾಗಿ ವನದಲ್ಲಿರಲೆನ್ನುತ್ತಾರೆ. ಎಷ್ಟು ಒತ್ತಾಯಿಸಿದರೂ ರಾಜನು ನಿರ್ಧಾರವನ್ನು ಬದಲಿಸದೆ ಗುರುಗಳಿಗೆ ರಾಜ್ಯದ ಹೊಣೆ ಹೊರಿಸಿ ವನಕ್ಕೆ ಹೋಗುತ್ತಾನೆ. ವನವನ್ನು ಸೇರಿದ ಸತ್ಯವ್ರತ ಪತ್ನಿಯ ಬಾಯಾರಿಕೆಯನ್ನು ನೀಗಿಸಲು ನೀರನ್ನು ಹುಡುಕಿ ಹೋಗಿರುವಾಗ ತಾಲಕೇತುವೆಂಬ ಬೇಡನು ವಿಮಲೆಯನ್ನು ಕಂಡು ಕಾಮಿಸುತ್ತಾನೆ. ಅವಳನ್ನು ಬಲಾತ್ಕರಿಸಲು ಸಿದ್ಧನಾದಾಗ ಸತ್ಯವ್ರತ ಬರುತ್ತಾನೆ. ಅವರ ನಡುವೆ ಯುದ್ಧವಾಗಿ ಬೇಡನು ಸೋತು ಪ್ರಾಣಭಿಕ್ಷೆಯನ್ನು ಬೇಡುತ್ತಾನೆ. ಸತ್ಯವ್ರತನು ಅವನನು ಕ್ಷಮಿಸುತ್ತಾನೆ. ಬೇಡನು ಮುಂದೆಂದಾದರೂ ಉಪಕಾರದ ಋಣ ತೀರಿಸುವೆನೆಂದು ಅಲ್ಲಿಂದ ಹೊರಡುತ್ತಾನೆ.

ಭೀಕರವಾದ ಬರಗಾಲ. ಕೌಶಿಕನು ತಪಸ್ಸಿಗೆ ತೆರಳಿರುವುದರಿಂದ ಅವನ ಮಡದಿ ಹೈಮವತಿ ಮೂವರು ಮಕ್ಕಳನ್ನು ಸಾಕುವುದಕ್ಕಾಗದೆ ಮಧ್ಯಮನ ಕೊರಳಿಗೆ ಹಗ್ಗಕಟ್ಟಿ ಮಾರಲು ಹೊರಡುತ್ತಾಳೆ. ದಾರಿಯಲ್ಲಿ ಸತ್ಯವ್ರತನು ಅವಳನ್ನು ಕಂಡು ತಡೆದು ಅವರನ್ನು ಸಾಕುವ ಹೊಣೆಯನ್ನು ತಾನು ಹೊತ್ತು ಕೊಳ್ಳುತ್ತಾನೆ. ಮಾಲವದೇಶದ ದೊರೆಯಾದ ಚಿತ್ರಕರ್ಮ ಸಾಕೇತದ ಮೇಲೆ ದಾಳಿಯಿಡಲು ಯೋಚಿಸುತ್ತಾನೆ. ಆದರೆ ಅವನ ಮಂತ್ರಿಯು ಮೊದಲು ಭೇದನೀತಿಯಿಂದ ಪ್ರಜೆಗಳ ಮನಸ್ಸನ್ನು ಕೆಡಿಸುವ ಕಾರ್ಯವನ್ನು ಮಾಡಿ ಅನಂತರ ದಾಳಿ ಮಾಡುವುದು ಅನುಕೂಲವೆನ್ನುತ್ತಾನೆ. ರಾಜನು ಅದಕ್ಕೆ ಸಮ್ಮತಿಸಿ ದೂತರನ್ನು ನಿಯೋಜಿಸುತ್ತಾನೆ. ಒಂದು ದಿನ ವಿಮಲೆಯು ಹಸಿವಿನಿಂದ ಸಾಯುವ ಸ್ಥಿತಿಗೆ ಬಂದೆನೆಂದು ಗೋಳಿಡಲು ಸತ್ಯವ್ರತ ಬೇಟೆಗೆ ಹೋಗುತ್ತಾನೆ. ಬೇಟೆ ಸಿಗದೆ

ನಿರಾಶನಾಗಿ ಹಸಿವಿನಿಂದ ತಾನು ಮತ್ತು ಪರಿವಾರದವರ ಸಾವನ್ನು ಕಾಣುವುದಕ್ಕಿಂತ ಅಗ್ನಿ ಪ್ರವೇಶಮಾಡಿ ಪ್ರಾಣವನ್ನು ತ್ಯಜಿಸುವುದೇ ಮೇಲೆಂದು ಸಿದ್ಧನಾದಾಗ ಆಕಳೊಂದು ಕಾಣುತ್ತದೆ. ಅದನ್ನು ಕೊಂದು ತಂದು ತಿನ್ನುತ್ತಿರುವಾಗ ವಸಿಷ್ಠರು ಬರುತ್ತಾರೆ. ಗುರುವಿಗೆ ಸೇರಿದ ಆಕಳನ್ನು ಕೊಂದುದು, ಅದನ್ನು ಶುದ್ಧಗೊಳಿಸದೆ ತಿಂದುದು, ತಂದೆಯ ಅಪ್ರೀತಿಯನ್ನು ಗಳಿಸಿದ್ದು ಈ ಮೂರು ಪಾಪಗಳಿಂದ ನೀನು ತ್ರಿಶಂಕುವಾಗೆಂದು ಶಪಿಸಿ, ಇನ್ನು ಮೇಲೆ ನಿನ್ನ ರಾಜ್ಯದ ಹೊಣೆ ತನಗಿಲ್ಲವೆಂದು ಹೊರಡುತ್ತಾರೆ.

ಚಿತ್ರಕರ್ಮ ಸಾಕೇತವನ್ನು ಗೆದ್ದು ಅಲ್ಲಿಯ ರಾಜನಾದೆನೆಂದು ಸಂತಸಪಡುತ್ತಿರುವಾಗ ಮಂತ್ರಿಯು ಸತ್ಯವ್ರತನು ಅಡವಿಯಲ್ಲಿದ್ದಾನೆ, ಅವನು ಬದುಕಿರುವವರೆಗೂ ಭಯ ತಪ್ಪಿದ್ದಲ್ಲ, ಅವನನ್ನು ಕೊಂದರೆ ಮಾತ್ರ ರಾಜ್ಯವು ಸ್ಥಿರವಾಗುವುದೆಂದು ಹೇಳುತ್ತಾನೆ. ಅದನ್ನೊಪ್ಪಿದ ರಾಜ ವೇಷವನ್ನು ಬದಲಿಸಿಕೊಂಡು ಸತ್ಯವ್ರತನಿರುವಲ್ಲಿಗೆ ಹೋಗುತ್ತಾನೆ. ಆಶ್ರಮದಲ್ಲಿ ವಿಮಲೆಯಿರುತ್ತಾಳೆ. ಅವಳನ್ನು ಕಂಡು ಚಿತ್ರಕರ್ಮ ಮೋಹಗೊಂಡು ತನ್ನನ್ನು ಸೇರುವಂತೆ ಒತ್ತಾಯಿಸುತ್ತಾನೆ. ಅವಳೊಪ್ಪದಿರಲು ಅವಳನ್ನು ಕೆಳಕ್ಕೆ ಕೆಡವಿ ಕುತ್ತಿಗೆಯನ್ನು ಬಲವಾಗಿ ಒತ್ತುತ್ತಿರುವಂತೆ ಸಾಯುತ್ತಾಳೆ. ಇವಳ ವಿರಹದಿಂದ ಸತ್ಯವ್ರತನೂ ಸಾಯುವನೆಂದು ತಿಳಿದು ಪಲಾಯನ ಮಾಡುತ್ತಾನೆ. ಸತ್ಯವ್ರತನು ವಿಮಲೆಯ ಸಾವಿನಿಂದ ಶೋಕಿಸುತ್ತಿರುವಾಗ ಕೌಶಿಕರು ಬರುತ್ತಾರೆ. ಅವರು ಇದೆಲ್ಲ ಚಿತ್ರಕರ್ಮನ ಕೃತ್ಯವೆಂದೂ ಅವನನ್ನು ನಿಗ್ರಹಿಸಿ ರಾಜ್ಯವನ್ನು ಪಡೆಯೆಂದೂ ತಾನು ವಿವಿಧ ಅಸ್ತ್ರಗಳನ್ನು ದಯಪಾಲಿಸುವೆನೆಂದೂ ಹೇಳಿ ಅವನ ಜೊತೆಗೆ ಹೊರಡುತ್ತಾರೆ. ದಾರಿಯಲ್ಲಿ ಕಿರಾತನಾದ ತಾಳಕೇತುವು ತನ್ನ ಸೇನೆಯೊಂದಿಗೆ ಅವರನ್ನು ಸೇರಿಕೊಳ್ಳುತ್ತಾನೆ. ಸಾಕೇತವನ್ನು ವಶಕ್ಕೆ ಪಡೆದುಕೊಳ್ಳಲು ಇವರು ಬಂದ ವಾರ್ತೆಯನ್ನು ದೂತರಿಂದ ತಿಳಿದ ಚಿತ್ರಕೇತು ಯುದ್ಧಕ್ಕೆ ಸಿದ್ಧನಾಗುತ್ತಾನೆ. ಅವನ ಮಗನಾದ ಶೂರಸೇನನು ತಾನು ಯುದ್ಧಕ್ಕೆ ಹೋಗಲು ಅಪ್ಪಣೆ ಪಡೆದು ಕಾಳಗದಲ್ಲಿ ತಾಳಕೇತುವಿನಿಂದ ಮಡಿಯುತ್ತಾನೆ. ಚಿತ್ರಕರ್ಮ ಸತ್ಯವ್ರತರಲ್ಲಿ ಯುದ್ಧ. ಚಿತ್ರಕರ್ಮನ ವಧೆ. ಪಟ್ಟಾಭಿಷೇಕ.

# ತ್ರಿಶಂಕು ಚರಿತ್ರೆ

## ಪ್ರಸಂಗ ಸಾಹಿತ್ಯ

**ಭಾಮಿನಿ**

ಧರಣಿದೇವಿಯ ಮುಕುಟಮಣಿಯಂ ।
ತಿರುವ ಸಾಕೇತಾಖ್ಯ ನಗರದಿ ।
ತರಣಿವಂಶಜರಿಳೆಯ ಪಾಲಿಸುತಿರಲು ಸಂತಸದಿ ॥
ದೊರೆಯೆನಿಸಿ ತ್ರಯ್ಯಾರುಣಾಖ್ಯನು ।
ಪೊರೆವುತಿರ್ದನು ಮಹಿಯ ಧರ್ಮದಿ ।
ತರಳ ಸತ್ಯವ್ರತನು ಶೌರ್ಯದಿ ಸುರರ ಮೀರಿರಲು॥೧॥

**ಮಧ್ಯಮಾವತಿ – ತ್ರಿವುಡೆ**

ಜನಪ ತ್ರಯ್ಯಾರುಣನು ಸಭೆಯೊಳು । ದಿನಪನಂದದಿ ಬೆಳಗುತ ॥
ಕನಕಸಿಂಹಾಸನದಿ ಮಂಡಿಸೆ ।
ಜನಗಳೆಲ್ಲರು ಮಣಿಯಲು ॥ ಮನ್ನಿಸುತ್ತ ॥೨॥
ಸುತ್ತ ಸೇರಿದ ಮಿತ್ರರೆಲ್ಲರ । ನರ್ತಿಯಿಂದ ನಿರೀಕ್ಷಿಸಿ ॥
ಧಾತ್ರಿಪಾಲನಮಾತ್ಯರನು ನೋ ।
ಡುತ್ತ ಪೇಳಿದನವರಲಿ ॥ ಚಿತ್ತದೂಲವ ॥೩॥ ೩ ॥

**ಜಂಜೂಟಿ – ಅಷ್ಟ**

ಮಂತ್ರಿಗಳೆಲ್ಲರು ಕೇಳಿ । ಕಾರ್ಯ ।
ತಂತ್ರವ ತಿಳಿದೀಗ ಪೇಳಿ ॥
ಸಂತಸದೊಳು ಮಹಿಕಾಂತೆಯ ನಾಳಿದೆ ॥
ಕಂತುಜನಕನನಂತ ಕರುಣೆಯ ।
ನಾಂತು ಬಾಳಿದೆನಿಂತು ಕಾಲವ ॥೧॥

ಬಾಳುವೆಯಸ್ಥಿರವೆಂದು । ನಾನು ।
ತಾಳಿದೆ ನಿಶ್ಚಯವಿಂದು ॥
ಕಾಲಪಾಶಕೆ ಸಿಕ್ಕು ಗೋಳುಗೊಳ್ಳುವ ಮುನ್ನ ॥
ಬಾಲಗೀ ಜಗದೂಳಿಗವ ದಯ ।
ಪಾಲಿಸುವೆ ನೀವ್ ಪೇಳಿರಭಿಮತ ॥೨॥ ೫ ॥

**ಕಂದ ಪದ್ಯ**

ಕಂದಂಗೀವೆಂ ಪಟ್ಟವ ।
ನೆಂದಾಜನಪತಿ ಪೇಳಲ್ಕೇಳುತಲಾಗಳ್ ॥
ಸಂದೇಹವಿದೇಕೆನುತಾ ।
ನಂದದಿ ಕುವರನ ಗುಣಮಂ ಪೊಗಳುತ್ತೆಂದರ್ ॥೧॥ ೬ ॥

**ಕೇದಾರಗೌಳ – ಝಂಪೆ**

ಚಿತ್ತವಿಸು ಭೂವರೇಣ್ಯ । ಸತ್ಯವ್ರತ ।
ನುತ್ತವನು ಜಗದಿ ಮಾನ್ಯ ॥
ಪುತ್ರನಾಗಿರಲು ನಿನಗೆ । ಚಿತ್ತದಲಿ ।
ಮತ್ತೆ ಯೋಚನೆಯೆ ಹೀಗೆ ॥೧॥
ಎಲ್ಲರಂಥವನಲ್ಲವೈ । ಶೌರ್ಯದಲಿ ।
ಫುಲ್ಲನಾಭಗೆ ಸಮನಲೈ ॥
ಬಲ್ಲಿದನು ಶಾಸ್ತ್ರಗಳಲಿ । ಪೋಲುವರ ।
ದೆಲ್ಲಿಹರು ಗುಣಗಳಲ್ಲಿ ॥೨॥ .
ಅಂಥವನು ದೊರೆಯಾಗಲು । ನಲಿವರೈ ।
ಸಂತಸದೊಳೀ ಪ್ರಜೆಗಳು ॥
ಚಿಂತಿಸುವುದೇಕೆ ಜೀಯ । ಒಡೆತನವ ।
ನಂತರಿಸದೀವುದಯ್ಯ ॥೩॥
ಎಂದ ಮಾತನು ಕೇಳುತ । ಭೂಕಾಂತ ।
ನಂದು ಗುರುವನು ನೋಡುತ ॥
ಚಂದದೊಳು ನಿಮ್ಮಮತವ । ತಿಳುಹಿರೆನ ।
ಲೆಂದ ಮುನಿವರ್ಯ ನಗುತ ॥೪॥ ೧೦ ॥

### ಸುರುಟಿ – ಏಕ

ಕೇಳು ಭೂಪ ನೀನು । ಸಜ್ಜನ । ಪಾಲ ಪೇಳ್ವುದೇನು ॥
ಬಾಲನು ಸದ್ಗುಣ ಶೀಲನು ನಿಶ್ಚಯ ।
ಪೋಲುವ ನಿರ್ಜರ ಪಾಲನ ಶೌರ್ಯದಿ ॥೧॥
ಹರಯದೊಳಿಹನವನು । ರಾಜ್ಯವ ।
ಪೊರೆಯುವ ಹೊಣೆಗಳನು ॥
ಹೊರಿಸಲುನೀನವಸರ ಪಡಲೇತಕೆ ।
ಧರಿಸುವ ಕಾಲವು ಬರಲಿದೆ ಮುಂದಕೆ ॥೨॥
ಆವರೆಗೀಧರೆಯ । ಪಾಲಿಸು ।
ಭೂವರ ಬಿಡುವ್ಯಥೆಯ ॥
ದೇವ ಪ್ರಸಾದವೆ ಜೀವನವೆಂಬುದ ।
ಭಾವಿಸಿ ರಾಜ್ಯವ ಕಾವುದು ಸಂತತ ॥೩॥ ೧೩ ॥

### ಭಾಮಿನಿ

ಮುನಿಪ ನಿನ್ನಭಿಮತವ ನಾನವ ।
ಗಣಿಸೆ ಸದ್ಗತಿ ದೊರೆವುದುಂಟೇ ।
ಜನಪತಿತ್ವವ ನೀವೆ ಕಾಲದಿ ತನುಜಗೆನ್ನುತಲಿಂ ॥
ಘನ ತಪೋನಿಧಿಗೆರಗಿ ಕಳುಹುತ ।
ಮನದ ಚಿಂತೆಯ ಬಿಟ್ಟು ಭೂಪನು ।
ವನಧಿಪರಿಮಿತ ಧರಣಿಪಾಲಕನೆನಿಸಿ ಮೆರೆದಿರಲು ॥೧॥ ೧೪ ॥

### ಸೌರಾಷ್ಟ್ರ – ತ್ರಿವುಡೆ

ಇತ್ತ ಸತ್ಯವ್ರತನದೊಂದಿನ । ಮಿತ್ರ ಕುಮುದನ ಕೂಡಿಯಾಡುತ ।
ಚಿತ್ತದಲಿ ಸಂತಸವ ತಾಳ್ದುದ । ಬಿತ್ತರಿಸಿದ ॥೧॥
ಕುಮುದ ಕೇಳೈ ಎನ್ನ ಮಾನಸ ।
ಕುಮುದವರಳಿದೆ ಸಮದವೇರಿದೆ ।
ಕಮಲ ಸಖ ಸಹಕುಮುದ ಮಿತ್ರಾ । ಗಮವ ತಾಳ್ದು ॥೨॥
ಎತ್ತ ನೋಡಿದಡತ್ತ ಚಲುವನು । ಹೊತ್ತು ನಲಿವಳು ಧಾತ್ರಿಯಂಗನೆ ।
ಸುತ್ತಿವನವನು ಹೊತ್ತ ನೀಗಲು । ತೆತ್ತೆ ಮನವ ॥೩॥

ಮಿತ್ರ ಕೇಳೈಮತ್ತ ಮಾಧವ ।
ಮುತ್ತಿಹನು ಬಲವೆತ್ತು ಧರಣಿಯೆ ।
ಚಿತ್ರಮಯ ಸುಮಪತ್ರಿಗಳನೆಸೆ । ವುತ್ತಲಿಹನು ॥೪॥
ಎಂದ ಮಿತ್ರನ ಮಾತಿಗೊಲಿಯುತ ।
ಲೊಂದು ತುರಗವನೇರಿ ಮುದದೊಳ ।
ಗಂದು ಪೊರಟನು ವನವಿಹಾರಕೆ । ಚಂದದಿಂದ ॥೫॥ ೧೯ ॥

## ಕಂದ ಪದ್ಯ

ಬಂದಾ ವನಮಂ ನೋಡುತ ।
ವೃಂದಾರ ಕೋಪಮ ತಲೆಯ ತೂಗುತಲಾಗಳ್ ॥
ಮಂದಸ್ಮಿತಮಂ  ಬೀರುವ ।
ಸೌಂದರ್ಯೈಕ್ಕವನತನಾಗುತಲಿಂತೆಂದ ॥೧॥ ೨೦ ॥

## ಶಂಕರಾಭರಣ – ಅಷ್ಟ

ಕಂಡೆಯ । ಮಿತ್ರ । ಕಂಡೆಯ ॥ಪ॥
ಕಂಡೆಯ ವನದ ಸಂಭ್ರಮವ ।
ನೆಲೆ । ಗೊಂಡಿಹ ಚೈತ್ರ ವಿಭ್ರಮವ ॥ ಸೂರೆ ।
ಗೊಂಡಿತು ಲಕ್ಷ್ಮಿಯ ಭಂಡಾರಗಳನೆಲ್ಲ ।
ಮಿಂಡೆದ್ದ ಸೌಂದರ್ಯ ಖಂಡಿತವಿದ ನೀನು ॥ ಕಂಡೆಯ ॥ಅ.ಪ॥
ಅರಳಿದ ಸುಮಗಳ ನೋಡಿ । ಆಹಾ ।
ಮೊರೆಯುವ ದುಂಬಿಯಗಾಡಿ ॥ ಇತ್ತ ।
ಸರಿಯಾರು ತನಗೆಂದು ಹಾಡಿ ।
ನಮ್ಮ ಕರೆವುದು ಪಿಕ ಮನಮಾಡಿ ॥ ಪುಷ್ಪ ।
ಶರಗಳ ಕೊರತೆಯ ಹರಿಸುವ ಮನದಿಂದ ।
ಸ್ಮರ ತಾನೆ ಸುರಿಸಿದ ಧರೆಗಿಂಥ ಸಿರಿಯನ್ನು ॥ ಕಂಡೆಯ
॥೧॥ ೨೧ ॥

## ವಾರ್ಧಕ

ಫುಲ್ಲಾರವಿಂದಮುಖಿ ಕುಂದಕುಟ್ಮಲರದನೆ ।
ಮಲ್ಲಿಕಾಸ್ಮಿತರುಚಿರೆ ಚಂಪಕಸುನಾಸೆಯೀ ।
ಸಲ್ಲಲಿತ ಶ್ಯಾಮಾಲತಾಬಾಹು ರಂಭೋರು ಕಲ್ಹಾರನೇತ್ರೆಯಿವಳು ॥
ನಲ್ಲನನು ಕೈಮಾಡಿ ಕರೆಯುವಳು ಹಸಿರುಟ್ಟು ।
ಚಲ್ವಾದವನವೆಂಬ ಕಾಮಿನಿಯು ಸಾರಿಕೆಯ ।
ಮೆಲ್ಲುಲಿಯಲೀಗೆನ್ನ ಸಾರಮಂ ಹೀರು ನೀನುಲ್ಲಾಸದೊಳಗೆನ್ನುತ
॥೧॥ ೨೨ ॥

## ಭೈರವಿ – ಝಂಪೆ

ತಿಳಿಗೊಳದೊಳೀಜಾಡಿ । ತಳಿರಮೇಲುರುಳಾಡಿ ।
ನೆಲದಮೇಲೋಡಾಡಿ । ನಲಿನಲಿದುಪಾಡಿ ॥೧॥
ಸುಳಿದು ಸುತ್ತುತಲಿಂದು । ಕಳೆವೆ ಕಾಲವನೆಂದು ।
ತಲೆದೂಗಿ ಮನದಂದು । ಬಳಸಿ ನಡೆವಂದು ॥೨॥ ೨೪ ॥

## ಭಾಮಿನಿ

ಕುಮುದ ಬಂದಿಹನೆಂದು ತಿಳಿದಾ ।
ಕಮಲ ಮಿತ್ರನು ಕೋಪದಿಂದಲಿ ।
ಕಮರಿಸುವನೀತನುವ ಸಖ ವಿಶ್ರಮಿಸು ಬಾರೆನಲು ॥
ಅಮಮ ಭೂಸುರನುದರ ಕುದಿದುದೆ ।
ಶಮನಗೊಳಿಸುವುದುಚಿತವೆನುತಲಿ ।
ರಮಿಸಿ ಪಾಥೇಯವನು ಭುಂಜಿಸಿ ಶ್ರಮವ ಕಳೆದಿರಲು ॥೧॥ ೨೫ ॥

## ಶಂಕರಾಭರಣ – ತ್ರಿವುಡೆ

ವಣಿಜ ಕನ್ನಿಕೆ ವಿಮಲೆಯೆಂಬಳು । ಮನದ ಬೇಸರ ಕಳೆಯಲು ।
ವನಿತೆಯರ ನೆರವಿಯಲಿ ನಡೆದುಪ । ವನವ ಸೇರಿ ॥೧॥
ಕುಸುಮಸಮಯದೊಳಸಮಬಾಣನ ।
ಹೊಸಕಣೆಯವೊಲು ಭಾಮಿನಿ ॥
ಎಸೆವ ಸುಮಗಳ ವಿಸರವರಸುತ । ಕುಸುಮನೇತ್ರ ॥೨॥ ೨೬ ॥

**ಬೇಗಡೆ – ಆದಿ**

ಬಂದಳು ವನವಿಹಾರಕೆ ಮನಮಾಡಿ ।
ಸುಂದರಿ ವಿಮಲೆಯು ಸಖಿಯರ ಕೂಡಿ ॥
ಮಂದಗತಿಗಳಿಂದಲೆಣ್ದೆಸೆ ನೋಡಿ ।
ಕುಂದ ಮಂದಾರಾದಿ ಸುಮಗಳ ಸೂಡಿ ॥
ಮಂದಹಾಸದಿ ಚಂದ್ರಬಿಂಬವ । ಹಿಂದುಗಳೆದಾನಂದದಿಂದಲಿ ।
ನಿಂದಿಸುತಲರವಿಂದ ಸಖನನು । ಸುಂದರಾಂಗಿಯು ಚಂದದಿಂದಲಿ।
ಮುಂದುವರಿದೈತಂದು ಬೇಗದಿ ॥೧॥ ೨೮ ॥

**ಭಾಮಿನಿ**

ಕಾಮಿನೀಮಣಿ ಭ್ರಮರಕುಂತಳೆ । ಸೋಮವದನೆಯು ವಾಮನೇತ್ರೆಯು ।
ಕೋಮಲಾಂಗಿಯು ಕಾಮವಾರಣ ಗಾಮಿನಿಯು ಬರಲು ॥
ಭಾಮಿನಿಯ ವಿಭ್ರಮವ ಕಾಣುತ । ಗೋಮಿನಿಪಸುತ ಕಾಮಬಾಣವು ।
ರೋಮ ರೋಮದಿನಾಂಟೆ ಸಖನಿಗೆ ಶ್ಯಾಮೆಯಳ ತೋರ್ದ
॥೧॥ ೨೯ ॥

**ಕಾಪಿ – ಅಷ್ಟ**

ಬಾರಿತ್ತ ಗೆಳೆಯನೆ ಬೇಗ । ಬಹ ।
ನಾರಿಯ ಚಲುವನ್ನು ಸವಿಯುವುದೀಗ ॥
ನೀರೆಯ ಸೃಜಿಸುವ ಮನದಿ । ಆ ।
ವಾರಿಜಭವ ವೃದ್ಧನಾದನಾದನು ದಿಟದಿ ॥೧॥
ಭೂಮಿಯ ಸೌಂದರ್ಯವೆಲ್ಲ । ಬಂದು ।
ಭಾಮೆಯ ಮೈ ಸೇರಿತಿಂದು ಸುಳ್ಳಲ್ಲ ॥
ಕಾಮನು ಶಿವನಿಂದಲಳಿಯೆ । ಮಂದ ।
ಗಾಮಿನಿ ರತಿಯಿಲ್ಲಿ ಬಂದಳು ಸರಿಯೆ ॥೨॥
ಈ ವನಿತೆಯ ಮೊಗ ನೋಡಿ । ಶಶಿ ।
ಧಾವಿಸಿ ಗಗನವ ಸೇರಿದ ಖೋಡಿ ॥
ಭಾವಕಿ ಪಾದಕ್ಕೆ ಮಣಿದು । ಸೇರಿ ।
ತಾವರೆ ಧನ್ಯತೆ ಪಡೆದಿಹುದಿಂದು ॥೩॥ ೩೦ ॥

ನಾಕದ ಸೌಂದರ್ಯಸಾರ । ಬಂ ।
ದೀಕೆಯ ಕಿರುನಡು ಸೇರಲು ಪೂರ ॥
ಸಾಕಷ್ಟು ಸ್ಥಳವಿಲ್ಲಾದಾಗ । ಹೊರ ।
ನೂಕಿದ ಚಲುವನ್ನೆ ಕುಚವೆಂಬರೀಗ ॥೪॥ ೩೩ ॥
ಅಂಗದೊಳಂಗವ ಬೆಸೆದು । ಚೆಲ್ವ ।
ತಿಂಗಳ ಬೆಳಕಿನೊಳ್ತಾಪವ ಮರೆದು ॥
ಶೃಂಗಾರ ಭವನದಿ ನಲಿದು । ನಾರಿ ।
ಸಂಗದಿ ಸ್ವರ್ಗವ ಸೃಜಿಸುವೆನೊಲಿದು ॥೫॥ ೩೪ ॥

**ಭಾಮಿನಿ**

ಸುಂದರಾಂಗಿಯ ಸಂಗಸೌಖ್ಯವ ।
ಹೊಂದಿ ನಲಿವುದೆ ಪೂರ್ವ ಪುಣ್ಯವು ।
ಹಿಂದುಗಳೆಯದೆ ನುಡಿಸಿ ನೋಡುವುದೆಂದು ನಿಶ್ಚಯಿಸಿ ॥
ಮುಂದುವರಿದೈ ತಂದು ವನಿತೆಯ ।
ಮುಂದೆನಿಲುತಾ ಸತ್ಯವ್ರತನರ ।
ವಿಂದಶರದುರಿಯಿಂದ ಬಳಲುತಲೆಂದುನಾಕೆಯಲಿ ॥೧॥ ೩೫ ॥

**ನವರೋಜು – ಏಕ**

ಯಾರೇ ವಾರಣಯಾನೆ । ಪಿತ ।
ನಾರೆ ಕೋಕಿಲಗಾನೆ ॥
ಚಾರುಕಟಾಕ್ಷದ ಕೂರಸಿಯಿಂದಸು ।
ಹೀರುತನಡೆಯುವ ಕಾರಣವೇನಿದೆ ॥೧॥ ೩೬ ॥

**ಜಂಜೂಟಿ – ರೂಪಕ**

ವಣಿಜಶ್ರೇಷ್ಠ ಕನಕವರ್ಣನೆನಗೆ ತಾತನು ।
ತನಯೆ ವಿಮಲೆ ಸುಮವರಸಿ ವನಕೆ ಬಂದೆನು ॥
ಜನಪಕುವರನಂತೆ ತೋರ್ಪೆಯನಗೆ ನಿಜವನು ।
ಮುನಿಯದೀಗ ತಿಳುಹು ಬೇಗ ಮನೆಗೆ ಪೋಪೆನು ॥೧॥ ೩೭ ॥

**ನವರೋಜು – ಏಕ**

ಪೃಥ್ವಿಪ ಜಾತನು ಕಾಣೆ । ನಾ । ಸತ್ಯವ್ರತಾಖ್ಯನು ಜಾಣೆ ॥
ಚೈತ್ರ ಮನೋಜ್ಞತೆ ಚಿತ್ತವ ಸೆಳೆಯಲು ।
ಇತ್ತಲು ಬಂದಿಹೆ ಸತ್ವರೆಯಿಂದಲಿ ॥೧॥ ೩೮ ॥

**ಜಂಜೂಟಿ – ರೂಪಕ**

ಗಣ್ಯಪುರುಷ ನಿನ್ನ ಕಂಡು ಧನ್ಯಳಾದೆನು ।
ಪುಣ್ಯಫಲದಿ ಭೇಟಿಯಾಯಿತಿನ್ನು ಪೋಪೆನು ॥
ಅನ್ಯನೊಡನೆ ಕಾಲ ಕಳೆಯಲೆನ್ನ ಸಖಿಯರು ।
ಚೆನ್ನವಾಯಿತೆನುತ ಹಾಸ್ಯವನ್ನು ಮಾಳ್ವರು ॥೧॥ ೩೯ ॥

**ಸಾರಂಗ – ಅಷ್ಟ**

ಪದುಮಲೋಚನೆ ಲಾಲಿಸು । ಪೋಗುವುದೇಕೆ ।
ಹೃದಯದಿ ನೀ ನೆಲಸು ॥
ಮದನನ ಶರದಿಂದಲೆದೆಗೆಟ್ಟೆ ನೋಡೆನ್ನ ।
ಅಧರದ ಸುಧೆಯಿಂದ ಬದುಕಿಸು ಬಾ ಬೇಗ ॥೧॥ ೪೦ ॥

**ಕಾಂಬೋಧಿ – ಅಷ್ಟ**

ಭೂಪತಿ ತರಳ ಕೇಳು । ಎನ್ನೊಳಗೇತ ।
ಕೀಪರಿ ನುಡಿವೆ ತಾಳು ॥
ಕೋಪಗೊಳದಿರು ಕನ್ಯೆ ನಾ ನಿನ । ಗೋಪಳಪ್ಪೆನು ಪಿತನು ಮತದಲಿ।
ಚಾಪಲತ್ವದಿ ನಡೆವುದುಚಿತವೆ ।
ತಾಪಗೊಳದನುಮತಿಸಬೇಕೆನೆ ॥ ೧ ॥ ೪೧ ॥

**ಭಾಮಿನಿ**

ಬಾಲೆ ಕೇಳೀ ಹರಣವುಳಿಯದು । ಖೂಳ ಮನ್ಮಥನಿಂದ ಲೆನ್ನಯ ।
ತಾಳಲೆಂತೀವಿರಹದುರಿಯನು ನಾಳೆ ಬರವನಕ ।
ಶೀಲೆ ನಿನ್ನಭಿಮತವ ಮೀರೆನು । ಬಾಳಗೆಳೆಯನ ಕಳುಹುವೆನುನಿ ।
ನ್ನಾಲಯಕೆ ಬೆಳಗಿನಲಿ ಪಿತನಲಿ ಕೇಳಲೆಂದೆನುತ ॥ ೧ ॥ ೪೨ ॥

### ಕಾಂಭೋದಿ – ಝಂಪೆ

ಅರವಿಂದಮುಖಿಯ ಬೇಸರದಿಂದ ಬೀಳ್ಕೊಟ್ಟು ।
ಅರಸು ಕುವರನು ಮುಂದೆ ಬರಲು ॥
ಭರದಿಂದ ಭಯವೆತ್ತು ಬರುತಿಹರ ಕಾಣುತ್ತ ।
ಬೆರಗಿನೊಳು ಬೆಸಗೊಂಡನವರ ॥೧॥
ಎಲ್ಲಿಂದ ಬರುವಾದುದೆಲ್ಲಿಗೈದುವಿರಿಗ ।
ತಲ್ಲಣಿಸುತಿಹುದೇತಕೆಂದು ॥
ಸೊಲ್ಲಿಸುವುದೆನಗೆಂದು ಮಲ್ಲ ಸಾಹಸಿ ಕೇಳೆ ।
ಹಳ್ಳಿಗರು ಪೇಳ್ದರವಗಂದು ॥೨॥ ೪೪ ॥

### ಮುಖಾರಿ – ಏಕ

ಮಾನವೇಶ್ವರ ಲಾಲಿಸಯ್ಯ । ಬೆದರಿದೆವೆಮ್ಮ ।
ಪ್ರಾಣಕಾವುದು ಮಹರಾಯ ॥
ದಾನವನೋರ್ವನು ತಾಣಕೆನುಗ್ಗುತ ।
ಹಾನಿಯಗೈದನು ನಾನಾ ಪರಿಯಲಿ ।
ತ್ರಾಣದೊಳವಗೆಣೆಗಾಣೆವು ಜಗದೊಳು ।
ದೀನರು ನಾವಪಮಾನದಿ ನೊಂದೆವು ॥೧॥
ಅಂಗನೆಯರ ಮೊಗನೋಡಿ । ಮನೆಗಳವೊಕ್ಕು ।
ಭಂಗಪಡಿಸುವ ನಾಖೋಡಿ ॥
ತೆಂಗಿನ ಗಾತ್ರದ ಕೆಂಗಣ್ಣನು ಬಾ ।
ಯಂಗಳ ತೋರಿಸಿ ಹಿಂಗದ ಹಸಿವಿಲಿ ।
ನುಂಗಿದ ಕೆಲವರ ಕಂಗಾಲಾದೆವು ।
ಮುಂಗಾಣೆವು ಮನದಿಂಗಿತವೇನ್ನೈ ॥೨॥ ೪೬ ॥

### ವಾರ್ಧಕ

ಏನಿದೇನಾಶ್ಚರ್ಯ ಮಾನವೇಂದ್ರನ ಮಹಿಗೆ ।
ದಾನವಂ ನುಗ್ಗಿದನೆ ಹಾನಿಯಂ ಗೈದಪನೆ ।
ತ್ರಾಣಮಂ ನೋಳ್ಪೆ ನಾನಂಜದಿರಿ ನೀವೆಂದು ದೀನರನು
ಸಂತೈಸುತ ॥

ಜಾನಪದರಂ ಕಳುಹಿ ಕ್ಷೋಣಿಪಾಲಗೆ ತಿಳುಹು ।
ತಾ ನಿಶಾಟನ ವಧೆಗೆ ಪಿತನಾಜ್ಞೆಯಂ ಕೊಂಡು ।
ಸೇನೆಯಂ ಕೂಡುತ್ತ ನಡೆದನತಿ ವೇಗದಿಂ ಮಾನನಿಧಿ ಸತ್ಯವ್ರತನು
॥೧॥ ೪೭ ॥

**ಸೌರಾಷ್ಟ್ರ – ತ್ರಿವುಡೆ**

ವಿಂಧ್ಯಮೂಲನಿವಾಸಿಯೆನಿಸುವ । ವಿಂಧ್ಯಕೇತುವದೆಂಬ ದುರುಳನು।
ಬಂಧುಬಳಗವ ಕೂಡಿ ಜನಗಳ । ತಿಂದು ತೇಗಿ ॥೧ ॥
ಸಿಕ್ಕಿದರ ಮುರಿದಿಕ್ಕಿ ಮಾಂಸವ । ಮುಕ್ಕಿ ರುಧಿರವನೆಕ್ಕಿ ಮನೆಗಳ ।
ಹೊಕ್ಕಿರಿದು ಬಲು ಸೊಕ್ಕಿನಿಂದಿರೆ । ರಕ್ಕಸೇಂದ್ರ ॥ ೨ ॥
ಧನುವ ಪಿಡಿದೈತರುವ ಕುವರನ ।
ಕಿನಿಸಿನೊಳಗೀಕ್ಷಿಸಲು ದನುಜನು ।
ಇನಿತು ಧೈರ್ಯದಿ ಬರುವ ಮನುಜನ । ಘನವದೇನು
॥ ೩ ॥ ೫೦ ॥

**ಕಂದ**

ಎಂದಾಲೋಚಿಸಿ ರಕ್ಕಸ ।
ಬಾಂಧವ ವರ್ಗವನೊಡಗೂಡುತಲೈ ತಂದು ॥
ನಿಂದಿಹ ಕುವರನನೀಕ್ಷಿಸಿ ।
ವೃಂದಾರಕ ವೈರಿಯತಿ ಮುನಿಸಿಂ ನುಡಿಸಿದಂ ॥೧॥ ೫೧ ॥

**ಘಂಟಾರವ – ಅಷ್ಟ**

ಯಾರೋ ಬಂದವ ಭಾರಿಯ ಧನು ಹೊತ್ತು ॥
ಪೋರ ನೀನವಿಚಾರದಿಂ ಮದ ।
ವೇರಿ ಬಂದಿಹುದೇಕೆಲಾ ॥೧॥ ೫೨ ॥

**ಶಂಕರಾಭರಣ – ಮಟ್ಟೆ**

ಮಿತ್ರ ಕುಲಜ ಧಾತ್ರಿಪಾಲ । ಪುತ್ರ ಸತ್ಯವ್ರತನು ನಿನಗೆ ।
ಮೃತ್ಯು ವಧುವ ಹೊತ್ತು ತರಲಿ । ಕಿತ್ತ ಬಂದಿಹೆ ॥೧॥ ೫೩ ॥

## ಘಂಟಾರವ – ಅಷ್ಟ

ಬಿಡು ಬಿಡು ನಿನ್ನಯ ಬಡಿವಾರಗಳನೆಲ್ಲ ॥
ಧಡಿಗತನದಲಿ ತಡೆದರೆನ್ನನು ।
ಕೆಡುವೆ ನೋಡೆಲೊ ಹುಡುಗನೆ ॥೧॥ ೫೪ ॥

## ಶಂಕರಾಭರಣ – ಮಟ್ಟೆ

ಬಲ್ಲೆ ನೀನು ಹಳ್ಳಿಗರನು । ಕೊಲ್ಲುತಿರುವುದೆಲ್ಲ ನಾನು ।
ಕೊಲ್ಲಲೆಂದು ಬಿಲ್ಲ ಪಿಡಿದೆ । ನಿಲ್ಲು ಬೇಗನೆ ॥೧॥ ೫೫ ॥

## ಭಾಮಿನಿ

ಭರಿತ ರೋಷದಿ ಸೆಣಸಲೀರ್ವರು ।
ದೊರೆ ಕುಮಾರನ ಶರದ ಘಾತಿಗೆ ।
ದುರಳನಳುಕುತ ಸರಿದ ಕಾಡಿಗೆ ಧರಿಸಿ ಮಾಯೆಯನು ॥
ಅರಸಿ ಬಳಲಿದನೆರಡು ಮಾಸವ ।
ನರಸು ಕುವರನು ಬಳಿಕದನುಜರ ।
ತಂದು ಪುರವನು ಸೇರಿ ಬೇಗದೊಳರಸಗೆರಗಿದನು ॥೧॥ ೫೬ ॥

## ಮಧುಮಾಧವಿ – ತ್ರಿವುಡೆ

ಮಣಿದ ಕುವರನ ಜನಪನೆತ್ತುತ । ಮನದಿ ಹರ್ಷವ ತಾಳುತಪ್ಪುತ ।
ದಣಿದೆಯಾ ನೀನೆನ್ನ ಮುದ್ದಿನ । ಮಣಿಯೆ ಬಾಬಾರೆನ್ನುತ ॥೧॥
ಬಂದೆಯಾ ನೀನಿಂದು ಖಳನನು । ಕೊಂದೆಯಾ ಬಲುಸಹಸದಿಂದಲಿ।
ನೊಂದೆಯಾ ಶರಘಾತದಿಂದಲಿ । ಕಂದ ಪೇಳ್ಕೆ ಶೀಘ್ರದಿ ॥೨॥
ತಾತ ಮೂರ್ಜಗಖ್ಯಾತ ರವಿಕುಲ । ಜಾತ ಪುಣ್ಯದ ವ್ರಾತ ಬಲದಲಿ।
ಪಾತಕಿಯ ಶರಘಾತದಿಂದಿನ । ಜಾತನಲ್ಲಿಗೆ ಕಳುಹಿದೆ ॥೩॥
ಮಗನೆ ನಿನ್ನಯ ಸುಗುಣದಿಂದರ । ಸುಗಳ ಮದ್ಯದಿ ವಿಗಡನೆನಿಸೀ ।
ಖಗಜ ಕೀರ್ತಿಯ ಗಗನಕೇರಿಸಿ । ಸುಗತಿ ಪಡೆಯೆನೆ ಕುವರನು
॥೪॥ ೬೦ ॥

## ಸುರುಟಿ – ಏಕ

ತಂದೆಯ ಬೀಳ್ಕೊಂಡು । ತನ್ನಯ । ಮಂದಿರಕ್ಕೈತಂದು ॥
ಚಂದಿರಮುಖಿಯನು ಹೊಂದುವ ಚಿಂತೆಯೊ ।
ಳಂದಾ ಕುಮುದನಿಗೆಂದನು ದೈನ್ಯದಿ ॥೧॥
ಕೇಳು ಕುಮುದ ನೀನು । ಪೇಳುವೆ ।
ಬಾಳ ಗೆಳೆಯ ನಾನು ॥
ನಾಳೆಯೆನುತ ನೀ ಕಾಲವ ಕಳೆಯದೆ ।
ಊಳಿಗ ಗೈದೀ ಬಾಳನು ರಕ್ಷಿಸು ॥೨॥
ಯಾತಕಿಂಥ ಮಾತ । ಎನ್ನೊಳು ।
ಸೋತು ನುಡಿವೆ ಖ್ಯಾತ ॥
ಭೂತಳ ಪತಿಸುತಗೇತರ ಚಿಂತೆಯು ।
ನೀತಿಳುಹಿಸಲದನೋತುಗೈವೆ ನಾ ॥೩॥
ವಣಿಜಕನ್ನೆ ವಿಮಲೆ । ಎನ್ನಯ । ಮನವಕದ್ದ ತರಳೆ ॥
ಜನಕನ ಮತದೊಳಗನುಕೂಲೆಯು
ಸತಿಯನಗಾಗುವಳದನನುಗೊಳಿಸೈನಿಲ ॥೪॥
ಬಿಡು ಚಿಂತೆಯ ನೀನು । ಗೆಳೆಯನೆ ।
ಒಡನೈದುವೆ ನಾನು ॥
ಹುಡುಗಿಯ ತಂದೆಯನೊಡ ಬಡಿಸುತಲತಿ ।
ಸಡಗರದಿಂ ಸುತೆ ಕೊಡುವಂತೆಸಗುವೆ ॥೫॥ ೬೫ ॥

## ದ್ವಿಪದಿ

ಸತ್ಯವ್ರತನಿಗೆ ಧೈರ್ಯವೆತ್ತಿರಲು ಪೇಳಿ ।
ಭೃತ್ಯನೈತಂದನಾ ವಿತ್ತಪತಿಯಲ್ಲಿ ॥೧॥
ವಣಿಜಭವನದ ಸಿರಿಯ ಕಂಡು ಬೆರಗಾಗಿ ।
ಎಣೆಗಾಣೆನಿವಗೆಂದು ಮಣಿದು ತಲೆದೂಗಿ ॥೨॥
ದ್ವಾರಗಳ ಬಳಸಿರುವ ತೋರಣಗಳನ್ನು ।
ನಾರಿಯರು ಸಂಭ್ರಮದಿ ಸೇರಿರುವುದನ್ನು ॥೩॥
ಕಾಣುತಚ್ಚರಿಪಡುತ ತಾನು ಮುನ್ನಡೆದ ।
ಮಾಣಿಕ್ಯವರ್ಣನಿಗೆ ಜಾಣ ತಾ ಮಣಿದ ॥೪॥ ೬೬ ॥

**ಸಾಂಗತ್ಯ – ರೂಪಕ**

ನಿಂದಿಹ ಕುಮುದನ ಚಂದದೊಳೀಕ್ಷಿಸಿ ।
ಮಂದಹಾಸವ ಬೀರುತೆಂದ ॥
ಬಂದವನ್ಯಾರಯ್ಯ ಮಂದಿರವನು ಸೇರಿ ।
ದಂದವನರುಹೆನಲೆಂದ ॥೧॥
ಭೂಮೀಶಸುತನಿಗೆ ಪ್ರೇಮದ ಸಖ ನಾನು ।
ನಾಮವು ಕುಮುದನೆಂದು ॥
ಧೀಮಂತ ವರ್ತಕಧಾಮಕೆ ಪೋಗೆಂದು ।
ನೇಮಿಸಲೈತಂದೆನಿಂದು ॥೨॥
ಸತ್ಯವ್ರತಾಖ್ಯನ ಮಿತ್ರನೆ ಬಾರೆಂದು । ಅತ್ಯಾದರದಿ ಪೀಠವಿತ್ತು ॥
ಭೃತ್ಯನ ಸೇವೆಯಗತ್ಯವದೇನೆಂದು ।
ಸತ್ಯದಿ ಪೇಳ್ವುದೀ ಹೊತ್ತು ॥೩॥ ೭೨ ॥

**ಬೇಗಡೆ – ಅಷ್ಟ**

ಸಾರ್ಥವಾಹನೆ ಪ್ರಾರ್ಥನೆಯ ಕೇಳು । ನಾನಿಲ್ಲಿ ಬಂದಿಹೆ ।
ಪಾರ್ಥಿವನು ಕನ್ಯಾರ್ಥಿಯಾಗಿರಲು ॥
ಕೀರ್ತಿಯುತವೈಕರ್ತನನು ವನ । ವರ್ತಿಯಾಗೆ ಸುಮಾರ್ಥಿಯಾಗಿಹ।
ವರ್ತಕಾತ್ಮಜೆ ಕೂರ್ತು ಬರುವ ಮು ।
ಹೂರ್ತದಲಿ ಬಲುಧೂರ್ತನಾಗಿಹ ॥೧॥
ಚಿತ್ತಜನು ಧನುವೆತ್ತಿ ಶರವೆಸೆಯೆ । ಸತ್ಕುಲಜ ತಾಳಿದ ।
ಚಿತ್ತವ್ಯಥೆಯನು ಬಿತ್ತರಿಸಲರಿಯೆ॥
ಎತ್ತನೋಡಿದಡತ್ತ ಕಾಂಬನು । ಮತ್ತ ಕಾಶಿನಿ ಚಿತ್ರವನುತಾ ।
ವಿತ್ತಪತಿ ತವಪುತ್ರಿಯಳ ಭೂ ।
ಪೋತ್ತಮಗೆ ಕೈಯೆತ್ತಿ ಕೊಡುವುದು॥೨॥ ೭೪ ॥

**ಕಲ್ಯಾಣಿ – ಅಷ್ಟ**

ಕೇಳಯ್ಯ ಕುಮುದನೆ ನೀನು । ಭೂ । ಪಾಲನ ಸುತನಂಥರನ್ನು ॥
ಪೋಲುವವರಾರುಂಟು ಜಗದಿ । ಶ್ರೀ ।
ಲೋಲಗೆ ಸಮನೆಂಬೆ ದಿಟದಿ ॥೧॥

ಬಾಲೆಯನೀಯುವ ಪುಣ್ಯ । ತನ್ನ ।
ಪಾಲಿಗೆ ಬಂದವ ಧನ್ಯ ॥
ಕಾಲವು ಮೀರಿಹುದಲ್ಲ । ವಿಧಿ ।
ಹಾಳುಗೈದನು ಕಾರ್ಯವೆಲ್ಲ॥೨॥ ೭೬ ॥

**ವಾರ್ಧಕ**

ತಿಳಿಯದಾದೆನು ಮೊದಲೆ ಬಳಿಕ ನಿಶ್ಚಯಗೈದೆ ।
ಬೆಳಗಿನಲಿ ಪರಿಣಯವು ನಳಿನಲೋಚನೆಗೆಂದು।
ತಿಳುಹುವುದು ಸಂಗತಿಯ ಪದಕೆರಗಿ ಬೇಡುವೆನು ಮುಳಿಯ
ಬೇಡೆನುತಲವನ ॥
ಸುಲಲಿತಾಂಗಿಯ ಮರೆತು ಬಾಳೆಂದು ಭಿನ್ನೈಸು ।
ಚಲುವ ನೀ ಪೋಗೆಂದು ವರ್ತಕನು ಪೇಳಲ್ಕೆ ।
ತಲೆವಾಗಿ ಚಿಂತಿಸುತ ನಡೆತಂದು ಕುಮುದ ಭೂಲಲಾಮನ
ಸುತಗರುಹಲು ॥೧॥ ೭೭ ॥

**ಸೌರಾಷ್ಟ್ರ – ತ್ರಿವುಡೆ**

ಬಂದೆಯೇನೈ ಕುಮುದ ವರ್ತಕ ।
ನೆಂದ ಮಾತನು ಪೇಳು ಶೀಘ್ರದಿ।
ಸುಂದರಾಂಗನೆ ನಿನ್ನ ಮೊಗ ಸಿರಿ । ಕುಂದಿತ್ಯಾಕೆ ॥೧॥
ಕೇಳು ಗೆಳೆಯನೆ ವೇಳೆ ಮಿಂಚಿದ ।
ಮೇಲೆ ಮಾಡುವುದೇನು ವಿಮಲೆಗೆ ।
ನಾಳೆ ಲಗ್ನವಗೈವ ವಣಿಜನು । ಪೇಳಲೇನು ॥೨॥ ೭೮ ॥

**ಮಾರವಿ – ಏಕ**

ಅರರೇ ವರ್ತಕ ಧರಣಿಪ ಸುತನೆಂ । ದರಿಯದೆ ಗರ್ವದಲಿ ॥
ತರಳೆಯ ಕೊಡೆನೆಂದೊರೆದನೆ ಮದವನು । ಮುರಿಯುವೆ ಕ್ಷಣದಲ್ಲಿ
॥೧॥
ದುಷ್ಟನ ಕರಗಳ ಕಟ್ಟುತ ಸುತೆಯನು । ಥಟ್ಟನೆ ನಾ ತಹೆನು ॥
ನಿಟ್ಟೆಲುಗಳ ಮುರಿದೊಟ್ಟುವೆ ಕಾಣಲಿ । ಸಿಟ್ಟಿನ ಫಲವನ್ನು ॥೨॥

ಪೊಡವಿಯೊಳೆನ್ನನು ತಡೆಯುವರ್ಯಾರ್ರೈ। ಸಡಗರದಿಂದೀಗ ॥
ನಡೆಯತ ತರುವೆನು ಹುಡಗಿಯನೆಂದವ ।
ಗುಡುಗಲು ಸಖನಾಗ ॥೩॥ ೮೨ ॥

**ಸಾರಂಗ – ತ್ರಿವುಡೆ**

ಯಾತಕೀ ಪರಿಖಾತಿಯು । ಮಾನವ ಶ್ರೇಷ್ಠ ।
ಗೇತಕೀಪರಿ ಖಾತಿಯು ॥ ಪ ॥
ಯಾತಕೀಪರಿಖಾತಿ ಭೂಪತಿ ।
ಜಾತ ವವನಲಿ ಖ್ಯಾತ ಜಗದೊಳು ।
ನೀತಿ ನಿಯಮ ವಿಘಾತಗೈವುದು ।
ರೀತಿಯೇನ್ನೈ ತಿಳಿದು ಪೇಳ್ವುದು ॥ಅ.ಪ॥
ತರಳೆಗೆ ಲಗ್ನವನು । ನಿನ್ನಭಿಮತ ।
ವರಿಯದ ವರ್ತಕನು। ನಿಶ್ಚಯಗೈದು ।
ಪರಿಪಾಲಿಸುವುದೆಂದನು । ಪೇಳುವುದೇನು ।
ಸರಿಯೆ ಪರವಧುವನ್ನು ತರುವುದು ।
ಪರಿಯೆ ರವಿಕುಲ ಜಾತನಿಂಗಿದು ।
ದೊರೆಯ ನೀತಿಯ ಮುರಿದ ಮೇಲೇ ।
ನರಿಯೆ ಲೋಕಕೆ ದಾರಿ ತೋರ್ಪರ । ಯಾತಕೀ ॥೧॥ ೮೩ ॥

**ಭಾಮಿನಿ**

ಕುಮುದ ವಚನದ ಬಲೆಗೆ ಸಿಲುಕುತ ।
ಭ್ರಮಿಸುತೆಂದನು ತನ್ನ ಪ್ರಿಯೆಯೀ ।
ಗ ಮಮ ಪರವಧುವಾದಳೇನ ಕ್ರಮವೆ ತರಲವಳ ॥
ರಮಣಿಯನು ಮರೆತಿನ್ನು ಬಾಳುವ । ಶ್ರಮವದೇತಕೆ ಸುಡುಸುಡೆನ್ನುತ।
ಕಮರಿದನು ಮನಮರುಗಿ ಕುವರನು ಕಮಲಮುಖಿಗಾಗಿ
॥ ೧ ॥ ೮೪ ॥

**ಭೈರವಿ – ಝಂಪೆ**

ಏನ ಮಾಡುವೆ ನಿನ್ನು । ಮೀನಾಂಕನೆಂಬವನು ।
ಕೇಣಮಿಲ್ಲದೆ ತಾನು । ಗೋಣನರಿಯುವನು ॥೧॥
ಅನ್ಯ ವಧುವನು ತರಲು । ಗಣ್ಯ ವಂಶಕೆ ಸಿಡಿಲು ।
ಕನ್ಯೆಯನು ಮರೆತಿರಲು ಶೂನ್ಯವೀ ಬಾಳು ॥೨॥
ಮರೆಯಲೇ ಪ್ರೀತಿಯನು । ತೊರೆಯಲೇ ನೀತಿಯನು ।
ಹರಿಯಲೇ ಪ್ರಾಣವನು । ಸರಿಯಾವುದಿನ್ನು ॥೩॥ ೮೭ ॥

**ವಾರ್ಧಕ**

ಪರಿಣಯದ ವಿಧಿಗಳೊಳು ಸಪ್ತಪದಿಯತಿ ಶ್ರೇಷ್ಠ ।
ಪರಿಪೂರ್ತಿಯಾಗದಿರೆ ಪರವಧುವು ತಾನಲ್ಲ ।
ಧರಣಿಪಂ ಬಲದಿಂದ ಕನ್ನೆಯಂ ತಂದರಂದು ದುರಿತವೆನಿಸದು ತಿಳಿಯಲು ।
ಸರಿಯಾದ ಕಾಲಮನ್ನಾರಯ್ದು ವರ್ತಕನ ।
ತರಳೆಯನ್ನೆಳೆ ತಂದು ಹರುಷಮಂ ತಳೆವೆನೆಂ ।
ದಿರಲು ಪೂರ್ವಾಚಲದಿ ರವಿಯುದಯಿಸಲ್ಕಂಡು ಭರದಿಂದಲೈತಂದನು ॥೧॥ ೮೮ ॥

**ಕೇದಾರಗೌಳ – ಅಷ್ಟ**

ಮದುಮಗ ದಿಬ್ಬಣವೊಡಗೂಡಿ ಬರಲಾಗ ।
ಮುದದಿಂದ ವರ್ತಕನು ॥
ಪದುಳದಿಂದುಪಚಾರಗೈವುತ್ತಲಿರುವಾಗ ।
ಸದನಕ್ಕೆ ನಡೆ ತಂದನು ॥೧॥
ಪೃಥ್ವಿಪಜಾತನ ವಿತ್ತಪ ಕಾಣುತ್ತ ಚಿತ್ತದಿ ಯೋಚಿಸಿದ ॥
ಮತ್ತಿವನೈತಂದ ಕೃತ್ಯವ ತಿಳಿಯಲು । ಹತ್ತಿರ ಬಂದೆರಗಿ ॥೨॥
ದೊರೆಕುಮಾರಕ ನಿನ್ನ ಬರವಿಂದಲೆನಗೀಗ ।
ಪರಿತೋಷವಾಗಿಹುದು ॥
ತರಳೆಯ ಲಗ್ನಕ್ಕೆ ಸರಿಸಮಯದಿ ಬಂದೆ ।
ಹಿರಿದಾದ ಭಾಗ್ಯವಿದು ॥೩॥

ವರ್ತಕ ನಿನ್ನಯ ಪುತ್ರಿಯ ಪರಿಣಯ । ವಾರ್ತೆಯನುತ್ಸಾಹದಿ ॥
ಕೀರ್ತಿಸೆ ಜನಗಳು ನೇತ್ರ ಕುತೂಹಲ । ಪೂರ್ತಿಗಾನ್ಯೈ ತಂದೆನು
॥೪॥ ೯೨ ॥

**ವಾರ್ಧಕ**

ಸನ್ನುತನೆ ನೀಬಂದುದೆನ್ನ ಪುಣ್ಯವುಯೆನುತ ।
ಮನ್ನಣೆಯಗೈವುತಿರೆ ಸುಮುಹೂರ್ತವೊದಗಿದುದು ।
ಕನ್ನೆಯಂಮಂಟಪಕೆ ತನ್ನಿರೆಂದವಸರದಿ ಬಿನ್ನವಿಸೆ ಭೂದಿವಿಜರು ॥
ಹೊನ್ನಿನಂದಣದೊಳಗೆ ಹೆಣ್ಣುಗಳ ಬಳಸಿನಲಿ ।
ಬಿನ್ನಾಣದೊಳು ತಂದು ಮಂಟಪದಿ ಕೂಡ್ರಿಸಲು ।
ಇನ್ನಪ್ಪ ವಿಧಿಗಳಂ ಪೂರೈಸಗೊಡೆನೆನುತ ತನ್ನ ಮನದೊಳು
ಯೋಚಿಸಿ ॥೧॥ ೯೩ ॥

**ಪುನ್ನಾಗ ತೋಡಿ – ಏಕ**

ಸಾರಿ ಮಂಟಪವನು ಬೇಗದಿ । ನಾರಿ ಕರವ ಪಿಡಿದು ತೋಷದಿ ।
ಸೇರಿದವರ ನೋಡಿ ನೃಪಸುತ । ದೂರಪೋಗಿರೆಂದು ಪೇಳುತ ॥೧॥
ಎನ್ನ ಮನವ ಕದ್ದದೋಷಕೆ । ಹೆಣ್ಣನೊಯ್ವೆನಿಂದು ನಿಲಯಕೆ ॥
ಕನ್ನೆ ತೋಳಬಂದಿಯಾಗಲಿ । ಇನ್ನು ಹರಸಿರೆನ್ನ ಮುದದಲಿ ॥೨॥
ಸೊಕ್ಕಿನಿಂದ ಸೆಣಸ ಬಂದರೆ । ಘಕ್ಕನವರ ಶಿರವನರಿವರೆ ॥
ಕಕ್ಕುಲಾತಿಯಿಲ್ಲ ನೋಡಿರಿ । ಒಕ್ಕಣಿಸುವ ಮಾತ ಕೇಳಿರಿ ॥೩॥ ೯೪ ॥

**ಭಾಮಿನಿ**

ಖ್ಯಾತ ರವಿಕುಲಜಾತ ಕ್ಷತ್ರಿಯ ।
ನೀತಿಯಂತೀ ಕನ್ಯೆಯನು ಮನ ।
ಸೋತು ಕರೆದೊಯ್ಯುವೆನು ನಿಲಯಕೆ ಭೀತಿ ತಾಳದಿರಿ ॥
ಪ್ರೀತಿಯಲಿ ಪರಿಪಾಲಿಸುವೆನೆಂ ।
ದಾತುರದಿ ರಥವೇರಿ ಸುತ್ತುವ ।
ಜಾತೆಯನು ಸೆಳೆದೊಯ್ಯೆ ಮದುಮಗ ಘಾತವಾಯ್ತೆನುತ
॥೧॥ ೯೫ ॥

**ಶಂಕರಾಭರಣ – ಅಷ್ಟ**

ಹೋಯಿತು । ಮುದ್ದಿನ ಗಿಣಿಯದು ಹಾರಿ । ಹೋಯಿತು ॥ಪ॥
ಹೋಯಿತು ಪಂಜರ ಬಿಟ್ಟು । ಎನ ।
ಗಾಯಾಸಗಳ ತಂದು ಕೊಟ್ಟು ॥ ಮತ್ತೆ ।
ಸಾಯುವ ತನಕವು ನೋಯುವುದಾಯಿತು।
ಕಾಯಜ ಸುಖವಿನ್ನು ಮಾಯವಾಯ್ತಯ್ಯಯ್ಯೊ ॥೧॥
ಮಾವನೆಂಬವನೊಬ್ಬ ಕೋಣ । ಸುತೆ ।
ಯೀವೆನೆನ್ನುತಲೆನ್ನ ಗೋಣ । ತಾನು ।
ಹೇವವಿಲ್ಲದೆ ಕೊಯ್ವ । ಸಾವಿರ ಜನರಿದ್ದ ।
ರಾವನು ಕಾಯ್ವನು ಜೀವನ ಸಾಕಿನ್ನು ॥ ಹೋಯಿತು ॥೨॥
ಬಾಸಿಂಗಗಳನೆಲ್ಲ ಕಟ್ಟಿ । ಲಗ್ನ । ಗೈಸುವೆನೆಂದ್ಯಲ್ಲೊ ಸೆಟ್ಟಿ । ದುಡ್ಡು ।
ಕಾಸನ್ನು ಕೊಂಡೆನಗಾಸೆಯ ತೋರಿಸಿ ।
ಮೋಸವ ಮಾಡಿದೆ ಹೇಸಿಗೆಯಿಲ್ಲದೆ ॥ ಹೋಯಿತು ॥೩॥ ೧೦೦ ॥

**ವಾರ್ಧಕ**

ಎಂದು ಬಾಯ್ಬಿಡುತಿರುವ ಮದುಮಗನ ಕಾಣುತ್ತ ।
ಬಂದಿರುವ ಜನರೆಲ್ಲ ತಮ್ಮೊಳಗೆ ನಗುತಿರಲು ।
ಸಂದರ್ಭವನು ತಿಳಿದು ಪರಿಹಾಸ್ಯಮಂ ತಡೆವೆನೆಂದೆಣಿಸಿ
ಕನಕವರ್ಣ ॥
ನಂದನೆಯ ನೊಯ್ದುವನ ಭಂಗಪಡಿಸದೆ ಬಿಡಲು ।
ಮುಂದಿನ್ನು ನಗರದೊಳು ಬಾಳ್ವಪರಿಯಿಲ್ಲೆಂದು ।
ಮಂದಿಯೊಳು ಪೇಳುತ್ತ ನಡೆತಂದು ಭೂಪನಲಿ
ಸಂದುದೆಲ್ಲವನರಹಲು ॥೧॥ ೧೦೧ ॥

**ತೋಡಿ – ತ್ರಿವುಡೆ**

ಜನಪ ತ್ರಯ್ಯಾರುಣನು ಪೀಠದಲಿ ।
ಘನದಿ ಮಂಡಿಸೆ ಬಂದು ಬೇಗದಲಿ ।
ಕನಕವರ್ಣನು ಮಣಿಯೆ ಪಾದದಲಿ ।
ಮನುಕುಲೇಶನು ನುಡಿದನವನಲ್ಲಿ ॥೧॥

ಏನು ವರ್ತಕ ನೀನು ಬಂದಿಹುದು ।
ಆನನದ ಸಿರಿಯೇಕೆ ಕಂದಿಹುದು ।
ಹಾನಿ ಯಾರಿಂದಾಯಿತೆಂದೆನಲು ।
ಮಾನವೇಶಗೆ ಪೇಳ್ದ ಬೇಗದೊಳು ॥೨॥ ೧೦೩ ॥

**ಪುನ್ನಾಗ – ಅಷ್ಟ**

ಮಾನವೇಶ್ವರ ಕೇಳು ಪೇಳುವ ನುಡಿಯ ।
ಮಾನವಂತರಿಗಿದು ಕಾಲವಲ್ಲಯ್ಯ ॥
ಹೀನರು ಹೆಚ್ಚಿದ ಮೇಲೆಂತು ಜೀಯ ।
ನೀನಾಳ್ವ ಮಹಿಯೊಳು ಬಾಳುವುದಯ್ಯ ॥೧॥
ಬಾಲೆಯ ಲಗ್ನವಗಯ್ಯಲಿಕೆಂದು ।
ಆಲಯ ಶೃಂಗಾರವೆಸಗಿರಲಿಂದು ॥
ಭೂಲೋಲ ನಿನ್ನಯ ಜಾತನು ಸುತೆಯ ।
ಖೂಳತನದೊಳೊಯ್ದನೇನೆಂಬೆ ವ್ಯಥೆಯ ॥೨॥ ೧೦೪ ॥

**ಭೈರವಿ ಏಕ**

ವಣಿಜನ ನುಡಿಗಳ ಕೇಳಿ । ಆ ।
ಜನಪತಿ ಕ್ರೋಧವ ತಾಳಿ ॥
ತನಯನು ಪರವಧು ತಂದು । ಸ ।
ದ್ವಿನಯವ ಮಾರಿದನಿಂದು ॥।೧॥
ಧರ್ಮ ಪ್ರವರ್ತಕನೀತ । ದುಷ್ ।
ಕರ್ಮದಿ ಮಾಡಿದ ಘಾತ ॥
ಮರ್ಮವ ತಿಳಿದಿರಲಿನ್ನು ಈ ।
ಧರ್ಮದ ಜಾತನೆ ತಾನು ॥೨॥
ಅಟ್ಟುವೆ ವನಕಿವನನ್ನು । ತಾ ।
ನಟ್ಟುದ ನುಣಲಾ ಸೂನು ॥
ಕಟ್ಟುತ ಕರಗಳ ಬೇಗ । ಆ ।
ದುಷ್ಟನನೆಳತುಹುದೀಗ ॥೩॥ ೧೦೮ ॥

**ಭಾಮಿನಿ**

ಭೂತಳೇಶನ ವಚನವಾಲಿಸಿ । ದೂತರಾಕ್ಷಣ ಬಳಿಗೆ ಧಾವಿಸಿ ।
ಜಾತನನ್ನೆಳತಂದು ನಿಲ್ಲಿಸೆ ಖಾತಿಯಿಂದಾಗ ॥
ಪಾತಕಿಯೆ ತೊಲ ತೊಲಗು ವಂಶದ ।
ಖ್ಯಾತಿಯನು ನೀ ಕಳೆದೆ ಹೀನತೆ ।
ಗೋತು ವಣಿಜನ ಸುತೆಯ ತಂದಿಹುದೇತಕುಸುರೆನಲು
॥೧॥ ೧೦೯ ॥

**ಶಂಕರಾಭರಣ – ತ್ರಿವುಡೆ**

ತಾತ ನಿನ್ನಯ ಚರಣವನಜಕೆ । ಜಾತವಂದನೆಗೈವೆನು ॥
ಮಾತನಾಲಿಸು ಪ್ರೀತಿಯಿಂದಲಿ । ಖಾತಿಯೇತಕೆಯೆನ್ನೊಳು ॥೧॥
ವನದಿ ವರ್ತಕತನಯೆ ಕಾಣಲು । ಮನವನಿತ್ತೆನು ವಿಮಲೆಗೆ ।
ದನುಜಹರಣಕೆ ಧಾವಿಸಿದೆ ಬಲು ।
ದಿನವು ಜಾರಿತು ಮರಳಲು ॥೨॥
ವಿತ್ತಪತಿಯನು ಕೇಳಲಟ್ಟಿದೆ । ಮಿತ್ರ ಕುಮುದನ ನಿನ್ನೆಗೆ ॥
ಪುತ್ರಿಯನು ಕೊಡೆನೆಂದು ಪೇಳಲು । ಹೊತ್ತು ತಂದಿಹೆನಿಂದಿಗೆ ॥೩॥
ಸಪ್ತಪದಿ ವಿಧಿಪೂರ್ವಲಗ್ನ ಸ । ಮಾಪ್ತವಾಗದು ತಿಳಿಯಲು ॥
ಪ್ರಾಪ್ತವಪ್ಪುದೆ ದೋಷ ಕ್ಷತ್ರಿಯ ।
ಗೊಪ್ಪುವಂದದಿ ಚರಿಸಲು ॥೪॥ ೧೧೩॥

**ಮಾರವಿ – ಏಕ**

ಎಲವೊ ಪಾತಕಿಗಳಹುವುದೇತಕೆ । ಕಲಕಿದೆ ಶಾಂತಿಯನು ॥
ಲಲನೆಯ ಮದದಿಂದೆಳೆ ತಂದೀಗಲು ।
ತಿಳುಹುವೆ ಧರ್ಮವನು ॥೧॥
ವರ್ತಕ ತರುಣಿಗೆ ಕೀರ್ತಿಯ ಮಾರಿದೆ । ಬರ್ತ್ಸನೆ ತಪ್ಪುವುದೆ ॥
ವರ್ತನೆಯಿಂ ಜನರರ್ತಿಯ ಕಳೆದಾ । ಧೂರ್ತನು ನೀನಾದೆ ॥೨॥
ಪುಂಡನೆ ಕೇಳೈ ದಂಡನೆ ವಿಧಿಸುವೆ । ಖಂಡಿತ ತಾಳಿದನು ॥
ಅಂಡಲೆವುತವನಖಂಡದಿ ಕಳೆ ಜನ । ಕಂಡರಿಯದ ತೆರನು
॥೩॥ ೧೧೬॥

## ಬಿಲಹರಿ – ಅಷ್ಟ

ತಂದೆ ನಿನ್ನಾಜ್ಞೆಯ ಶಿರದೊಳು ಧರಿಸುತ್ತ ।
ವನವಾಸ ಕೈದುವೆ ನಾನು ॥
ಮುಂದೆ ನಿನ್ನಯ ಪಾದ ಕಾಣುವ ಯೋಗವು ।
ಮಂದ ಭಾಗ್ಯನಿಗುಂಟೆ ಪೇಳ ಬೇಕಿನ್ನು ॥೧॥
ಈರಾರು ವತ್ಸರ ವಾರಣ್ಯದೊಳಗಿದ್ದು ।
ಬಾರಯ್ಯ ಸಾಕೇತನಗರಿಗೆ ನೀನು ॥
ಮಾರ ಪಿತನ ಪದಭಜನೆಯಗೈವುತ್ತ ।
ಭೂರಿಪಾತಕ ಪರಿಹರಿಸಿ ಕೊಳ್ಳಿನ್ನ ॥೨॥
ತಾತನ ಪದವನಜಾತಕ್ಕೆ ಮಣಿಯುತ್ತ ।
ಮಾತನು ಪಾಲಿಸಿ ಬರುವೆತಾನೆಂದು ॥
ಜಾತನು ಪೋಗಲು ಭಂತಳೆ ಪತಿಯತ್ತ ।
ಭೂತಳ ಕೊರಗಿದ ಶೋಕದಿ ನೊಂದು ॥೩॥ ೧೧೯ ॥

## ಭಾಮಿನಿ

ಪಿತನ ಬಿಳಿಯಿಂ ಪೊರಟು ವಣಿಜನ ।
ಸುತೆಗೆ ಸಂಗತಿಯರುಹಲಾಕೆಯು ।
ಪತಿಯದೆಲ್ಲಿಹನದುವೆ ಸ್ವರ್ಗವು ಸತಿಗೆ ಲೋಕದಲಿ ॥
ವ್ಯಥೆಯ ತಾಳದೆ ಬರ್ಪನೆನೆ ಸನು ।
ಮತಿಸಿ ಕುವರನು ಪೊರಡುತಿರಲಾ ।
ಪೃಥಿವಿ ಪತಿ ಕಳವಳಿಸಿ ಕೊರಗಿದ ಸುತವಿಯೋಗದಲಿ ॥೧॥ ೧೨೦॥

## ಸಾಂಗತ್ಯ – ರೂಪಕ

ಹೆಚ್ಚಿತು ಶೋಕವು ಬೆಚ್ಚಿದ ಮೋಹದಿ ।
ನಚ್ಚಿನ ಕುವರನ ನೆನೆದು ॥
ನಿಚ್ಚಟ ಕೋಪದಿ ಕಚ್ಚಿದ ತುಟಿಗಳ ।
ತುಚ್ಛನು ಸುತನೆಂದು ಹಳಿದು ॥೧॥
ಕುಲಗೇಡಿ ಮಗನಿಂದು ಕಳೆದನು ಮಾನವ ।
ತಲೆಯೆತ್ತಿ ಬಾಳುವುದೆಂತು ॥

ನೆಲದಾಣ್ಮನಾಗಿದ್ದು ಫಲವೇನು ಮಾಡಿದ್ದು ।
ಜಲದೊಳಗಿನ ಹೋಮವಾಯ್ತು ॥೨॥
ಪೊಡವಿಯನಾಳುವ ಗೊಡವೆಯು ಸಾಕಿನ್ನು ।
ನಡೆಯುವೆನಡವಿಗೆ ನಾನು ॥
ಒಡಲನ್ನುನೀಗುತ್ತ ಪಡೆವೆನು ಶಾಂತಿಯ ।
ಜಡಜನಾಭನೆ ಗತಿಯಿನ್ನು ॥೩॥ ೧೨೩ ॥

**ಭಾಮಿನಿ**

ಎಂದು ನಿಶ್ಚಯಗೈದು ಭೂಪನು ।
ಬಂದು ಗುರುವಿನ ಚರಣಕೆರಗುತ ।
ನಿಂದು ಸಂಸ್ತುತಿಗೈವುತಿರಲವಗೆಂದ ಮುನಿಪತಿಯು ॥
ಕಂದ ನಿನ್ನಯ ವದನಕಾಂತಿಯು ।
ಕಂದಿಹುದು ಬಲು ವಿಸ್ಮಯಾಸ್ಪದ ।
ವಿಂದು ನೀನವಸರದಿ ಧಾವಿಸಿದಂದವೇನೆನಲು ॥೧॥೧೨೪ ॥

**ಮಧುಮಾಧವಿ – ಆದಿ**

ಮುನಿನಾಥ ಕೇಳಯ್ಯ ಬಂದಿರ್ಪ ವ್ಯಥೆಯ ।
ತನಯನ ಕತದಿಂದ ನೊಂದೆನು ಜೀಯ ॥
ವಣಿಜಸುತೆಯ ಲಗ್ನಕಾಲಕ್ಕೆ ಪೋಗಿ ।
ವನಿತೆಯನೆಳತಂದ ಪಾಪಕ್ಕೆ ಭಾಗಿ ॥೧॥
ಪರವಧುಗೆಳಸಿದ ಪಾತಕಿಯೆಂದು ।
ತೊರೆದಿಂದು ಕಳುಹಿದೆ ವನವಾಸಕೆಂದು ॥
ಪರಿತಾಪಕ್ಕೊಳಗಾದೆ ಸಂಸಾರ ಸಾಕು ।
ಹರಿಪದ ಭಜಿಸಲಿಕಾಣತಿ ಬೇಕು ॥೨॥ ೧೨೬ ॥

**ಜಂಗಲ್ – ಏಕ**

ಪರವಧುವೆಂತವಳರುಹೈ ದೊರೆ ನೀ । ಚರಿಸದೆ ಸಪ್ತಪದಿ ॥
ಮರುಳುತನದಿ ಸುತನಿರವನು ತಿಳಿಯದೆ ।
ತೊರೆವುದು ಯೋಗ್ಯವೆ ಪೇಳ್ ದಿಟದಿ ॥೧॥

ವರ್ತಕಸುತೆಯನು ಪುತ್ರನು ತಂದರೆ । ಕೀರ್ತಿಗೆ ಕುಂದಹುದೆ ॥
ಕ್ಷತ್ರಿಯ ಪಂಥದಿ ವರ್ತಿಸಿದವಗೆ ಕ ।
ದರ್ಥನವೆಂಬುದು ಬರಬಹುದೆ ॥೨॥ ೧೨೮ ॥

**ಸಾವೇರಿ ಆದಿ**

ಅಹುದೇ ನಿಮ್ಮಯ ಮಾತು । ಕಂದನ ಬಾಳಿ ।
ಗಹಿತ ನಾನಾದೆನೆಯಿಂತು ॥
ಮಹಿಪತಿ ಪದದಿಂದ ಶಿಕ್ಷೆಯನಿತ್ತೆನು ।
ವಿಹಿತವು ಮುಂದೇನು ಪೇಳಬೇಕೆನಗಿನ್ನು ॥೧॥ ೧೨೯ ॥

**ಆರ್ಯಾಸವಾಯಿ – ಏಕ**

ಆದರೆ ಪಿತನಿಗೆ ವೇದನೆಯಿತ್ತಪ । ರಾಧವು ಸುತನನು ಬಾಧಿಪುದು॥
ಸಾಧಿಸಿ ತಪದೊಳು ಶೋಧಿಸಿ ದುರಿತವ ।
ಮೇದಿನಿಪತಿಯವ ನಾದಪುದು ॥೧॥ ೧೩೦ ॥

**ತುಜಾವಂತು – ಝಂಪೆ**

ಎಷ್ಟು ಪೇಳಿದರೇನು ಸೃಷ್ಟಿಯೊಡೆತನ ಸಾಕು ।
ಸೃಷ್ಟೀಶ ಪಾದದೊಳಗಿಷ್ಟವಾಯ್ತಿನ್ನು ॥
ಶ್ರೇಷ್ಠ ನೀನನುಮತಿಯ ಕೊಟ್ಟು ಕಳುಹುವುದೆನಗೆ ।
ಥಟ್ಟನೈದುವೆ ತಪಕೆ ದಟ್ಟಡವಿಯಡೆಗೆ ॥೧॥ ೧೩೧ ॥

**ವಾರ್ಧಕ**

ರೂಢಿಪತಿ ನೀನಿಂತು ವೈರಾಗ್ಯ ತಾಳಿರಲು ।
ಆಡಿ ಫಲವೇನಿನ್ನು ನ್ಯಾಸವೆನ್ನುತ ತಿಳಿದು ।
ನಾಡ ಕಾಪಾಡುವೆನು ತಪದಿಂದ ಹರಿಪದವ ಕೂಡು ನೀನೆಂದು ಪೇಳೆ ॥
ಬೇಡಿಯನುಮತಿ ಪಡೆದು ಮುನಿಪತಿಯ ಬೀಳ್ಕೊಂಡು ।
ಬೀಡಿನೆಡೆಗೈತಂದು ಪ್ರಜೆಗಳಂ ಸಂತೈಸಿ ।
ಬೇಡಿದರಿಗೊಲಿದಿತ್ತು ಬೇಕಾದ ವಸ್ತುಗಳ ಕಾಡಿನೆಡೆಯನು ಸೇರಲು
॥೧॥ ೧೩೨ ॥

**ಕೇದಾರಗೌಳ – ಅಷ್ಟ**

ತಂದೆಯ ಕೋಪಕ್ಕೆ ನಂದನ ಗುರಿಯಾಗಿ ।
ಮಂದಿರವನು ತೊರೆದು ॥
ಸುಂದರಿ ಸತಿಗೂಡಿ ಬಂದನು ವನಕಾಗಿ ।
ಇಂದಿರೇಶನ ನೆನೆದು ॥೧॥
ಧಾರಣಿಪತಿಸುತ ನಾರುಬಟ್ಟೆಯನುಟ್ಟು । ಭೂರಿಶೋಕವ ತಾಳುತ ॥
ವಾರಿಜಭವನನ್ನು ದೂರುತ್ತ ನಡೆದನು । ಕಾರಡವಿಯ ಕಡೆಗೆ ॥೨॥
ತರಣಿಯ ತಾಪಕ್ಕೆ ತರುಣಿಯು ಬಳಲುತ್ತ ।
ಧರಣಿಯ ಬಳಿ ಸೇರಲು ॥
ಹರಹರಾಯೆನ್ನುತ್ತ ಮರುಗಲಾ ಕುವರನು ।
ಒರೆದಳು ಬೇಗದೊಳು ॥೩॥
ಮನದನ್ನ ನೀನೇಕೆ ಮನದೊಳು ಮರುಗುವೆ ।
ದಣಿದೆನು ಬಿಸಿಲಿನೊಳು ॥
ಒಣಗಿದೆ ಗಂಟಲು ತಣಿಯದು ತೃಷೆಯಿಂದು ।
ಗಣಿಸು ನೀನದ ಮೊದಲು ॥೪॥ ೧೩೬ ॥

**ಭಾಮಿನಿ**

ಚಂದಿರಾನನೆ ಬಳಲದಿರು ನೀ ।
ನೊಂದು ಕ್ಷಣದಲಿ ತರುವೆ ಜಲವನು ।
ನಿಂದಿರುವುದೀ ತರುವಿನೆಡೆಯೊಳಗೆಂದು ಸೂಚಿಸುತ ॥
ನಂದನನು ತಾನತ್ತ ಸರಿಯಲು ।
ಸುಂದರಿಯು ಮರನಡಿಯ ಸೇರಲು ।
ಬಂದನಲ್ಲಿಗೆ ಬೇಟೆಯಾಡುತ ಮಂದಮತಿ ಶಬರ ॥೧॥ ೧೩೭ ॥

**ಸೌರಾಷ್ಟ್ರ – ಮಟ್ಟೆ**

ಬಂದನಾಗ ಬೇಟೆಯಾಡುತ । ತಾಳಕೇತು ।
ಚಂದದಿಂದ ಪಡೆಯ ಕೂಡುತ ॥ಪ॥
ನಿಂದು ಮೃಗದ ಹೆಜ್ಜೆ ನೋಡುತ । ಅಡಗಿ ನಿಂತು ।
ಸಂದ ನೋಡಿ ಬಾಣವೆಸೆಯುತ ॥

ಹಂದಿ ಹರಿಣ ವ್ಯಾಘ್ರಗಳನು । ಕೊಂದು ಕೂಗಿ ತನ್ನವರನು ।
ಮುಂದುವರಿದು ಬಲೆಯ ಬೀಸು ।
ತಂದು ಕಾಡಿನೊಳಗೆ ಶಬರ ॥೧॥
ಕುಸುಮನೇತ್ರೆ ವಿಮಲೆ ವನದಲಿ । ಇರಲು ಕಂಡು ।
ಕುಸುಮಬಾಣನೆಚ್ಚ ಶರದಲಿ ॥
ಕುಸಿದು ನೆಲಕೆ ಬಿದ್ದು ಮತ್ತೆ । ಹಸಿದ ಕಂಗಳಿಂದ ನೋಡಿ ।
ಬಸಿದ ಜೊಲ್ಲನೊರಸಿ ಪಾಡಿ ।
ಮಸಿಯ ವರ್ಣ ನುಡಿದಾಗ ॥ ಬಂದನಾಗ ॥೨॥೧೪೯ ॥

**ಕಾಂಭೋದಿ – ಏಕ**

ಯಾರೆ ಹುಡುಗಿ ಯಾರೆ ಪಿತನು । ಯಾರೆ ನಿನ್ನ ವರನು ॥
ಸೇರಲ್ಯಾತಕಿಂಥ ವನವ । ಸಾರು ಬೇಗ ನೀನು ॥೧॥
ಓರೆನೋಟ ಚೂರಿಯಾಗಿ । ಹಾರಿತೆನ್ನ ಜೀವ ॥
ಮೋರೆ ತುಂಬ ಬೀರು ನಗೆಯ । ಸಾರು ನನ್ನತಾವ ॥೨॥
ಬಳ್ಳಿಯಂತೆ ಸುತ್ತು ಬಾರೆ । ಒಳ್ಳೆ ಮರವು ನಾನು ॥
ಒಳ್ಳೆಯಂತೆಯಿಣಿಯ ನಾಡ । ಬಲ್ಲೆ ಪೇಳಲೇನು ॥೩॥
ಹುಲ್ಲೆ ಮರಿಯ ತಿಂದು ನಲಿದು । ಕಳ್ಳ ಕುಡಿದು ಕುಣಿದು ॥
ಬೆಳ್ಳಿ ಮೂಡುವನಕ ಬಿಡದೆ । ಮೆಲ್ಲು ಸುಖವನೊಲಿದು
॥೪॥ ೧೪೩ ॥

**ಭೈರವಿ – ಅಷ್ಟ**

ಸಾಕೆಲೊ ವನಚರನೆ । ನೀಗಳಹುವು ।
ದೇಕೆ ಸಾರೆಲೊ ಸುಮ್ಮನೆ ।
ಲೋಕೈಕ ವೀರನಿಗೇಕ ಪತ್ನಿಯು ನಾನು ।
ಜೋಕೆಯೊಳ್ನಡೆ ಘಮ್ಮನೆ ॥೧॥
ಆನೆಯ ಕುಂಭವನು । ಒಂದೇಟಿಗೆ ।
ತ್ರಾಣದಿ ಸೀಳುವೆನು ॥
ಮಾನವನೋರ್ವನು ಪ್ರಾಣವ ಕೊಂಬನೆ ।
ಜಾಣೆಯೆ ಬಾರೆಂಬೆನು ॥೨॥

ದುಷ್ಟ ಕೇಳ್ ಮದ ಗರ್ವದಿ । ಎನ್ನನು ನೀನು ।
ಮುಟ್ಟಿದರೀದಿನದಿ ॥
ಕೆಟ್ಟು ಹೋಗುವೆ ನೋಡು ಘಟ್ಟನೆ ತೆರಳೆಂದು ।
ಸಿಟ್ಟಿನೊಳ್ ಗಜರಿದಳು ॥೩॥ ೧೪೬ ॥

**ಭಾಮಿನಿ**

ವನಿತೆಯಾಡಿದ ನುಡಿಗೆ ಶಬರನು ।
ಮುನಿದು ನೋಳ್ಪೆನು ನಿನ್ನ ಕಾವರ ।
ನೆನುತ ಮುಂದಡಿಯಿಟ್ಟು ತರಳೆಯ ತನುವನೆಳದಾಡೆ ॥
ವಣಿಜ ಕನ್ನಿಕೆಯಮಮ ಕೆಟ್ಟೆನು ।
ಇನಿಯ ಬಾಬಾರೆನುತ ಮೊರೆಯಿಡು ।
ವನಿತರೊಳಗೈತಂದು ಶರವನು ಧನುವಿಗೇರಿಸುತ ॥೧॥ ೧೪೭ ॥

**ಮೆಚ್ಚು – ಅಷ್ಟ**

ಪಾತಕಿ ಶಬರನೆ ಕೇಳೆಲೊ । ಶರ ।
ಘಾತಕೆ ತನುತೆರಲೇಕೆಲೊ ॥
ನೀತಿಯನರಿತೀಗ ತೆರಳೆಲೊ । ನಿನ್ನ ।
ಜಾತಿಯ ಜನರನ್ನು ಸೇರಲೊ ॥೧॥
ಹೋಗು ಹೋಗೆಲೊ ಹುಚ್ಚು ಹುಡುಗನೆ । ನೀನು ।
ಕೂಗುವುದೇತಕೊ ಸುಮ್ಮನೆ ॥
ಬಾಗುವ ಕೈರಾತ ನಾನಲ್ಲ ।
ನಿನಗಾಗುವ ಕಾರ್ಯವ ಮಾಡಲ್ಲ ॥೨॥
ಕಾಡಿನ ಮ್ರುಗವೆಂದು ತಿಳಿದೆಯ । ನಾನು ।
ರೂಢಿಪಜಾತನು ಬಲ್ಲೆಯ ॥
ಹೂಡಿದ ಬಾಣದಿ ತಲೆಯನ್ನು । ಎ ।
ಚ್ಚಾಡುವೆ ನೋಡಿಗ ಛಲವನ್ನು ॥೩॥ ೧೫೦ ॥

### ಭಾಮಿನಿ

ಧರಣಿಪತಿ ಸುತ ಭರಿತ ರೋಷದಿ ।
ಶರವನೆಸೆಯಲು ತಾಳಲಾರದೆ ।
ಬರಿದೆ ಸಾಯುವುದೇತಕೆನುತಲಿ ಚರಣವನು ಪಿಡಿದು ॥
ಪರಮ ವಿಕ್ರಮಿ ನಿನ್ನ ಪೋಲ್ವರು ।
ಧರೆಯೊಳಿಹರೇ ಮರುಳುತನದೊಳು ।
ಧುರಕೆ ನಿಂತೆನು ಶರಣು ಬಂದಿಹೆ ಕರುಣವಿರಿಸೆನಲು ॥೧॥ ೧೫೧ ॥

### ಶಂಕರಾಭರಣ – ಏಕ

ಎಂದ ಮಾತ ಕೇಳಿ ನೃಪನ ।
ಕಂದ ಕರುಣೆ ತಾಳಿ ಶಬರ ।
ಗೆಂದ ಪೋಗು ಖತಿಯ ತೊರೆದೆ ।
ನೆಂದು ಪೇಳಲು ॥೧॥
ಜನಪ ನಿನ್ನ ಮರೆಯಲಾರೆ ।
ತನುವಿನೊಳಗೆ ಪ್ರಾಣವಿರುವ।
ತನಕ ನಿನ್ನ ಸೇವೆಗೈವೆ । ನೆನುತ ನುಡಿಯಲು ॥೨॥
ಕಾಲವೊದಗಿ ಬರಲು ಕರೆವೆ ।
ಬಾಳು ಸುಖದೊಳೆಂದು ಕಳುಹಿ ।
ಬಾಲೆ ವಿಮಲೆಗೂಡಿ ವನದಿ । ಬಾಳುತಿರ್ದನು ॥೩॥ ೧೫೪ ॥

### ವಾರ್ಧಕ

ಅವನಿಪತಿಸುತನಿಂತು ವನವಾಸದೊಳಗಿರಲು ।
ಭುವನವನು ವ್ಯಾಪಿಸಿದ ಭೀಕರದ ಬರಗಾಲ ।
ದಿವಸದಲಿ ಕಾಸಾರಗಳು ಬತ್ತಿ ಧಗೆ ಹೊತ್ತಿ ಹುರುಪಳಿಸುತಿರೆ ಜನಗಳು ।
ಸುವಿವೇಕಿ ಕೌಶಿಕನು ಸತಿಸುತರ ಸಾಕೇತ ।
ಭೂವಿಯೊಳಗಿನಾಶ್ರಮದಿ ಬಿಟ್ಟು ತಪಕೈದಿರಲಿ ।
ಕವನರಸಿ ತನಯರಂ ಸಾಕಲಾರದೆ ಬಳಲಿದವಳಾಗಿ ಗೋಳಿಟ್ಟಳು ॥೧॥ ೧೫೫ ॥

## ಭೂಪಾಳಿ – ಏಕ

ಬರಡಾಯಿತು ನೆಲ ಬರಿದಾಯಿತು ಜಲ ।
ಸೊರಗಿದೆ ಗಿಡಮರವೆಲ್ಲ ॥
ಬಿರು ಬೇಗೆಯ ಮಳೆ ಸುರಿವುದು ಬದುಕನು ।
ಹೊರೆಯುವ ಪರಿಯಲ್ಲ ॥೧॥
ಮಕ್ಕಳ ಬಾಯ್ಗೇನಿಕ್ಕಲಿ ಹಸಿವೆಯು । ಮುಕ್ಕುವುದಿವರನ್ನು ॥
ಸಿಕ್ಕರು ನಮ್ಮೊಳಗಕ್ಕರೆ ತೋರ್ಪರು । ಚಕ್ಕಳವುದಿನ್ನು ॥೨॥
ಮೂವರು ಮಕ್ಕಳು ಸಾವರು ದಿನದಿನ । ದೇವನೆ ಕೈ ಬಿಟ್ಟ ॥
ನೋವನು ತಾಳಿದೆ ನೀವರೆಗೀ ವನ । ಜೀವನ ಕೆಡೆಗೊಟ್ಟು ॥೩॥
ಪತಿದೇವನು ಯತಿಪತಿಯಾಗಲು ದೃಢ ।
ವ್ರತವನು ತಾಳಿಹನು ಗತಿಗಾಣದೆ ನಾ ।
ಮತಿಗೆಟ್ಟಿಹೆನೆನ್ನೊಳು । ಪತಿಕರಿ ಪರಕಾಣೆ ॥೪॥೧೫೯ ॥

## ಭಾಮಿನಿ

ಜೀವವುಳಿಯುವ ಪರಿಯ ಕಾಣೆನು ।
ಮೂವರನು ನಾ ಸಾಕಲಾರೆನು ।
ಸಾವನುಣುವುದಕಿಂತಲೀರ್ವರ ಕಾವುದೇಲೇಸು ॥
ದಾವ ಕೊರಳಿಗೆ ಕಟ್ಟಿಸುತನನು ।
ದಾವದಿಂ ಪುರ ಕೊಯ್ದು ಮಾರುವೆ ।
ದೇವರೇ ಗತಿಯೆಂದು ನಿಶ್ಚಯಗೈವುತಾ ವನಿತೆ ॥೧॥ ೧೬೦ ॥

## ಮಧ್ಯಮಾವತಿ – ತ್ರಿವುಡೆ

ಮಧ್ಯಮ ಕುಮಾರಕನ ಕಂಠದ । ಮಧ್ಯದಲಿ ಹಗ್ಗವನು ಕಟ್ಟಿಸು ।
ಮಧ್ಯಮೆಯು ನಡೆತಂದಳಾ ವನ ।
ಮಧ್ಯದಿಂದಲೆ ದುಗುಡದಿ । ಏನನೆಂಬೆ ॥೧॥
ಅಮ್ಮ ಪೋಗುವುದೆಲ್ಲಿಗೆನ್ನನು ।
ಗುಮ್ಮನಿಗೆ ಕೊಡಲೆಂದು ಪೋಪೆಯ ।
ಸುಮ್ಮನಿರುವೆನು ಹಟವ ಮಾಡೆನು ।
ಒಮ್ಮೆ ಹಗ್ಗವ ಸಡಲಿಸು । ಎನಲು ಮಗನು ॥೨॥

ತಡೆದು ಮೋಹದಿಯಳುತ ನಿಲುವಳು ।
ಕಡುಹಿನಿಂದಲಿ ಮುಂದೆ ನಡೆದಳು ।
ನಡುಗಿ ದೇವನ ಪದವ ನೆನೆದಳು ।
ಮಡದಿ ವಿಪಿನದ ಮಾರ್ಗದಿ । ಪೇಳಲೇನು ॥೩॥
ಬಾಯ ಬಿಡುತಳಲುತ್ತ ಬರುತಿಹ ।
ತೋಯಜಾಂ ಬಕಿಯನ್ನು ಮಾರ್ಗದಿ ।
ರಾಯನಾತ್ಮಜ ಕಂಡು ವಿಸ್ಮಯ ।
ಕಾಯನಾಗುತ ನುಡಿಸಿದ । ಸತ್ಯವ್ರತನು ॥೪॥ ೧೬೪ ॥

**ಕಾಂಭೋದಿ – ಝಂಪೆ**

ಯಾರು ನೀನೆಲೆ ತಾಯೆ ಯಾರೀತನೆಂದರುಹು ।
ಭೂರಿ ಮಂಗಲರೂಪಿ ನೋಡೆ ॥
ಕ್ರೂರ ಕರ್ಮವಗ್ಯೆವ ಕಾರಣಂಗಳದೇನು ।
ಪಾರಮಾರ್ಥದಿ ಪೇಳ್ವುದೀಗ ॥೧॥ ೧೬೫ ॥

**ಸಾಂಗತ್ಯ – ರೂಪಕ**

ಕೌಶಿಕ ಸತಿಯಾನು ಹೈಮವತಿಯು ನಾಮ ।
ಭೀಕರ ಬರಗಾಲ ದಿನದಿ ॥
ಪೋಷಿಸಲಾರದೆ ಪುರಕೊಯ್ದು ಮಾರುವೆ ।
ದೋಷ ಭೀತಿಯ ಬಿಟ್ಟು ಮಗನ ॥೧॥ ೧೬೬ ॥

**ಕಾಂಬೋಧಿ – ಝಂಪೆ**

ಹರಹರ ಏನೆಂಬೆ ಸುರನರೋರುಗಖ್ಯಾತ ।
ಪರಮರ್ಷಿ ಕೌಶಿಕನ ಸತಿಗೆ ।
ಬರಗಾಲ ಬೇಗೆಯಲಿ ತರಳನನು ವಿಕ್ರಯಿಸಿ ।
ಹರಣವನು ಕಾಯ್ವ ವಿಧಿಗೆ ॥೧॥
ತಾಯ ಚಿಂತಿಸಬೇಡ ಬೇಯದಿರು ಶೋಕದಲಿ ।
ಕಾಯುವೆನು ನಿಮ್ಮಸುವ ನಾನು ॥
ಆಯ ತಾಂಬಕನಾ ಮಾಯಕದ ನುಡಿಯಲ್ಲ ।
ಕಾಯಜನ ಮಾರಬೇಡಿನ್ನು ॥೨॥ ೧೬೮ ॥

**ಸಾಂಗತ್ಯ – ರೂಪಕ**

ಕರುಣೆಗೆ ಸೆರಗೊಡ್ಡಿ ನರರ ಹಂಗನು ಬೇಡಿ ।
ಹರಣವ ಕಾವುದು ಸಲ್ಲ ॥
ಪೊರೆಯುವ ಭಾರವ ಹೊರಲ್ಯಾಕೆ ಸುಮ್ಮನೆ ।
ತೆರಳುವುದೊಳ್ಳಿತು ನೀನು ॥೧॥ ೧೬೯ ॥

**ಕಾಂಬೋಧಿ – ಝಂಪೆ**

ಇಷ್ಟೇಕೆ ಛಲವಮ್ಮ ದುಷ್ಟನೆಂದೆಣಿಸದಿರು ।
ಸೃಷ್ಟಿಪಾಲಕ ಸುತನು ನಾನು ॥
ಶಿಷ್ಟರನು ಪಾಲಿಸುವ ಶ್ರೇಷ್ಠ ಕಾರ್ಯವಗೈದು ।
ನಷ್ಟವಾಗಿಸುವೆ ಪಾಪವನು ॥೧॥ ೧೭೦ ॥

**ಸಾಂಗತ್ಯ – ರೂಪಕ**

ಯಾರಾದರೇನಂತೆ ಕಾರುಣ್ಯ ಬೇಡಯ್ಯ ।
ಸಾರು ನೀನೆಂದಾಡುತಿರಲು ॥
ನಾರಿಯ ಶೀಲಕ್ಕೆ ಭೂರಿವಿಸ್ಮಿತನಾಗಿ ।
ಧಾರಿಣಿಪಾತ್ಮಜ ನುಡಿದ ॥೧॥ ೧೭೧ ॥

**ವಾರ್ಧಕ**

ಪುಣ್ಯವಂತೆಯೆ ನಿನ್ನ ಮಗನನ್ನು ಕೊಂಡಾನು ।
ಧನ್ಯಾತ್ಮನೆನಿಸುವೆನು ದಿನದಿನಕೆ ಬೇಕಾದ ।
ವನ್ಯ ಮೃಗಗಳ ತಂದು ನಿಮ್ಮಸುವ ಕಾಯ್ವ ಬೆಲೆಯನ್ನೀವೆನಿದನು ನೀನು॥
ಮಾನ್ಯ ಮಾಡುವುದೆಂದು ವನಿತೆಯನೊಡಂಬಡಿಸಿ ।
ಪಣ್ಯಸುತ ಕಂಠಸ್ಥ ಪಾಶಮಂ ಬಿಡಿಸುತಾ ।
ರಣ್ಯದೊಳು ಮುನಿಕುಟುಂಬವ ಸಲಹುತಿರ್ದನಾ ಪುಣ್ಯಾತ ಸತ್ಯವ್ರತನು ॥೧॥ ೧೭೨ ॥

### ಸೌರಾಷ್ಟ್ರ – ತ್ರಿವುಡೆ

ಇತ್ತ ಮಾಲವ ಪೃಥ್ವಿ ಪಾಲಕ ।
ಚಿತ್ರಕರ್ಮನು ಚಿತ್ತ ಹರ್ಷದಿ ।
ಉತ್ತಮಾಸನವೇರಿ ಕುಳಿತಿರ । ಲರ್ತಿಯಿಂದ ॥೧॥
ಬಂದು ಬೇಹಿನಚಾರ ಮಣಿಯಲು ।
ಚಂದದಿಂದವನನ್ನು ಮನ್ನಿಸಿ ।
ತಂದ ವಾರ್ತೆಯದೇನು ಪೇಳೆನ । ಲೆಂದನವನ ॥೨॥ ೧೭೩ ॥

### ಸಾರಂಗ – ಅಷ್ಟ

ಮಾಲವೇಶನೆ ಲಾಲಿಸು । ನಾನೆಂಬುದ ।
ಕೇಳಿ ಚಿತ್ತದಿ ಯೋಚಿಸು ॥
ಭೂಲೋಲ ತ್ರಯರುಣ ಬಾಲಕನಲಿ ಕೋಪ ॥
ತಾಳುತ ಕಾಡಿಗಿನ್ನು ॥ ಅಟ್ಟಿದನು ॥೧॥
ಧಾರಿಣಿಯನು ತೊರೆದು । ಭೂಪಾಲಕ ।
ವೈರಾಗ್ಯವನು ತಳೆದು ॥
ಸೇರಿಹ ವನವನ್ನು ಯಾರು ಕೇಳುವರಿಲ್ಲ ।
ದಾ ರಾಜ್ಯಪಾಲಿಪನು ॥ ಗುರುದೇವನು ॥೨॥
ಭೀಕರ ಬರಗಾಲದಿ । ನೊಂದಿಹರೆಲ್ಲ ।
ಸಾಕೇತ ಸಾಮ್ರಾಜ್ಯದಿ ॥
ಶೋಕ ಸಂಕಟದಿಂದನೇಕರು ಮಡಿದರು ।
ಲೋಕವೆ ನಡುಗುವುದು ॥ ಲಾಲಿಪುದು ॥೩॥೧೭೪ ॥

### ಕೇದಾರಗೌಳ – ಝಂಪೆ

ಚಾರನಾಡಿದ ಮಾತನು । ಕೇಳುತ್ತ । ಧಾರಿಣೀಪಾಲ ತಾನು ॥
ಭೂರಿಸಂತಸ ತಾಳುತ । ಮಂತ್ರಿಯೊಳು ।
ಕಾರಿಯವ ಪೇಳ್ದ ನಗುತ ॥೧॥
ಕೇಳಿದೆಯ ಮಂತ್ರಿವರ್ಯ । ಸಾಕೇತ । ಪಾಲಕರಿಗಾದ ಗತಿಯ ॥
ಏಳಿಗೆಯ ಕಾಂಬಯೋಗ । ತಾನಾಗಿ ।
ಕಾಲಿಗೆರಗಿರುವುದೀಗ ॥೨॥

ಸಾಕೇತಪುರಿಗೆ ನಡೆದು । ಅಲ್ಲಿಹರ ।
ಭೀಕರದ ಧುರದಿ ತರಿದು ॥
ಲೋಕವಂದಿತ ಪೀಠದಿ । ಮಂಡಿಸಲು ।
ನಾ ಕನಸ ಕಂಡೆ ದಿಟದಿ ॥೩॥
ಭೂತಳದ ಸ್ವರ್ಗವನ್ನು । ಗೆಲ್ಲುವುದ ।
ಕಾತುರನು ಕೇಳು ನಾನು ।
ನೀತಿಜ್ಞ ಕಾರ್ಯಗತಿಯ । ಅಂತರ್ಯ ।
ರೀತಿಗಳ ಪೇಳ್ವುದಯ್ಯ ॥೪॥ ೧೮೦ ॥

**ತೋಡಿ – ಅಷ್ಟ**

ಕೇಳಯ್ಯ । ಭೂಪ । ಕೇಳಯ್ಯ ।
ಕೇಳಯ್ಯಭೂಪನಾ ಪೇಳುವ ನುಡಿಯ ।
ದಾಳಿಯ ನಿಡುವರೆ ಕಾಲವಲ್ಲಯ್ಯ ॥ ಪ ॥
ಮಿಹಿರಜ ಕುಲದಲ್ಲಿ ಭಕ್ತಿಯುಳ್ಳವರು ।
ಬಹಳಷ್ಟು ಸಂಖ್ಯೆಯೊಳಿರುವರು ಜನರು ॥
ಮಹಿಯೊಳ ನುಗ್ಗಲು ಬಿಡುವರೆ ಜೀಯ ।
ವಿಹಿತವೆನ್ನುವುದೆಂತು ಗಯ್ಯುವ ಕಾರ್ಯ । ಕೇಳಯ್ಯ ॥೧॥
ಜಾಣರ ಕಳುಹಿಸಿ ಜನಪರ ಬಗೆಗೆ ।
ಮಾನಿಸರೊಲವನ್ನು ಭೇದಿಸಿ ಕಡೆಗೆ ॥
ಸೇನೆಯ ಮೂಲಕ ಜಯಿಸಲು ಬಹುದು ॥
ಹಾನಿಗೊಳ್ಳದೆ ರಾಜ್ಯವಾಳಲಿಕಹುದು ॥ ಕೇಳಯ್ಯ ॥೨॥ ೧೮೨ ॥

**ಭಾಮಿನಿ**

ಆತುರದಿ ಕಾರ್ಯವನು ಕೆಡಿಸದೆ ।
ನೀತಿ ಮಾರ್ಗದಿ ಜನರ ಭೇದಿಸಿ ।
ಭೂತಳವ ನೀಗೆಲಿದು ಜಗದಲಿ ಖ್ಯಾತಿ ತಳೆಯೆನಲು ॥
ಮಾತಿಗೊಲಿದಾ ಭೂಪ ರವಿಕುಲ ।
ಖ್ಯಾತಿಗಪಹತಿಯೆಸಗಲೆನು ತವ ।
ದೂತರನು ನೇಮಿಸುತ ಕಾಲದಿ ಘಾತಿಸುವೆನೆಂದು॥೧॥ ೧೮೩ ॥

**ಕಂದ ಪದ್ಯ**

ಅಂತವರಿರುತಿರಲೊಂದಿನ ।
ಕಾಂತಾರದಿ ಕ್ಷುದ್ಬಾಧೆಯನಾಂತಾ ವಿಮಲೆ ॥
ಕಾಂತನ ಬಳಿಗೈತಂದುರೆ ।
ಸಂತಾಪದೊಳವನಂ ತಳ್ಕಿಸುತಿಂತೆಂದಳ್ ॥೧॥ ೧೮೪ ॥

**ಎರಕಲಕಾಂಬೋಧಿ – ಅಷ್ಟ**

ಕೇಳೆನ್ನ ರಮಣ । ನಾನಿನ್ನೆಂತು । ತಾಳಲಿ ಹರಣ ॥
ಹಾಳಾದ ಹಸಿವೆಂಬ । ಕಾಲನ ವಶವಾದೆ ।
ಬಾಳುವ ಪರಿಗಳ ॥ ಪೇಳುವುದಿನ್ನು ॥೧॥
ಬತ್ತಿತು ರಸನೆ । ಎನ್ನೊಳು ಧಗೆ ।
ಹೊತ್ತಿತು ಪ್ರಿಯನೆ ॥
ಕತ್ತಲು ಕಣ್ಣನು ಮುತ್ತುತಲಿದೆಯಯ್ಯ ।
ಸತ್ತೆನು ನೋಡೆಂದಳು ॥ ಮತ್ತವಳು ॥೩॥ ೧೮೬ ॥

**ಭಾಮಿನಿ**

ಬಾಳುವೆಯ ಋಣ ತೀರಿತಕಟಾ ।
ಬಾಲೆಯನು ನೀ ಮರೆವುದೆನ್ನುತ ।
ಬೀಳುತಿರುವಳ ಕಾಣುತಾ ನೃಪ ಬಾಲಕಳವಳಿಸಿ ॥
ತಾಳು ತಾಳೆಲೆ ರಮಣಿ ನಿಮಿಷದಿ ।
ನೀಳಿ ಮೃಗವನು ತರುವೆನನಕವು ।
ಗೋಳು ಗೊಳ್ಳದಿರೆನುತ ಪೊರಟ ಮೃಗಾಳಿಯರಸುತಲಿ
॥೧॥ ೧೮೭ ॥

**ಸೌರಾಷ್ಟ್ರ – ತ್ರಿವುಡೆ**

ಕರದಿ ಧನುಶರವಾಂತು ಮೃಗಗಳ ।
ನರಸಿಸುತ್ತುತ ನಡೆದ ವನದಲಿ ।
ತರುಣಿ ವಿಮಲೆಯ ಹರಣವುಳಿಸಲು ।
ಹರಿಜನಂದು ॥೧॥

ರವಿಯು ಪಶ್ಚಿಮ ಕಡಲಿಗಿಳಿಯಲು ।
ಕವಿದ ಕತ್ತಲೆ ವನವ ಮುಸುಕಲು ।
ಕುವರ ಬೇಟೆಗೆ ಫಲವ ಕಾಣದೆ । ನವೆದನೊಂದು ॥೨॥ ೧೮೯ ॥

**ಪಂತುವರಾಳಿ – ರೂಪಕ**

ಹೊತ್ತು ಹೋಯಿತು । ಕತ್ತಲಾಯಿತು ।
ಸುತ್ತಿದಣಿದುದು । ವ್ಯರ್ಥವಾದುದು ॥೧॥
ಮೃಗವು ಕಾಣದು । ಬಗೆಯು ತೋರದು ।
ಮೃಗವಿಲೋಚನೆ । ಬಗೆವಳೇನನೆ ॥೨॥
ಕುಶಿಕ ಕುಲಜರು । ಹಸಿವ ತಾಳರು ।
ಅಶುಭ ಮಪ್ಪುದು । ಯಶವು ಕೆಡುವುದು ॥೩॥ ೧೯೨ ॥

**ಭಾಮಿನಿ**

ಕಾಯಲಾರೆನು ಮುನಿಕುಮಾರರ ।
ಸಾಯುತಿರುವಳು ಹರಣದರಸಿಯು ।
ಕಾಯುವುಳಿದಿರಲೇನು ಫಲವೈ ಪಾಯಪಲ್ಲಟಿಸೆ ॥
ಸಾಯಕದಲಗ್ನಿಯನು ರಚಿಸಿ ನಿ ।
ಜಾಯುಷವ ಕೊನೆಗಾಣಿಸುವೆ ನಿ ।
ರ್ದಾಯದೊಳಗೆಂದೆನುತ ನೃಪನ ಸಹಾಯಕತೆಯಿಂದ
॥೧॥೧೯೩ ॥

**ಮಧುಮಾಧವಿ – ತ್ರಿವುಡೆ**

ಬಾಣ ಮುಖದಲಿ ಭೂಪಕುವರ ಕೃ ।
ಶಾನುವನು ರಚಿಸುತ್ತಲಾಕ್ಷಣ ।
ದಾನವಾರಿಯ ಪದವ ಮನದಲಿ ।
ಧ್ಯಾನಿಸುತ್ತತಿ ಶೀಘ್ರದಿ॥೧॥
ಹೊತ್ತಿದಗ್ನಿಯ ಸುತ್ತಿ ಬರುತಿಹ ।
ಹೊತ್ತಿನಲಿ ವನಸುತ್ತುತಾಗಳು ।
ಮಿತ್ರುವಿನ ಬಾಯ್ತುತ್ತು ತಾನೆನ । ಲತ್ತ ಬಂದಿರಲಾಕಳು ॥೨॥

ಕಂಡು ಪುಳಕವಗೊಂಡು ಶರ ಕೈ ।
ಕೊಂಡು ಬೇಗ ಪ್ರಚಂಡ ವೇಗದಿ ।
ದಿಂಡುಗೆಡಹಿದ ಗಂಡುಗಲಿಯು ।
ದ್ದಂಡತನದಲಿ ಹಸುವನು ॥೩॥ ೧೯೬ ॥

**ಭಾಮಿನಿ**

ಸಂದುದೊಂದಪಮೃತ್ಯುವೀದಿನ । ವಿಂದಿರೇಶನು ದಯವ ಮಾಡಿದ।
ನೆಂದು ಹಸುವನು ತಂದು ಭೂಪನ ಕಂದ ಬೇಗದಲಿ ।
ಸುಂದರಾಂಗಿಯು ಮೇಣು ಕೌಶಿಕ।
ನಂದನರ ಕೂಡುತ್ತ ಭುಂಜಿಸೆ ।
ಬಂದನಲ್ಲಿಗೆ ಮುನಿವಸಿಷ್ಠನು ನೊಂದು ಮನದೊಳಗೆ॥೧॥ ೧೯೭ ॥

**ಕಾಂಭೋದಿ – ಅಷ್ಟ**

ಮುನಿಪತಿಯನು ಕಾಣುತಾಗ । ನೃಪ ।
ತನಯನು ಯೋಚಿಸಿ ಬೇಗ ॥
ವಿನಯದಿ ಕರೆತಂದು ಕೂಡ್ರಿಸಿ ಪಾದಕ್ಕೆ ।
ಮಣಿಯುತ್ತ ಪೇಳಿದ ನೆನೆಯುತ್ತ ಪೂರ್ವವ ॥೧॥
ಗುರುದೇವ ನಿನ್ನನು ಕಂಡು । ಎನ ।
ಗುರುತರಾನಂದವಾಯ್ತಿಂದು ॥
ಪರಮ ವಿರಾಗಿಯೆ ಧರಿಸಿರ್ಪೆ ರಾಜ್ಯದ ।
ಹಿರಿದಾದ ಹೊಣೆಯನ್ನು ಪೇಳೆಲ್ಲ ಕ್ಷೇಮವೆ ॥೨॥
ಯಾತಕೆ ಪರಿಹಾಸ್ಯ ನಿನಗೆ । ನಿನ್ನ ।
ಭೂತಳವೇಕಯ್ಯ ಮುನಿಗೆ ॥
ಪಾತಕವೆಸಗಿದೆ ಘಾತಿಸಿ ಧೇನುವ ।
ಮಾತಾಡಿ ಫಲವೇನು ನೀತಿಯ ತಪ್ಪಿದೆ ॥೩॥
ಅರಿಯದೆ ಗುರುಧೇನುವೆಂದು । ಕೊಂದು ।
ಪೊರೆದೆನು ಪ್ರಾಣವನಿಂದು ॥
ಹರಣ ರಕ್ಷಣೆಗಾಗಿ ಚರಿಸಿದಾಪದ್ಧರ್ಮ ।
ದುರಿತವೆಂತಹುದಯ್ಯ ಗುರುದೇವ ಪೇಳೀಗ ॥೪॥

ಶುದ್ಧಿಗೈಯದೆ ಮಾಂಸ ತಿಂದು । ನೀನು ।
ಹೊದ್ದಿದೆ ಪಾತಕವಿಂದು ॥
ಬುದ್ದಿ ಹೀನತೆಯಿಂದ ಸದ್ಧರ್ಮಗಳನೆಲ್ಲ ।
ವೊದ್ದೋಡಿಸಿದೆಯೆಂದು ಸಿದ್ದವಾಯಿತು ಕೇಳು ॥೫॥ ೨೦೨ ॥

**ವಾರ್ಧಕ**

ಗುರುವಿನಾಕಳ ಕೊಂದೆ  ಶುದ್ಧಿಗೈಯದೆ ತಿಂದೆ ।
ಹಿರಿಯನ ಪ್ರೀತಿಯಂ ಗಳಿಸಿರ್ದೆ ಮೊದಲಾಗಿ ।
ದುರಿತ ತ್ರಯೆಂಗಳಿಂದಾಗು ತ್ರಿಶಂಕು ನೀನೆಂದೊರೆದು ಬಳಿಕ ಮುನಿಯು॥
ಪೊರೆದೆನಾನಿದುವರೆಗೆ ನ್ಯಾಸವಾದೀ ಧರೆಯ ।
ತೊರೆದೆ ನೀಕ್ಷಣಕೆಂದು ಸರಿಯಲ್ಕೆ ಮನಮರುಗಿ ।
ಹರ ಹರಾಯೆನುತಂದು ಮುಂಗತಿಯ ಚಿಂತಿಸುತ ಧರಣಿಪನ ಕುವರನಿರಲು ॥೧॥ ೨೦೩ ॥

**ಕಾಂಭೋದಿ – ಝಂಪೆ**

ಚಿತ್ರಕರ್ಮಕ ತನ್ನ ಮಾರ್ಬಲವನೊಡಗೊಂಡು ।
ಚಿತ್ರಭಾನುಜರಾಳ್ವ ಮಹಿಯ ॥
ಕ್ಷತ್ರ ಪಂಥದಿ ಗೆಲಿದು ಕನಕ ಪೀಠವನೇರಿ ।
ಧಾತ್ರಿಪಾಲಕನೆಂದ ನಗುತ ॥೧॥
ಕೇಳಿರೈ ಮಂತ್ರಿಗಳು ಬಾಳುವೆಯ ಹಿರಿಯಾಸೆ ।
ಕಾಲವೊದಗಿರೆ ಕೂಡಿ ಬಂತು ॥
ತೋಳ ಬಲ ದಿಂದಿಳೆಯ ಲೀಲೆಯೊಳ್ ಗೆಲಿದೆನ್ನ ।
ಪೋಲುವರ ದಾರುಂಟು ಜಗದಿ ॥೨॥
ವನಧಿ ಪರಿಮಿತ ಧರೆಯ ಜನಪರೊಳಗತಿ ಶ್ರೇಷ್ಠ ।
ನೆನಗೆ ಮಲೆವವರುಂಟೆಯಿನ್ನು ॥
ಎನುತಲಾ ಭೂಪತಿಯು ಮನಮೆಚ್ಚಿ ಪೇಳುತಿರೆ ।
ಮಣಿದೆಂದ ಮಂತ್ರೀಶನಾಗ ॥೩॥ ೨೦೬ ॥

**ಸುರುಟಿ – ಏಕ**

ಲಾಲಿಸು ಭೂವರನೆ । ಮಾಲವ । ಪಾಲಕೃಪಾಕರನೆ ॥
ಬಾಲಕ ಸತ್ಯವ್ರತ । ಜಗದೊಳು । ಬಾಳಿಹ ಪರ್ಯಂತ ॥೧॥
ಧಾರಿಣಿ ಸ್ಥಿರವೆಂಬ । ನುಡಿಯನು । ಸಾರಲು ಬರಿಜಂಭ ।
ಶೂರನು ಧುರದಲ್ಲಿ । ಇರುವನು ।
ಭಾರಿಯಡವಿಯಲ್ಲಿ ॥೨॥
ಆತನ ಯಮಪುರಿಗೆ । ಅಟ್ಟಲು ।
ಭೂತಳ ಸ್ಥಿರ ನಿನಗೆ ॥
ನೀತಿಯನರಿತೀಗ । ವೈರಿಯ ।
ಘಾತಿಸುವುದು ಬೇಗ ॥೩॥ ೨೦೯ ॥

**ಕಲ್ಯಾಣಿ – ಅಷ್ಟ**

ಸಚಿವನ ನುಡಿಗಳ ಕೇಳಿ । ನೃಪ ।
ನುಚಿತವೆನ್ನುತ ಚಿಂತೆ ತಾಳಿ ॥
ರಚಿಸಿ ತಂತ್ರಗಳನ್ನು ವಧಿಸಲು ವೈರಿಯ ।
ಖಚಿತವೀ ಧರೆಯೆಂದು ನಿಶ್ಚಯ್ಸಿ ಬೇಗದಿ ॥೧॥
ವರ್ತಕ ವೇಷವ ಧರಿಸಿ । ವ ನ ।
ವರ್ತಿ ಕುಮಾರನನರಸಿ ॥
ಪಾರ್ಥಿವ ನೀತಿಯೊಳಾತನ ಕೊಂದೆನ್ನ ।
ಸ್ವಾರ್ಥವ ಸಾಧಿಸಿ ಬಾಳುವೆನೆನ್ನುತ ॥೨॥ ೨೧೧ ॥

**ವಾರ್ಧಕ**

ಧಾರಿಣಿಯೊಳಾರರಿಯದಂತೀಗ ಕಾರ್ಯಮಂ ।
ಪೂರೈಸ ಬೇಕೆಂದು ನಿಶ್ಚಯಿಸುತಾಕ್ಷಣದಿ ।
ಸಾರಿದಂ ವರ್ತಕನ ವೇಷಮಂ ಧರಿಸುತ್ತ ಧಾರಿಣಿಪ ವಿಪಿನವನ್ನು ॥
ವೀರ ಸತ್ಯವ್ರತನು ಮೃಗ ಬೇಟೆಗೈದಿರಲು ।
ಮಾರ ವಾರಣಯಾನೆಯೇಕಾಂಗಿಯಾಗಿರಲು ।
ನಾರಿಯಳ ಸುವಿಲಾಸ ಸಂಭ್ರಮಕೆ ಬೆರಗಾಗಿ ಮಾರಿ ಸುವಿವೇಕಗಳನು
॥೧॥ ೨೧೨ ॥

## ಭಾಮಿನಿ ಅರ್ಧ

ಎಂದು ನಿಶ್ಚಯಗೈದು ಭೂಪನು ।
ಮುಂದುವರಿದೈತಂದು ವನಿತೆಯ ।
ಸುಂದರಾಸ್ಯವ ನಿರುಕಿಸುತಲಿಂತೆಂದ ವಿನಯದಲಿ ॥೧॥ ೨೧೩ ॥

## ಮೋಹನ – ಅಷ್ಟ

ವಾರಿಜ ಗಂಧಿನಿಯೆ ನೀನಾರೆಂದು । ಸಾರೀಗ ಸುಂದರಿಯೆ ॥
ಊರನು ಬಿಟ್ಟೀಗ ಕಾರಡವಿಯ ಸೇರ್ದ ।
ಕಾರಿಯಗಳ ಬಗೆಗೆ ॥೧॥
ಕನಕ ವರ್ಣನ ಜಾತೆಯು । ಸತ್ಯವ್ರತ ।
ಜನಪನ ಮನದನ್ನೆಯು ॥
ವನಿತೆ ನಾ ವಿಮಲೆಯು ವನವಾಸ ವ್ರತಕಾಗಿ ।
ಇನಿಯನ ಕೂಡಿಹೆನು ॥೨॥
ಕೋಮಲ ಕಾಯದಲಿ । ಶೋಭಿಸುವಂಥ ।
ಭಾಮೆಯು ವಿಪಿನದಲಿ ॥
ಹೋಮಿಸಲೇತಕೆ ಸೌಖ್ಯವ ಬಾರೆನ್ನ ।
ಧಾಮಕೆ ಹರುಷದಲಿ ॥೩॥
ಪಾಲಿಗೆ ಬಂದಿಹುದು । ಪಂಚಾಮೃತ ।
ಗೋಳಿಡಲೇನಹುದು ॥
ಕಾಲವು ನಮಗನುಕೂಲಿಸೆ ಜಗವನ್ನು ।
ಪಾಲಿಪನೆನ್ನರಸ ॥೪॥
ವರ್ತಕ ನಾನಲ್ಲವು । ಈ ಭೂಮಿಗೆ ।
ಭರ್ತನು ತಿಳಿ ದಿಟವು ।
ಆರ್ತತೆಯಿಂದಲಿ ಪ್ರಾರ್ಥಿಪೆ ನನ್ನನು ।
ಕೂರ್ತು ಕೂಡುವುದೆನ್ನನು ॥೫॥
ದೀಪವ ಮುದ್ದಿಸಲು । ಬಳಿ ಸಾರುತ್ತ ।
ಲಾಪತಂಗವು ಸಾವುದು ॥
ಭೂಪತಿ ಪದವಿಗೆ ಪರಸತಿಯಾಸೆಯ ।
ಶಾಪವು ತಿಳಿ ನಿಜವು ॥೬॥ ೨೧೯ ॥

**ವಾರ್ಧಕ**

ಎಂದವನ ವಿಧವಿಧದಿ ಧಿಕ್ಕರಿಸಿ ನುಡಿಯಲ್ಕೆ ।
ಮಂದಮತಿಯತ್ಯುಗ್ರ ಕೋಪಮಂ ತಾಳುತ್ತ ।
ಮುಂದುವರಿದಾಕೆಯಂ ಪಿಡಿದೆಳದು ಕೂಡದಿರೆ
ಕೊಂದಿಡುವೆನೆಂದಾಕೆಯ॥
ಕಂಧರವನೌಕುತಿರೆ ದುರುಳನುಪಹತಿಗಳುಕಿ ।
ಚಂದಿರಾನನೆ ಪ್ರಾಣಮಂ ತೊರಯೆ ಕಾಣುತ್ತ ।
ಮುಂದಿವಳ ಪತಿಯಳಿವ ನಿರ್ವಿಘ್ನ ಮಾಯ್ತೆಂದು ಪುರಕಾಗಿ
ಸರಿಯಲಂದು ॥೧॥ ೨೨೦ ॥

**ಸಾಂಗತ್ಯ – ರೂಪಕ**

ಮಾನಿನಿಯಸುವನ್ನು ತೊರೆದು ಧಾರಿಣಿಯಲ್ಲಿ ।
ತಾನಾಗ ಮಲಗಿರೆ ಕುವರ ॥
ಏಣನ ತಂದಿಹೆ ನೋಡೆಂದು ಕರೆವುತ್ತ ।
ಕಾನನದೆಡೆಯಿಂದ ಬಂದು ॥೧॥ ೨೨೧ ॥

**ಕಂದ ಪದ್ಯ**

ಮಾನಿನಿ ಹಾಹಾಯೆನ್ನುತ ।
ಕ್ಷೋಣೀಶನ ತನುಜಂ ಮೂರ್ಛಿತನಾಗುತ್ತಂ ॥
ತಾನೆಚ್ಚತುರ್ಂ ಹಲುಬಿದ ।
ನಾನಾವಿಧದೊಳು ಗುಣಮಣಿಯಂ ಸ್ಮರಿಸುತ್ತಂ ॥೧॥ ೨೨೨ ॥

**ನೀಲಾಂಬರಿ – ಆದಿ**

ಮಾತಾಡ ಬಾರದೇನೆ । ಎನ್ನೊಡನಿಂಥ ।
ಖಾತಿ ಯಾತಕೆ ಜಾಣೆ ॥
ನೀತಿಯೆ ನಿನಗೆ ಪೇಳು । ನಿನ್ನಯ ಮನ ।
ಪ್ರೀತನು ಬಳಿಯಿರಲು ॥೧॥
ನಲ್ಲನ ಬೆಂಬಿಡಿದು । ಕಾಡಿನ ಕಷ್ಟ । ಕುಲ್ಲಾಸದೊಳಗೊಲಿದು ॥
ನಿಲ್ಲದೆ ಬಂದವಳು । ಇಂದೇತಕೆ । ಕಲ್ಲಾದೆಯೆನಗೆ ಪೇಳು ॥೨॥

ವನವಾಸದವಧಿಯನು । ಪೂರೈಸಲು । ದಿನವೆರಡಿಹುದಿದನು ॥
ಗಣಿಸದೆ ಪೋದೆಯಲ್ಲ। ಬಾಳಿನ ಸುಖ ।
ಕನಸಿನ ಗಂಟಾಯ್ತಲ್ಲ ॥೩॥ ೨೨೫॥

**ಭಾಮಿನಿ**

ಕನಕ ವರ್ಣನ ಜಾತೆ ಜಗದಲಿ ।
ಮನು ಮಥನ ಮದದಾನೆ ನಡೆಯಲಿ ।
ದಿನಪ ಕುಲಜನ ಹರಣ ದರಸಿಗೆ ವನದೊಳಳಿವಾಯ್ತು ॥
ಎನಗೆ ಬೆಂಬಲವಾಗಿ ಕಷ್ಟವ ।
ನುಣುತ ದುಗುಡವ ಮರೆಸಿ ಪೊರೆದಾ ।
ವನಿತೆಯನು ಮರೆತೆನ್ನ ಬಾಳ್ವೆಯ ನೆನಹೆ ಹೇಸಿಗೆಯು ॥೧॥
ಪಟ್ಟದರಸಿಯ ಮಾಳ್ಪೆನೆನುತಲಿ ।
ದಿಟ್ಟತನದಲಿ ತಂದೆ ನಿನ್ನನು ।
ನಷ್ಟಗೈದೆನು ಬರಿದೆ ವನದಲಿ ಕೊಟ್ಟು ಕಷ್ಟವನು ॥
ದುಷ್ಟತನದೊಳಗೆನ್ನ ಪೋಲ್ವರು ।
ಹುಟ್ಟರೀ ಜಗದೊಳಗೆ ಶಿವಶಿವ ।
ಕೆಟ್ಟೆ ತಾನೆಂದೆನುತಲವ ಕಂಗೆಟ್ಟು ಹಲುಬುತಿರೆ ॥೨॥ ೨೨೬ ॥

**ಸೌರಾಷ್ಟ್ರ – ತ್ರಿವುಡೆ**

ಕೌಶಿಕೀ ನದಿ ತೀರದಿಂದಾ । ಕೌಶಿಕನು ತಪದಿಂದಲೇಪಳುತ ।
ತೋಷದಿಂ ನಡೆ ತಂದನಾಶ್ರಮ । ವಾಸಕೆಂದು ॥೧॥
ಅರಿತು ತನ್ನವರನ್ನು ಪೊರೆದವ ।
ಭರಿತ ಶೋಕದೊಳಿರುವನೆಂದವ ।
ಕರುಣಿ ಮುನಿಪನು ಬಂದ ಬೇಗದಿ ತರಳನೆಡೆಗೆ ॥೨॥
ಮುನಿಪನನು ಕಂಡವನು ಶೋಕವ । ಕ್ಷಣದಿ ಹಿಂದಕೆ ತಳ್ಳಿ ಪಾದಕೆ ।
ಮಣಿದು ಧನ್ಯತೆ ಪಡೆದೆನೆಂದನು । ಜನಪ ಜಾತ ॥೩॥
ನಿಚ್ಚಟದ ಭಕ್ತಿಯನು ಕಾಣುತ । ಮೆಚ್ಚಿ ಕೌಶಿಕ ಮನದೊಳರಿವುತ ।
ಲೆಚ್ಚರಿಸಿದನು ಜನಪನೈಸಿರಿ ಹೆಚ್ಚಲೆಂದು ॥೪॥ ೨೩೧ ॥

## ಕೇದಾರಗೌಳ – ಝಂಪೆ

ತರಳ ಬಿಡು ವ್ಯಥೆಗಳನ್ನು । ಅಳಲಿದರೆ ।
ಮರಳುವಳೆ ಸತಿಯು ತಾನು ॥
ನರನ ಜೀವಿತವೆಂಬುದು । ಕಾಲವಶ । ವರಿತು ಬಾಳಿಕೆಗೈವುದು ॥೧॥
ದುಷ್ಟನಹ ಚಿತ್ರಕರ್ಮ । ನೀತಿಯನು । ಮೆಟ್ಟಿ ಗೈದಿರ್ಪ ಕರ್ಮ ॥
ಪಟ್ಟದಾಸೆಯ ಭೂತಕೆ । ಬಲಿಯಾಗಿ । ನಷ್ಟವಾದಳು ಕನ್ನಿಕೆ ॥೨॥
ಮಾಲವಾಧಿಪನ ಕೊಂದು । ರಾಜ್ಯವನು ।
ಆಳು ನೀ ಛಲದಿ ನಿಂದು ॥
ಏಳಿಗೆಯ ಕಾಂಬ ಯೋಗ । ಮುಂದಿಹುದು ।
ಏಳು ನೀ ಕುವರ ಬೇಗ ॥೩॥ ೨೩೪ ॥

## ಸೌರಾಷ್ಟ್ರ – ತ್ರಿವುಡೆ

ಅರೆರೆ ಮಾಲವ ಪಾಲ ಮೋಸದಿ ।
ತರುಣಿಯನು ಬಲಿಗೊಂಡನೇನೀ ।
ಧರಣಿಯಾಸೆಗೆ ಮಾರಿದನೆ ಸ । ಚ್ಚರಿತೆಯನ್ನು ॥೧॥
ಹರಿಯ ಬಸುರೊಳಗಿರಲಿ ಬ್ರಹ್ಮನ ।
ಕರಕಮಂಡಲ ಪೊಗಲಿ ಮತ್ತಾ ।
ಹರನ ಜಟೆಯೊಳಗಿರಲಿ ಧುರದಲಿ । ತರಿವೆನವನ ॥೨॥
ಎಂದು ಗರ್ಜಿಸುತಿರುವ ಕುವರನ ।
ಮಂದಹಾಸದೊಳೀಕ್ಷಿಸುತ ಮುನಿ ।
ವೃಂದವಂದಿತ ನುಡಿದನವಗಾ । ನಂದದಿಂದ ॥೩॥ ೨೩೭ ॥

## ಭಾಮಿನಿ

ಕುವರ ಕೇಳೀ ಛಲವು ಕ್ಷತ್ರಿಯ ।
ಭವನಿಗುಚಿತವು ಕೊಡುವೆ ನಿನಗಾ ।
ವಿವಿಧ ಮಂತ್ರಾಸ್ತ್ರಗಳ ಬಲದಲಿ ಬವರವನು ಜಯಿಸು ॥
ಜವದಿ ಪೊರಡೆಂದೆನೆಲು ವಿಮಲೆಗೆ ।
ಕುವರ ಸಂಸ್ಕಾರಗಳ ಗೈವುತ ।
ತವಕದಿಂದಿರುತಿರಲು ಕಾಣುತಲಿವರ ಕೈರಾತ ॥೧॥ ೨೩೮ ॥

## ಶಂಕರಾಭರಣ – ಏಕ

ಬಂದು ಪಾದಕೆರಗಿ ಪೇಳ್ದ ।
ಚಂದವಾಯ್ತು ನೃಪನೆ ನೀನು ।
ಮುಂದೆ ಪೋಪುದಾವ ಕಾರ್ಯ । ಕೆಂದು ಪೇಳಲು ॥೧॥
ನಡೆದುದೆಲ್ಲ ವರುಹಿ ಕುವರ ।
ನೊಡನೆ ಪೊರಡಲವನ ಪಾದ ।
ಬಿಡದೆ ತಾಳಕೇತುವಾಗ । ನುಡಿದ ಭೂಪಗೆ ॥೨॥
ಎನ್ನ ಪ್ರಾಣಕಾಯ್ದ ವೀರ ।
ನಿನ್ನ ಸೇವೆಗಯ್ಯಲೆಂದು ।
ಎನ್ನ ಪಡೆಯ ಕೂಡಿ ಬರುವೆ । ಮುನ್ನವೆನ್ನಲು ॥೩॥
ಆಯಿತದಕೇನೆನುತಲಾಗ ।
ರಾಯತನುಜನೊಲಿದು ಬೇಡ ।
ನಾಯಕರನು ಕೂಡಿ ನಡೆದ । ವಾಯುವೇಗದಿ ॥೪॥ ೨೪೨ ॥

## ವಾರ್ಧಕ

ಸಾಕೇತ ಪುರವರಕೆ ನಡೆತಂದು ಬೇಗದೊಳು ।
ಸಾಕೇತಕೈತಂದಿರೆಂದೆನುವ ಚಾರರಿಗೆ ।
ಸಾಕೇತಪತಿಯಾದ ಸತ್ಯವ್ರತನೈತಂದ ವಾರ್ತೆಯನ್ನರುಹಿ ಬೇಗ ॥
ಲೋಕೈಕ ವೀರನಿಂಗೆರಗಿ ರಾಜ್ಯವನಿತ್ತು ।
ಭೂಕಾಂತ ಸುಖದಿಂದ ಬಾಳೆಂದು ಪೇಳಿರೆನೆ ।
ಸಾಕಾಯ್ತುಚಾಕರಿಯೆ ಸಾಕೆಂದು ಗೋಳಿಡುತ ಹರಿತಂದು
ಜನಪಗೆರಗಿ ॥೧॥ ೨೪೩ ॥

## ಪೂರ್ವಿ – ಏಕ

ಸ್ವಾಮಿ ಪರಾಕು ಜೀಯ । ಸಾಕೇತರಾಯ । ಸ್ವಾಮಿ ಪರಾಕು ಜೀಯ॥
ಸ್ವಾಮಿಯೆ ಕೇಳೀ ಭೂಮಿಯ ನೀದಿನ ।
ಸಾಮದೊಳಿತ್ತರೆ ಪೊರೆಯುವೆನನ್ನುತ ।
ಸತ್ಯವ್ರತ । ಶೌರ್ಯಾನ್ವಿತ । ಧನುವೆತ್ತುತ ।
ಬಂದಿಹ ತಾನಿತ್ತ ॥೧॥ ೨೪೪॥

### ಭಾಮಿನಿ

ಚಾರರಾಡಿದ ನುಡಿಯ ಕೇಳುತ ।
ಬೇರುವಡೆದುದು ಭೀತಿ ಮನದಲಿ ।
ತೋರಲಾರದೆ ಭೂಪನೆಂದನು ಶೂರತನದಿಂದ ॥
ಪೋರನೆನ್ನನು ಕೆಣಕಿ ಧುರದಲಿ ।
ಮಾರ ಲೆಳಸಿದ ಪ್ರಾಣವನು ಶರ ।
ವಾರದಿಂದಸು ಹೀರುವೆನು ಮದನಾರಿಯಂದದಲಿ ॥೧॥ ೨೪೫ ॥

### ಸೌರಾಷ್ಟ್ರ – ತ್ರಿವುಡೆ

ಅರರೆ ಏನಾಶ್ಚರ್ಯ ಸಿಂಹನ ।
ನರಸಿ ಬಾಯಿಗೆ ಬೀಳ ಬಂದುದೆ ।
ಹರಿಣವೀ ದಿನ ಕುವರಗೆನ್ನೊಳು । ಧುರವೆ ಭಳಿರೆ ॥೧॥
ಚಾತುರಂಗವ ಕೂಡಿ ನಡೆದಾ ।
ಪಾತಕಿಯ ಸಂಗರದಿ ಶಸ್ತ್ರದ ।
ವ್ರಾತದಿಂದಿರಿದಿನ್ನು ಜಗದಲಿ । ಖ್ಯಾತಿತಳೆವೆ ॥೨॥
ಎಂದು ಜನಪನು ಗರ್ಜಿಸುತ್ತಿರೆ ।
ಬಂದು ಪಾದಕೆ ಮಣಿದನಾತನ ।
ಕಂದ ತಾನಹ ಶೂರಸೇನನು । ತಂದೆಗಂದು ॥೩॥ ೨೪೮ ॥

### ಮಾರವಿ – ಏಕ

ತಾತನೆ ಕೇಳ್ನೀನ್ಯಾತಕೆ ಪೊರಡುವೆ । ಯಾತುರದಿಂದೀಗ ।
ಮಾತೆನಗಿತ್ತರೆ ಪೇತುಗನಸು ನಾ ।
ಘಾತಿಸುವೆನು ಬೇಗ ॥೧॥
ನರಿಗಳ ಬಳಗವನಿರಿಯಲು ಮೃಗ ಹರಿಯೇತಕೆ ಬರಿದೆ ॥
ತರಳನ ಮದವನು ಮುರಿಯುವೆನೀ ದಿನ ।
ಧುರದೊಳು ನಾನಿರದೆ ॥೨॥
ಪುತ್ರನ ಸಂಗರದರ್ತಿಯ ಕಾಣುತ । ಚಿತ್ರಕ ತಾನಂದು ॥
ಕ್ಷತ್ರಿಯ ಪಂಥದಿ ವರ್ತಿಸಿ ಜಗದೊಳು ।
ಕೀರ್ತಿಯ ಪಡೆಯೆಂದು ॥೩॥

ಅನುಮತಿಯೀಯಲು ಜನಕನ ಬೀಳ್ಕೊಂ ।
ಡನುವರ ಕೆಂದೆನ್ನುತ ॥
ತನಯನು ತಾನತಿಘನದಲಿ ಬರುತಿರೆ ।
ಮುನಿಯುತಲಾ ಶಬರ ॥೪॥ ೨೫೨ ॥

**ಶಂಕರಾಭರಣ – ಮಟ್ಟೆ**

ಯಾರು ನೀನು ಪೋರ ಪೇಳು ।
ಕ್ರೂರತನದಿ ಧನುವ ಪಿಡಿದು ।
ಹೋರಿ ಪ್ರಾಣ ತೆರುವುದೇಕೆ । ಸಾರು ಸುಮ್ಮನೆ ॥೧॥
ಧಾರಿಣೀಶ ತರಳ ನಾನು ।
ಶೂರ ಸೇನನೆಂಬ ನಾಮ ।
ತೋರಿ ಕೊಡುವೆ ರಣದಿ ಶೌರ್ಯ । ಸಾರುವೆಲ್ಲವ ॥೨॥
ದುಷ್ಟ ನಿನ್ನ ಪಿತನು ಪರರ ।
ಸೃಷ್ಟಿಗಾಗಿ ಧುರವಗೈವ ।
ಕೆಟ್ಟುಪೋಪುದ್ಯಾಕೆ ನೀನು । ಥಟ್ಟನೈದೆಲಾ ॥ ૩ ॥
ಪಾಪಿ ಸತ್ಯವ್ರತನು ಜಗದ ।
ಭೂಪರೊಳಗೆ ನಿಂದ್ಯ ದಿಟದಿ ।
ಚಾಪವಿಡಿದು ಸಾಯ್ವೆ ಯಾಕೆ । ಪೋಪುದೀಕ್ಷಣ ॥೩॥ ೨೫೬ ॥

**ಕೇದಾರಗೌಳ – ಝಂಪೆ**

ತರಳ ನಿನ್ನನು ಧುರದಲಿ । ಸಾಹಸದಿ । ತರಿದೆನಾದರೆ ಜಗದಲಿ ।
ಬಿರುವುದಪ ಕೀರ್ತಿಯೆನಗೆ । ಅದಕಾಗಿ ।
ಮರುಗುವೆನು ನಿನ್ನ ಕೊಲೆಗೆ ॥೧॥
ಎಲೆ ಮದಾಂಧನೆ ಗರ್ವದಿ । ನೀನಿಂತು । ಗಳಹಲೇತಕೆ ಯುದ್ಧದಿ ॥
ತಲೆಯ ನಿಳುಹದೆ ಪೋದರೆ । ಬದುಕಿದ್ದು ।
ಫಲವೇನು ಸುರರು ನಗರೆ ॥೨॥
ಸಾಕು ಮುಚ್ಚಲೊ ಬಾಯನು । ಹಿಡಿ ಧನುವ ।
ನೂಕಿ ಕಳೆವೆನು ನಿನ್ನನು । ಶಾಕಿನಿಯ ಬಳಗಕಿಂದು । ಔತಣವ ।
ಹಾಕಿಸುವೆ ನಿನ್ನ ಕೊಂದು ॥೩॥ ೨೫೯ ॥

## ಭಾಮಿನಿ

ಎನಲು ಕೋಪಾಕ್ರಾಂತನಾಗುತ । ಧನುವ ಝೇವಡೆಗೈದು ಕುವರನು।
ಕ್ಷಣದಿ ಮುಸುಕಿದ ಬಾಣ ವರ್ಗದಿ ವನಚರನ ತನುವ ॥
ಕಿನಿಸಿನೊಳಗವನೆಸೆದ ಶರಗಳು । ತನುವ ಮುಚ್ಚಲು ನಡುಕ ಹೆಚ್ಚಿದ।
ಜನಪನಾತ್ಮಜ ರಣದೊಳೊರಗಲು ಜನಕನೈತಂದ ॥೧॥ ೨೬೦॥

## ಕಂದ

ಚಿತ್ರಾಹ್ವಯನಂ ಕಾಣುತ ।
ಗೋತ್ರಾರಿ ತಾನೆನೆ ಸತ್ಯವ್ರತಂ ಮುಂಬರಿಯಲ್ ॥
ಪತ್ರಿಗಳನ್ನೆಸೆವುತಲಾ ।
ಧಾತ್ರೀಶನನುಡಿಸಿದನತಿ ರೋಷವ ತಾಳ್ದಂ ॥೧॥ ೨೬೧ ॥

## ಭೈರವಿ – ಅಷ್ಟ

ಚಿತ್ರಕರ್ಮಕನೆ ನೀನು । ನಿನ್ನನು ಪೋಲ್ವ ।
ಧಾತ್ರೀಶರ ಕಾಣೆನು ॥
ಕ್ಷತ್ರಿಯ ಪಂಥವ ಮಾರುತ ವರ್ತಕ ।
ಪುತ್ರಿಯ ಕೊಂದೆಯೇನು ॥೧॥
ಸತ್ಯವ್ರತನೆ ಕೇಳೆಲೊ। ನಿನ್ನಪರಾಧ ।
ಕೃತ್ಯವ ನೆನೆದಾಡೆಲೊ ॥
ಅತ್ಯಾದರದಿ ಕಾಮಧೇನುವ ಹತಿಸಿದ ।
ಜಾತ್ಯಾಧಮನು ನೀನೆಲೊ ॥ ೨ ॥
ಸಾಕೇತ ಪುರಪಟ್ಟವ । ನೀನಾಶಿಸಿ।
ಯಾಕೆ ತೆರುವೆ ತನುವ ॥
ನೀ ಕೊಟ್ಟು ರಾಜ್ಯವ ಕಾಲಿಗೆರಗಲಿನ್ನು ।
ನಾ ಕರುಣದಿ ಕಾಯ್ವೆನು ॥ ೩ ॥
ಪಾರ್ಥಿವ ಪಂಥದಲಿ ಹೋರಾಡದೆ ।
ಪ್ರಾರ್ಥನೆ ಯಾಕೆನ್ನಲಿ ॥
ಕ್ಷಾತ್ರಿಯ ಪಂಥದಿ ವರ್ತಿಸಿ ಗೆಲಿದೆನ್ನ ।
ಧಾತ್ರಿಯ ವರಿಸು ನೀನು ॥೪॥ ೨೬೩ ॥

**ಮಾರವಿ – ಏಕ**

ತೋರೆಲೊ ನಿನ್ನಯ ಶೂರತ್ವಂಗಳ । ಮಾರಾಂತೆನ್ನೊಡನೆ ॥
ಕೂರಸಿಯಿಂ ತಲೆ ಹಾರಿಸಿ ಕೊಡುವೆನು । ಮಾರಿಗೆ ಬಲಿಯನ್ನೆ ॥೧॥
ಹುಚ್ಚು ಹುಡುಗ ನೀ ಮುಚ್ಚೆಲೊ ಬಾಯನು । ಬೆಚ್ಚುವೆನೇ ನಿನಗೆ ॥
ತುಚ್ಛನೆ ನಿನ್ನನು ಕೊಚ್ಚುವೆ ದಿವಿಜರು । ಮೆಚ್ಚುವ ತೆರದೊಳಗೆ ॥೨॥
ಎಡಬಿಡದೀರ್ವರು ಹೊಡೆದಾಡುತಲಿರೆ ।
ಪೊಡವಿಪ ಮಾಲವನು ॥
ಹುಡುಗನ ಕಣೆಗಳ ಹೊಡೆತವ ತಾಳದೆ ।
ಪೊಡವಿಯ ಸೇರಿದನು ॥೩॥ ೨೬೮ ॥

**ವಾರ್ಧಕ**

ಮಾಲವೇಶನ ಕೊಂದು ಬಾಲಕನು ಕೌಶಿಕನ ।
ಕಾಲಿಗೆರಗಲು ಹರಸಿ ಧರ್ಮದಿಂ ರಾಜ್ಯವನು ।
ಪಾಲಿಸೆಂದೆನಲು ಹರುಷದಿ ಬಂದು ಕೋಸಲವ ಪಾಲಿಸಿದ
ಸತ್ಯವ್ರತನು ॥
ಮೂಲೋಕದೊಳಧಿಕನೆಂದೆನಿಸಿ ಕೇಕಯ ನೃ ।
ಪಾಲಕನ ಬಾಲೆಯಂ ವರಿಸಿ ಸುತನಂ ಪಡೆದು ।
ಬಾಳುತಿರ್ದನು ಸುಖದೊಳೇಳಿಗೆಯ ಬಯಸುತ್ತ ಕಾಲಗತಿ
ಚೋದ್ಯವೆನಲು ॥೧॥ ೨೬೯ ॥

***** **ಶುಭಂ** *****

# ಸೀತಾವಿಯೋಗ

ಪ್ರಸಂಗ ವಿಧ :
ಪೌರಾಣಿಕ

ಆಧಾರ ಗ್ರಂಥ :
ಶ್ರೀಮದ್ರಾಮಾಯಣ

ಭಾಷೆ :
ಕನ್ನಡ

ಒಟ್ಟು ಪದ್ಯಗಳು :
೨೪೬

## ಸೀತಾವಿಯೋಗ

### ಪಾತ್ರಗಳು

**ರಾಮ**
**ಭರತ**
**ವಸಿಷ್ಠ**
**ಮಡಿವಾಳ**
**ಮಡಿವಾಳ್ತಿ**
**ಗುಪ್ತಚರ**
**ಲಕ್ಷ್ಮಣ**
**ಸೀತೆ**
**ವಾಲ್ಮೀಕಿ**
**ಲವ**
**ಕುಶ**
**ವಟುಗಳು**
**ಶತ್ರುಘ್ನ**
**ಚಂದ್ರಕೇತು**

# ಸೀತಾವಿಯೋಗ

## ಕಥಾಸಾರಾಂಶ

ಶ್ರೀರಾಮನು ರಾವಣಾದಿಗಳನ್ನು ಸಂಹರಿಸಿ ಪಟ್ಟಾಭಿಷಿಕ್ತನಾಗಿ ಆಸ್ಥಾನದಲ್ಲಿರುವಾಗ ವಾಸಿಷ್ಠನು ಬಂದು ವಸಿಷ್ಠ ಮಹರ್ಷಿಗಳು ೧೨ ವರ್ಷ ಕಾಲ ನಡೆಯುವ ಯಜ್ಞದೀಕ್ಷೆಯನ್ನು ಕೈಗೊಂಡಿರುವ ಸಂಗತಿಯನ್ನು ತಿಳಿಸಿ, ರಾಜನ ಪರಮಧರ್ಮವೆಂದರೆ ಲೋಕರಂಜನೆ; ಅದನ್ನು ಪಾಲಿಸಿ ಕೀರ್ತಿಯನ್ನು ಪಡೆ ಎಂಬ ಸಂದೇಶವನ್ನು ಕೊಟ್ಟಿದ್ದಾರೆಂದು ಹೇಳುತ್ತಾನೆ. ಅದನ್ನು ಕೇಳಿದ ರಾಮ ಲೋಕರಂಜನೆಗಾಗಿ ಸರ್ವಸೌಖ್ಯವನ್ನು, ಅಷ್ಟೇ ಏಕೆ, ಜಾನಕಿಯನ್ನು ಕೂಡ ತ್ಯಜಿಸಲು ಸಿದ್ಧನೆಂದು ಘೋಷಿಸುತ್ತಾನೆ.

ರಜಕನ ಪ್ರವೇಶ. ಅವನ ಮಡದಿ ಮನೆಯಲ್ಲಿಲ್ಲದಿರುವುದನ್ನು ಕಂಡು ಹುಡುಕಾಡುತ್ತಿರುವಾಗ ಎಂಟು ದಿನಗಳಾದ ಮೇಲೆ ಬರುತ್ತಾಳೆ. ಅವಳು ಕೊಟ್ಟ ಕಾರಣವನ್ನು ಒಪ್ಪದೆ ಮನೆಯಿಂದ ಹೊರಗೆ ಹಾಕುತ್ತಾನೆ. ಬಿಟ್ಟ ಹೆಂಡತಿಯನ್ನು ಮತ್ತೆ ಕೂಡಲು ರಾಮನಲ್ಲ ಎನ್ನುತ್ತಾನೆ.

ಅಂದಿನಿರುಳು ರಾಮನಿಗೆ ಗುಪ್ತಚರ ದುರ್ಮುಖನಿಂದ ಸಂಗತಿ ತಿಳಿಯುತ್ತದೆ. ಜನರಿಗೆ ಸೀತೆಯ ಚಾರಿತ್ರ್ಯದ ವಿಷಯದಲ್ಲಿರುವ ಸಂದೇಹವು ಅರಿವಾಗಿ, ಅವಳನ್ನು ತೊರೆಯುವ ನಿರ್ಧಾರ ಮಾಡುತ್ತಾನೆ. ಲಕ್ಷ್ಮಣನನ್ನು ಕರೆದು ಅವಳನ್ನು ಕಾಡಿನಲ್ಲಿ ಬಿಟ್ಟು ಬರುವಂತೆ ಆಜ್ಞಾಪಿಸುತ್ತಾನೆ. ಲಕ್ಷ್ಮಣನು ನಾನಾ ವಿಧವಾಗಿ ಬೇಡಿಕೊಂಡರೂ ಒಪ್ಪುವುದಿಲ್ಲ. ಗರ್ಭಿಣಿಯಾದ ಸೀತೆಯ ಬಯಕೆಯನ್ನು ತೀರಿಸುವ ನೆವದಲ್ಲಿ ಕಾಡಿನಲ್ಲಿ ಬಿಟ್ಟುಬರುವಂತೆ ಹೇಳುತ್ತಾನೆ.

ಲಕ್ಷ್ಮಣನು ಕಾಡಿಗೆ ಕರೆದೊಯ್ಯುವ ಸಂಗತಿ ತಿಳಿದು ಸೀತೆಯು ಸಂತೋಷದಿಂದ ಹೊರಡುತ್ತಾಳೆ. ವನವನ್ನು ಪ್ರವೇಶಿಸಿದಾಗ ಅದರ ಭೀಕರತೆಯನ್ನು ಕಂಡು ಲಕ್ಷ್ಮಣನಲ್ಲಿ ಕೇಳಿದಾಗ ಅವನು ನಿಜವನ್ನು ಹೇಳುತ್ತಾನೆ. ಸೀತೆ ಗೋಳಾಡಿ ತನ್ನ ಸಂದೇಶವನ್ನು ತಿಳಿಸಿ ಲಕ್ಷ್ಮಣನನ್ನು ಬೀಳ್ಕೊಡುತ್ತಾಳೆ. ಲಕ್ಷ್ಮಣ ಕಣ್ಣೀರ್ಗರೆಯುತ್ತ ಮರಳುತ್ತಾನೆ.

ಸೀತೆಯು ದುಃಖಿಸುತ್ತ ಕಾಡಿನಲ್ಲಿ ಸಾಗುತ್ತಿರುವಾಗ ವಾಲ್ಮೀಕಿ ಮುನಿಯು ಕಂಡು ಅವಳನ್ನು ಆಶ್ರಮಕ್ಕೆ ಕರೆದೊಯ್ಯುತ್ತಾನೆ. ಸೀತೆ ಅವಳಿ ಮಕ್ಕಳಿಗೆ ಜನ್ಮ

ನೀಡುತ್ತಾಳೆ. ಮಕ್ಕಳು ಅಲ್ಲಿಯೇ ಬೆಳೆಯುತ್ತಿರುತ್ತಾರೆ.

ರಾಮನು ಅಶ್ವಮೇಧ ಯಾಗವನ್ನು ಕೈಗೊಂಡು ಹಯದ ರಕ್ಷಣೆಗಾಗಿ ಶತ್ರುಘ್ನನನ್ನು ನೇಮಿಸಿರುತ್ತಾನೆ. ಶತ್ರುಘ್ನನ ಸೇನೆ ವರ್ಷದ ಕೊನೆಯಲ್ಲಿ ಮರಳುತ್ತಿರುವಾಗ ವಿಶ್ರಾಂತಿಗಾಗಿ ತಮಸೆಯ ತೀರದಲ್ಲಿ ನೆಲಸಿರುವಾಗ ಸ್ವೇಚ್ಛೆಯಿಂದ ಸಂಚರಿಸುವ ಕುದುರೆಯು ಆಶ್ರಮಪ್ರದೇಶವನ್ನು ಪ್ರವೇಶಿಸಿದಾಗ ಮುನಿವಟುಗಳು ಲವನಿಗೆ ವಿಷಯವನ್ನು ತಿಳಿಸುತ್ತಾರೆ.

ಲವನು ಬಂದು ಕುದುರೆಯ ಹಣೆಯ ಲಿಖಿತವನ್ನೋದಿ ಕೆರಳಿ ಕದಳಿಯ ಮರಕ್ಕೆ ಕಟ್ಟುತ್ತಾನೆ. ಭಟರನ್ನು ಬಡಿದೋಡಿಸುತ್ತಾನೆ.

ಶತ್ರುಘ್ನನಿಗೆ ಈ ಸುದ್ದಿ ತಲುಪಿದಾಗ ಅವನು ಕುದುರೆಯನ್ನು ಬಿಡಿಸಿತರಲು ಹೊರಡುತ್ತಾನೆ. ಆಗ ಲಕ್ಷ್ಮಣ ಕುಮಾರ ಚಂದ್ರಕೇತುವು ಅಪ್ಪಣೆ ಪಡೆದು ಲವನಲ್ಲಿ ಸೆಣಸಿ ಸೋಲುತ್ತಾನೆ. ಶತ್ರುಘ್ನನು ರಣಾಂಗಣವನ್ನು ಪ್ರವೇಶಿಸಿ ಲವನೊಡನೆ ಯುದ್ಧ ಮಾಡುತ್ತಾನೆ. ಲವನನ್ನು ಕಟ್ಟಿ ಕೊಂಡೊಯ್ಯುತ್ತಿರುತ್ತಾನೆ.

ಈ ಸುದ್ದಿ ಸೀತೆಗೆ ತಲುಪುತ್ತದೆ. ಅವಳು ಗೋಳಾಡುತ್ತಿರುವಾಗ ಕುಶನು ಬಂದು ವಿಷಯವನ್ನು ತಿಳಿದು ಯುದ್ಧರಂಗವನ್ನು ಪ್ರವೇಶಿಸಿ ಶತ್ರುಘ್ನನನ್ನು ತಡೆದು ಕಾಳಗದಲ್ಲಿ ಸೋಲಿಸಿ ಲವನನ್ನು ಬಿಡಿಸುತ್ತಾನೆ.

ಲಕ್ಷ್ಮಣನ ಪ್ರವೇಶ. ಯುದ್ಧ. ಸೋಲು.

ರಾಮನಿಗೆ ದೂತರು ಯುದ್ಧವಾರ್ತೆಯನ್ನು ತಿಳಿಸಿದಾಗ ರಣರಂಗಕ್ಕೆ ಪಯಣಿಸುತ್ತಾನೆ. ಅಲ್ಲಿ ಒರಗಿದ ಸೋದರರನ್ನೂ ಸೇನೆಯನ್ನೂ ಕಂಡು ಮರುಗಿ ಮುಂದರಿದಾಗ ಮಕ್ಕಳನ್ನು ಕಂಡು ಮೋಹಗೊಂಡು ಮಾತಾಡಿ ಕೆರಳಿ ಯುದ್ಧಕ್ಕೆ ಸಿದ್ಧನಾದಾಗ ವಾಲ್ಮೀಕಿಯು ಬಂದು ತಡೆದು, ಅವರು ರಾಮನ ಮಕ್ಕಳೆಂಬುದನ್ನು ತಿಳಿಸಿ ತಂದೆ ಮಕ್ಕಳನ್ನು ಒಂದುಗೂಡಿಸುತ್ತಾನೆ. ಮರುದಿನ ಸಮಸ್ತರ ಸಮ್ಮುಖದಲ್ಲಿ ತಾಯಿಯನ್ನು ಕರೆತಂದು ಒಪ್ಪಿಸುವೆನೆನ್ನುತ್ತಾನೆ.

ಮರುದಿನ ಸಭೆಗೆ ವಾಲ್ಮೀಕಿಯು ಸೀತೆ ಹಾಗೂ ಮಕ್ಕಳನ್ನು ಕರೆತಂದು ನಡೆದುದನ್ನು ವಿವರಿಸಿ ಮಡದಿಯನ್ನು ಸ್ವೀಕರಿಸಲು ಕೇಳಿಕೊಳ್ಳುತ್ತಾನೆ. ಜನರೂ ಒತ್ತಾಯಿಸುತ್ತಾರೆ. ರಾಮನು, ಸೀತೆಯು ಶಪಥ ಮಾಡುವಂತೆ ಕೇಳುತ್ತಾನೆ. ಸೀತೆಯು ತಾನು ಪತಿವ್ರತೆಯೆಂಬುದು ದಿಟವಾದರೆ ಭೂಮಿಯು ಬಾಯ್ದೆರೆದು ತನ್ನನ್ನು ಕರೆದೊಯ್ಯಲೆನ್ನುತ್ತಾಳೆ. ಭೂದೇವಿಯು ಸೀತೆಯನ್ನು ಕರೆದೊಯ್ಯುತ್ತಾಳೆ. ರಾಮಾದಿಗಳು ಶೋಕವಿಸ್ಮಿತರಾಗುತ್ತಾರೆ.

## ಸೀತಾವಿಯೋಗ

# **ಪ್ರಸಂಗ ಸಾಹಿತ್ಯ**

**ಭಾಮಿನಿ**

ದುರುಳ ರಾವಣಮುಖ್ಯ ದನುಜರ ।
ಹರಣವಳಿಸಿಯೆ ಸುರರ ಪೊರೆದಾ ।
ಹರಿಯು ಹರ್ಷದಿ ಮರಳಿ ಬಂದನು ಪುರಕೆ ವಿಭವದಲಿ ॥
ಭರತ ತೋಷದಿ ರಾಜ್ಯವೊಪ್ಪಿಸಿ ।
ಧರೆಯ ಭಾರವ ವರಿಸು ನೀನೆನೆ ।
ಕರುಣದಿಂದದನೊಪ್ಪಿ ಪಟ್ಟದಿ ಮೆರೆದನಸುರಾರಿ ॥ ೧ ॥ ೧ ॥

**ಮಧ್ಯಮಾವತಿ – ತ್ರಿವುಡೆ**

ಇನಕುಲೇಂದ್ರನು ರಾಮಚಂದ್ರನು ।
ಘನತೆಯಿಂದಲಿ ಸಿಂಹಪೀಠದಿ ।
ದಿನಪನಂದದಿ ರಾಜಿಸುತ್ತಿರೆ ।
ಜನಪರೆಲ್ಲರು ಮಣಿಯಲು ॥ ಮನ್ನಿಸುತ್ತ ॥ ೧ ॥
ವೇಣು ವೀಣಾಗಾನ ನರ್ತನ ।
ದಾನಮಾನ ವಿನೋದಿ ಚಿನ್ಮಯ ।
ತಾನು ಲೀಲಾಲೋಲನಾಗಿರೆ ।
ಜ್ಞಾನವಾರಿಧಿ ಬಂದನು ॥ ವಾಸಿಷ್ಠನು ॥ ೨ ॥
ಮುನಿಪನನು ಕಂಡೆದ್ದು ಬೇಗದಿ ।
ಜನಪ ಪೀಠವನಿತ್ತು ಮನ್ನಿಸಿ ।
ಮನದಿ ಹರ್ಷವ ತಾಳಿ ಪೇಳಿದ ।
ವಿನಯದಿಂದಾ ಸಭೆಯೊಳು ॥ ರಾಮಚಂದ್ರ ॥ ೩ ॥ ೪ ॥

**ಕೇದಾರಗೌಳ – ಅಷ್ಟ**

ಗುರುಕುಮಾರಕ ನಿನ್ನ ಬರವಿಂದಲೆನಗೀಗ ।
ಹರುಷವುಕ್ಕೇರಿಹುದು ॥
ದುರಿತರಾಶಿಯದೆಲ್ಲ ಹರಿದುದು ವಂಶವು ।
ಪರಮಪಾವನವಾದುದು ॥ ೧ ॥
ಮುನಿಪವಸಿಷ್ಠನೆ ಜನಕನು ನಿನಗೀಗ ।
ಜನನಿಯರುಂಧತಿಯು ॥
ಇನತೇಜಯತಿಪ ನೀ ವನದಿಂದಲೈತಂದ ।
ಘನಕಾರ್ಯವರುಹೆನ್ನೊಳು ॥ ೨ ॥ ೬ ॥

**ತೋಡಿ – ತ್ರಿವುಡೆ**

ಕೇಳು ರಾಘವ ಮುನಿವಸಿಷ್ಠನು ।
ತಾಳಿಹನು ಹನ್ನೆರಡು ವತ್ಸರ ।
ಕಾಲ ನಡೆಯುವ ಯಜ್ಞದೀಕ್ಷೆಯನು ॥
ಬಾಲೆ ಜಾನಕಿಗೂಡಿ ಸೌಖ್ಯದಿ ।
ಬಾಲರನು ಪಡೆದಾಳುವುದು ಮಹಿ ।
ಪಾಲ ಲಾಲಿಸು ಪಿತನ ವಚನವನು ॥ ಪೇಳ್ವೆ ನಾನು ॥ ೧ ॥
ಕಿರಿಯ ನೀನಹೆ ಧರೆಯ ಪೊರೆಯುವ ।
ಹಿರಿಯ ಭಾರವು ಶಿರವನೇರಿದೆ ।
ಚರಿಸಿ ಧರ್ಮವ ವರಿಸು ಕೀರ್ತಿಯನು ॥
ಹರಯ ಭರದಲಿ ಮರೆಯದಿರು ನೀ ।
ಪರಮ ಧನವೀಲೋಕರಂಜನೆ ।
ಯರಿತು ಬಾಳೆಂದೊರೆದ ಪಿತ ತಾನು ॥
ತಿಳಿವುದಿನ್ನು ॥ ೨ ॥ ೮ ॥

**ಸೌರಾಷ್ಟ್ರ – ತ್ರಿವುಡೆ**

ವರಮಹರ್ಷಿಯ ವಚನವೆಂಬುದೆ ।
ಪರಮವೇದದ ಚರಮವಾಕ್ಯವು ।
ಶಿರದಿ ಪೊತ್ತದ ನಡೆಸದಿರ್ದಡೆ । ದುರಿತವೈಸೆ ॥ ೧ ॥

ಲೋಕ ರಂಜನ ವ್ರತವ ಪಾಲಿಪೆ ।
ನೇಕಚಿತ್ತದಿ ತೊರೆದು ಸ್ವಾರ್ಥವ ।
ಲೋಕಪಾವನೆ ಸತಿಯನಾದರು । ನೂಕಲಂಜೆ ॥ ೨ ॥
ಮನುಕುಲೇಶನ ಘನತೆಗೊಲಿಯುತ ।
ಜನಗಳೆಲ್ಲರು ತಲೆಯ ತೂಗಲು ।
ಮುನಿಕುಮಾರನ ಬೀಳುಗೊಟ್ಟನು । ದಿನಪಕುಲಜ ॥ ೩ ॥ ೧೧ ॥

**ಮಾರವಿ – ಏಕ**

ಇತ್ತಲಯೋಧ್ಯಾಪತ್ತನದೊಳಗಾ । ಹೊತ್ತಿಲಿ ಮಡಿವಾಳ ॥
ಮತ್ತತೆಯಿಂದಲಿ ಹತ್ತಿರ ಕರೆದನು ।
ಮತ್ತವ ಮಡದಿಯಳ ॥ ೧ ॥
ಮನೆಯೊಳು ಕಾಣದೆ ವನಿತೆಯ ಹುಡುಕಿದ ।
ಮನೆಮನೆಗಳ ಬಳಿಕ ॥
ಜನಗಳ ಹಾಸ್ಯವ ಮನದೊಳು ಯೋಚಿಸಿ ।
ಕನಲಿದನಾರಜಕ ॥ ೨ ॥
ಎಂಟನೆ ದಿನದಲಿ ತುಂಟಿಯು ಬಂದಳು ।
ನೆಂಟರ ಮನೆಯಿಂದ ॥
ಬಂಟನ ಭಯ ಮನಕಂಟಿರೆ ಕಂಡಳು ।
ಗಂಟುಮುಖದ ಚಂದ ॥ ೩ ॥
ನಲ್ಲನ ಕಾಣುತ ತಲ್ಲಣಗೊಳ್ಳುತ ।
ಮೆಲ್ಲಗೆ ಅಡಿಯಿಟ್ಟು ॥
ಬಲ್ಲಿದ ಪಾಲಿಸು ಸಲ್ಲದು ಕೋಪವು ।
ವಲ್ಲಭ ದಯವಿಟ್ಟು ॥ ೪ ॥ ೧೫ ॥

**ಶಂಕರಾಭರಣ – ಮಟ್ಟೆ**

ಎಲೆಲೆ ನಾರಿ ತೊಲಗು ತೊಲಗು । ನಿಲುವುದೇತಕೆ ॥
ತಿಳುಹದ್ಯೆದಿ ಉಳಿದೆ ಯಾವ । ಖಳನ ಮೋಹಕೆ ॥ ೧ ॥
ಹೇಳಿ ಕಳುಹೆ ಪಿತನು ಪೊರಟೆ । ತಾಳಲಾರದೆ ॥
ನಾಳೆ ನಾಳೆಯೆನುತಲೆಣಿಸೆ । ಕಾಲ ಜಾರಿದೆ ॥ ೨ ॥ ೧೬ ॥

### ತೋಡಿ – ಅಷ್ಟ

ಏನೆಂದೆ । ನಾರಿ । ಏನೆಂದೆ ॥ ಪ ॥
ಏನೆಂದೆ ಎಲೆ ನಾರಿ ಕಾಣುವ ಜನಕೆ ।
ನೀನತಿ ನಗೆಗೇಡು ಮಾಡಿದ್ದು ಸಾಕೆ ॥ ಅ.ಪ.॥
ನಾನಿತ್ತ ದುಗುಡದಿ ದಿನಗಳ ಕಳೆದೆ ।
ನೀನತ್ತ ತವರಿನೊಳ್ ಮೋಜಲಿ ಮೆರೆದೆ ॥
ಮಾನ ಬಿಟ್ಟಾ ಹೆಣ್ಣು ನಾಯಿಗು ಕೀಳು ।
ಹೀನತೆ ತೋರಿದೆ ತಪ್ಪದು ಗೋಳು ॥ ೧ ॥ ೧೮ ॥

### ಶಂಕರಾಭರಣ – ರೂಪಕ

ಇಂದು ಪಾಲಿಸುವುದು ನಲ್ಲ । ಒಂದು ತಪ್ಪನು ॥
ಮುಂದೆಪಾದ ಸೇವೆಗಾನು । ಕುಂದ ತಾರೆನು ॥ ೧ ॥ ೧೯ ॥

### ಸೌರಾಷ್ಟ್ರ – ತ್ರಿವುಡೆ

ಕೆಟ್ಟ ಹೆಂಗುಸೆ ಕುಟ್ಟಿ ಕಳೆಯುವೆ । ಮುಟ್ಟಲಾರೆನು ಭ್ರಷ್ಟೆ ನಿನ್ನನು ।
ಬಿಟ್ಟ ಹೆಣ್ಣನು ಕೂಡೆ ನಾ ರಘು । ಶ್ರೇಷ್ಠನಲ್ಲ ॥ ೧ ॥
ಹೆಚ್ಚು ಮಾತುಗಳಾಡೆ ನಿನ್ನನು । ಕೊಚ್ಚಿ ಕೆಡಹುವೆ ಮಚ್ಚಿನಿಂದಲಿ ।
ಹುಚ್ಚುಮೂಳಿಯೆನುತ್ತ ನೂಕಿದ । ನಚ್ಚಿದವಳ ॥ ೨ ॥ ೨೧ ॥

### ಪಂತುವರಾಳಿ – ರೂಪಕ

ಅಂದಿನಿರುಳು ರಾಮಚಂದ್ರನು । ತನ್ನೋಲಗದೊಳು ।
ಸಂದ ಕಾರ್ಯಗತಿಯ ನೆನೆದನು ॥
ಬಂದು ಗುಪ್ತಗೃಹವ ಸೇರಿ । ಚಂದದಿಂದ ಚಾರರನ್ನು ।
ಇಂದಿರೇಶ ಕರೆದು ಕೇಳ್ದ । ಮಂದಹಾಸದಿಂದಲವನ ॥ ೧ ॥
ದೇಶ ಸುತ್ತಿ ತಂದ ಸುದ್ದಿಯ । ನೀ ಪೇಳು ಬಿಡದೆ ।
ಬೇಸರಿಲ್ಲ ಬೇಡ ಸಂಶಯ ॥
ದಾಸನೆಂಬ ಭಯವ ಬಿಟ್ಟು । ಈಶನೇತ್ರನೆಂಬ ದೃಢದಿ ।
ಲೇಶಬಿಡದೆ ಸತ್ಯಸ್ಥಿತಿಯ । ಮಾಸದಂತೆ ಪೇಳ್ವುದಯ್ಯ
॥ ೨ ॥ ೨೩ ॥

**ಬೇಗಡೆ – ಅಷ್ಟ**

ಕೇಳು ಭೂಪತಿ ಪೇಳ್ವೆ ಸಂಗತಿಯ । ರಾಜಾಧಿರಾಜನೆ ।
ಹಾಳು ದುರ್ಮುಖನೊಳಿಗದ ಕಥೆಯ ॥
ಬಾಳಿಹರು ಸುಖದಾಳಿ ಸರ್ವರು ।
ಪೇಳುವರು ರಘುಪೀಳಿಗೆಯ ಭೂ ।
ಪಾಲರಲಿ ನಿನ್ನಾಳಿಕೆಯು ಜಗ ।
ದೇಳಿಗೆಯ ಹಿರಿಗಾಲವೆನ್ನುತ ॥ ೧ ॥
ಪರಮಪಾವನೆ ಧರಣಿ ನಂದನೆಯ । ಚಾರಿತ್ರ್ಯ ಶುದ್ಧಿಗೆ ।
ಸರಿಯೆ ಮಿಕ್ಕಿನ ತರುಣಿಯರು ಜೀಯಾ ॥
ದುರುಳ ರಾವಣಪುರದ ವಾಸವು ।
ಕೊರತೆಯಂಬರೆಯರಿತ ಗಣ್ಯರು ।
ಸುರೆಯ ಮತ್ತಿಲಿ ಮರುಳ ರಜಕನು ।
ಬರಿದೆ ದೂರಿದನೊರೆಯಲೇನಿದೆ ॥ ೨ ॥ ೨೫ ॥

**ಭಾಮಿನಿ**

ದೂತನಾ ನುಡಿಯಲಗು ಮನುಕುಲ ।
ನಾಥನುರವನು ಭೇದಿಸಲು ತಾ ।
ನಾತುಗೊಳ್ಳದೆ ದುಗುಡಭಾರವ ಧಾತುಗೆಟ್ಟುರುಳಿ ॥
ಖ್ಯಾತ ತಾನೆಚ್ಚೆತ್ತು ಹಲುಬಿದ ।
ಘಾತವಾಯಿತು ಕುಲದ ಕೀರ್ತಿಗೆ ।
ಪಾತಕಿಯು ತಾನಾದೆನೆನುತಲಿ ಸೋತು ಕೊರಗಿದನು ॥ ೧ ॥ ೨೬ ॥

**ನೀಲಾಂಬರಿ – ಆದಿ**

ಏನ ಮಾಡಲಿ ನಾನಿನ್ನು । ಶಿವನೆ ಈ ವಿಧಿಗೆ ।
ಏನ ಮಾಡಲಿ ನಾನಿನ್ನು ॥ ಪ ॥
ಜನಕನಂದಿನಿಯು ಸೀತೆ । ಮನ್ಮನೋಪ್ರೀತೆ ।
ಅನಲಮುಖದಿ ಪುನೀತೆ ॥
ಜನರ ಮುಖದಿ ದೂಷಿತೆ । ತಾನಾದಳಯ್ಯೋ ।
ಒಣಗಿತೆ ಕೀರ್ತಿಲತೆ ॥ ೧ ॥

ಬಿಡುವೆನೆಂದರೆ ಬಾಲೆಯ । ಎನ್ನ ಪ್ರಾಣಕ್ಕೆ ।
ಒಡತಿಯೆಂಬುದು ನಿಶ್ಚಯ ॥
ತಡೆಯಲೆಂತೀ ನಿಂದೆಯ । ಕೈಯಾರೆ ಸುಟ್ಟು ।
ಕೆಡಹಲೆಂತೀ ಬಾಳ್ವೆಯ ॥ ೨ ॥
ಅರಸುಧರ್ಮದ ಬಲೆಗೆ । ಸಿಲುಕಿದೆನಯ್ಯೋ ।
ಬರಡು ಬಾಳಿನ ಕೊನೆಗೆ ॥
ಹರಣದಾಸೆಯ ಪುಟವ । ಬೀಸಾಡುವೆ ।
ಉರಿದುಹೋಗಲಿ ಈ ಜೀವ ॥ ೩ ॥ ೨೯ ॥

### ಭಾಮಿನಿ

ಬಿಟ್ಟು ಕಳೆವೆನು ಸೀತೆಯನು ವನ ।
ಕಟ್ಟಿ ಪಡೆವೆನು ಕೀರ್ತಿಯನು ವಾ ।
ಸಿಷ್ಠಗಿತ್ತಿಹ ಭಾಷೆ ಪಾಲಿಸಿ ಪಟ್ಟವಾಳುವೆನು ॥
ದಿಟ್ಟಲಕ್ಷ್ಮಣಗೊರೆವೆನೆನುತಲಿ । ಥಟ್ಟನನುಜನ ಕರೆದು ರಘುವರ ।
ಗುಟ್ಟಿನಲಿ ಪೇಳಿದನು ವನಿತೆಯ ಬಿಟ್ಟು ಬಾರೆನುತ ॥ ೧ ॥ ೩೦ ॥

### ಭೈರವಿ – ಝಂಪೆ

ಅನುಜಾತ ಘನಶೌರ್ಯ । ಮನದಿ ಚಿಂತಿಪ ಕಾರ್ಯ ।
ವನುಮಾನಿಸದಗೈಯ । ಲೆಣಿಸಬೇಕಯ್ಯ ॥ ೧ ॥ ೩೧ ॥

### ಸುರುಟಿ – ಏಕ

ಅಣ್ಣದೇವ ಕೇಳು । ಎನ್ನನು । ಬಣ್ಣಿಸುವರೆ ಪೇಳು ॥
ಕಣ್ಣಸನ್ನೆ ಸಾಕೆಣ್ಣಿದ ಕಾರ್ಯವ ।
ಚೆಣ್ಣಗೈದು ತಾ ಧನ್ಯನಾಗುವೆ ॥ ೧ ॥ ೩೨ ॥

### ಕಾಂಬೋಧಿ – ಝಂಪೆ

ಅನುಜಾತ ಕೇಳ್ಸೀತೆ । ವನದಿ ಸಂಚರಿಪಾಸೆ ।
ತನಗೆಂದು ಪೇಳಿರ್ದ ನೆವದಿ ॥
ಮಣಿರಥದಿ ಕರೆದೊಯ್ದು । ಜನಕಜೆಯ ಬಿಟ್ಟು ಬಾ ।
ಜನರಹಿತ ಕಾನನದಿ ಜವದಿ ॥ ೧ ॥ ೩೩ ॥

**ನವರೋಜು – ಏಕ**

ಅಗ್ರಜ ಕೇಳೀ ಮಾತು । ಬಲು ।
ಉಗ್ರತೆಯೋಳ್ತಾ ಬಂತು ॥
ಅಗ್ರಗಣ್ಯ ನೀ । ಶೀಘ್ರದಿ ವಿವರಿಸು ।
ನಿಗ್ರಹ ಕಾರಣ । ವ್ಯಗ್ರತೆ ಮೂಡಿದೆ ॥ ೧ ॥ ೩೪ ॥

**ಸಾಂಗತ್ಯ – ರೂಪಕ**

ಅಗಸನ ಮಾತೆಂಬ ಕರಗಸದಿಂದೆನ್ನ ।
ಮುಗುದೆಯ ಕೊರಳ ಕೊಯ್ದಿಟ್ಟೆ ॥
ಸಗರಜ ಕೀರ್ತಿಯ ಕಾಯುವ ದೃಢದಿಂದ ।
ಮಗನೆ ಮಾನಿನಿಯ ಕೈಬಿಟ್ಟೆ ॥ ೧ ॥ ೩೫ ॥

**ಜಂಜೂಟಿ – ರೂಪಕ**

ಏನಿದಣ್ಣದೇವ ಬುದ್ಧಿಶೂನ್ಯನಾದೆಯ ।
ಮಾನಿನಿಯಳ ಗೋಣ ಕೊಯ್ದು ಮಾನ ಪಡೆವೆಯ ॥
ಪಾನಮತ್ತ ರಜಕ ನುಡಿಗದೇನು ಪೂಜ್ಯತೆ ।
ಹೀನಪಾಪ ಕಳೆವ ಗಂಗೆಗೇನು ಮಲಿನತೆ ॥ ೧ ॥ ೩೬ ॥

**ತುಜಾವಂತು – ಝಂಪೆ**

ಅಗಸನಾಡಿದ ಮಾತು ಹೊಗೆಯಾಗಿ ಜಗವೆಂಬ ।
ಗಗನವನೆ ತುಂಬಿಹುದು ಹಗೆಯಾಯಿತೆನಗೆ ॥
ಜಗದಾತ್ಮ ಧರ್ಮವನು ಬಗೆದು ಸೌಖ್ಯವನು ನಾ ।
ಹುಗಿದು ಬಾಳುವೆನು ದಿಟ ಹಗರಣದಿ ಕಡೆಗೆ ॥ ೧ ॥ ೩೭ ॥

**ಸಾಂಗತ್ಯ – ರೂಪಕ**

ಪೊಡವೀಶ ಕೇಳ್ನಿನ್ನ ದಿವ್ಯತೇಜವ ಪೊತ್ತು ।
ಮಡದಿಯಾಮೋದವಾಂತಿಹಳು ॥
ಅಡವಿಯೊಳ್ ಬಿಟ್ಟು ನಾ ಬರುವೆನೆಂತೀಕೆಯ ।
ಸುಡುವುದಯ್ಯೋ ಎನ್ನ ಒಡಲು ॥ ೧ ॥

ಕಾಯುವೆ ನಾನೆಂತು ಕಾಯಸುಖದ ಗಂಟು ।
ತೋಯಜಮುಖಿಯಳ ನಂಟು ॥
ಕಾಯಲು ಧರ್ಮವ ನೋಯುವುದೇನುಂಟು ।
ಜಾಯೆಯ ಋಣವಿನ್ನು ಸಂತು ॥ ೨ ॥ ೩೯ ॥

**ಭಾಮಿನಿ**

ಅಣ್ಣನಾಡಿದ ಮಾತನಾಲಿಸಿ । ಕಣ್ಣನೀರಲಿ ದೇಹ ತೋಯಿಸಿ ।
ಕ್ಷುಣ್ಣನಾಗುತ ಗೈವೆ ಕಾರ್ಯವನಿನ್ನು ಕೇಳೆನುತ ॥
ಸಣ್ಣವನು ತಾ ಪೊರಟು ಬೇಗದಿ ।
ಮಣ್ಣಕುವರಿಯ ಪಾದಕೆರಗಿ ವಿ ।
ಷಣ್ಣನಾಗುತ ಮನದಿ ಬೇಯುತ ಕನ್ನೆಯೊಡನೆಂದ ॥ ೧ ॥ ೪೦ ॥

**ಸೌರಾಷ್ಟ್ರ – ತ್ರಿವುಡೆ**

ಯಾಕೆ ಬಯಸಿದೆ ತಾಯೆ ವಿಪಿನವ ।
ಸಾಕೆ ಸಾಕೇತಾ ಪುರವಾಸ ।
ನೀ ಕಳುಹಿಬಾರೆಂದು ನೂಕಿದ । ಕಾಕುತ್ಥನು ॥ ೧ ॥
ಮಣಿಮಯದ ರಥ ನಿಂತಿದೆ ನಿನ್ನ ।
ಮನೆಯ ಬಾಗಿಲಿನಲ್ಲಿ ಬೇಗದಿ ।
ದಣಿವ ಕಾಣದೆ ವನವ ಸೇರುವಿ । ರೆನುತ ಮಣಿದ ॥ ೨ ॥ ೪೨ ॥

**ಕಾಂಬೋಧಿ – ಏಕ**

ಕಂದ ನೀ ಸೌಮಿತ್ರಿ ಕೇಳು । ಚಂದವಾಯ್ತು ನಿನ್ನ ಮಾತು ॥
ಇಂದು ರಾಮಚಂದ್ರನೊಲಿದ ।
ನೆಂದು ತಿಳಿದೆ ತಪಕೆ ಸೋತು ॥ ೧ ॥
ಹಲವು ಕಾಲದಿಂದ ವನದಿ । ಅಲೆವ ಬಯಕೆಯೆನ್ನ ಮನದಿ ॥
ಫಲಿಸಿತಿಂಥ ಪುಣ್ಯದಿನದಿ । ನಲಿವೆನಿಂದು ಮಿಂದು ಜಲದಿ ॥ ೨ ॥
ಜಾಣನೆಲ್ಲಿ ಕಾಣನಲ್ಲ । ಪ್ರಾಣಕಾಂತ ಬರುವನಲ್ಲ ॥
ಕ್ಷೋಣಿಪಾಲನಿರದೆ ವನದಿ ।
ಕಾಣಲೆಂತು ಸೊಗಸ ಮಡದಿ ॥ ೩ ॥ ೪೩ ॥

## ಭೈರವಿ – ಝುಂಪೆ

ಜನಮತದಿ ರಾಜ್ಯಪಾ । ಲನಗೈವ ಜನಪಾಲ ।
ವನಿತೆಯೊಡನಾಡುವರೆ । ಕ್ಷಣವಿಲ್ಲವೆಂದು ॥
ಅನುಜನನು ಕಳುಹಿರುವ । ಮನದಿ ಬೇಸರ ಬೇಡ ।
ಅನುಮಾನಿಸದೆ ಪೊರಡು । ಜನನಿ ನೀನಿಂದು ॥ ೧ ॥ ೪೬ ॥

## ವಾರ್ಧಕ

ಎನಲು ವೈದೇಹಿ ರಘುರಾಮನಡಿಯಂ ಸ್ಮರಿಸಿ ।
ಮನೆಯ ದೇವರಿಗೆರಗಿ ಹಿರಿಯರಿಗೆ ತಲೆವಾಗಿ ।
ಮುನಿವಧುಗಳಿಂಗೆ ಕಾಣಿಕೆಯ ಕೈಕೊಂಡು ಪರಿಜನರ ಸಂತೈಸಿ ಬಳಿಕ ॥
ಮಣಿರಥವನೇರಿ ಮೆಲ್ಲಗೆ ಸಾಗಿ ಲೋಕಪಾ ।
ವನೆಯೆನಿಪ ಜಾಹ್ನವಿಯ ಬಳಿಸಾರಿ ಭಕ್ತಿಯಲಿ ।
ಮಣಿದು ಭಾಗೀರಥಿಯನುತ್ತರಿಸಿ ಕಾನನದಿ ಮತ್ತೆ ಮುನ್ನಡೆಯುತಿರಲು ॥ ೧ ॥ ೪೭ ॥

## ದ್ವಿಪದಿ

ಮುಂದೆಸವ ವಿಪಿನವನು ವೈದೇಹಿ ಕಂಡು ।
ಮುಂದುಗಾಣದೆ ಬಳಲಿ ಕಡುಭಯದಿ ನೊಂದು ॥ ೧ ॥
ಕಂಡೆಯಾ ಸೌಮಿತ್ರಿ ಕಾನನದ ಪರಿಯ ।
ಹಿಂಡುಹಿಂಡಾಗಲೆವ ಪಶುವರ್ಗನೆಲೆಯ ॥ ೨ ॥
ಘನ ತಪೋವನವಿಲ್ಲ ಜನರ ಸುಳಿವಿಲ್ಲ ।
ಮುನಿವಧುಗಳಿಲ್ಲಿಲ್ಲ ಕಾರಡವಿಯಲ್ಲ ॥ ೩ ॥
ಹೊಲಬುದಪ್ಪಿತೆ ನಿನಗೆ ಇಲ್ಲಿಗೈತಂದೆ ।
ನಲಿವಾಸೆ ಬಯಲಾಯ್ತು ಮನದಿ ಬಲು ನೊಂದೆ ॥ ೪ ॥
ಇಂದು ರಾಮನ ಪಾದಸೇವೆಯನು ಬಿಟ್ಟು ।
ಬಂದುದಕೆ ಸಂದುದೈ ಫಲವು ತನಗಿಷ್ಟು ॥ ೫ ॥
ಎಂದು ಗೋಳಿಡುತಿರುವ ಸೀತೆಯನು ಕಂಡು ।
ಇಂದಿರೇಶನ ಮಾತ ನೆನೆದು ಭಯಗೊಂಡು ॥ ೬ ॥ ೫೩ ॥

**ಭೈರವಿ – ಝಂಪೆ**

ಹೇಳಿದರೆ ಪವಿಪಾತ । ತಾಳುವಳೆ ಈ ಮಾತ ।
ಹೇಳದಿರ್ದೊಡೆ ಯೆನ್ನ । ಊಳಿಗಕೆ ಊನ ॥ ೧ ॥
ಅಣ್ಣನಾಜ್ಞೆಯ ಉರುಳು । ಎನ್ನ ಬಿಗಿದಿಹುದಲ್ಲ ।
ತನ್ನ ಭಾಗ್ಯದ ಬರಹ । ವಿನ್ನೇನೊ ಶಿವನೆ ॥ ೨ ॥
ಕಣ್ಣನೀರಲಿ ಮಿಂದು । ತನ್ನ ಭಾಗ್ಯವ ಹಳಿದು ।
ಬಣ್ಣಗುಂದುತ ಪೇಳ್ದ । ನಣ್ಣನಾಣತಿಯ ॥ ೩ ॥
ಜನಕನಂದನೆ ಕೇಳು । ಜನರ ನಿಂದೆಗೆ ಬೆದರಿ ।
ಜನನಾಥ ಕಳುಹಿದನು । ವನವಾಸಕಾಗಿ ॥ ೪ ॥ ೫೭ ॥

**ಕಂದ**

ಸೌಮಿತ್ರಿಯ ನುಡಿಸಿಡಿಲಾ ।
ಕಾಮಿನಿಯುರವಂ ಭೇದಿಸೆ ಹಾ ಹಾ ಯೆನುತಂ ॥
ಭೂಮಿಯೊಳು ಬಿದ್ದು ಮೈಮರೆ ।
ದಾಮಹಿಜಾತೆ ಚೇತನವಡೆದಳುತೆಂದಳ್ ॥ ೧ ॥ ೫೮ ॥

**ವಾರ್ಧಕ**

ತೊರೆದನೇ ರಘುವೀರನೆನ್ನನಿಂದಿನ ದಿನದಿ ।
ಮರೆದನೇ ಪೂರ್ವಾನುಭೂತ ವಿಶ್ವಾಸಮಂ ।
ಹರಿದುದೇ ಪಾದಸೇವೆಯ ಋಣವು ತನಗಿನ್ನು ಹೊರೆಯಾದೆನೇ ಧರಣಿಗೆ॥
ಅರಿಯರೇನಿದನೆಲ್ಲ ಭರತಾದಿ ಸೋದರರು ।
ಸರಿಯೆಂದರೇನಿದ ಸುಮಂತ್ರಾದಿ ಮಂತ್ರಿಗಳು ।
ಕರುಣಾಳು ರಾಜೇಂದ್ರನಿತ್ತಪನೆ ಕೀರ್ತಿಸತಿಗರಸಿಯಳ ತನು ಬಲಿಯನು ॥ ೧ ॥ ೫೯ ॥

**ಆನಂದಭೈರವಿ – ಏಕ**

ಯಾರಿಗೆ ದೂರಲಿನ್ನು । ಎನ್ನ ಪ್ರಾಣೇಶ । ಮಾರಿದ ಸತಿಯಳನ್ನು ॥
ದಾರಿಯ ತೋರ್ಪರನ್ನು । ನಾ ಕಾಣೆನಯ್ಯೋ ।
ನಾರಿಯ ಪೊರೆವರನ್ನು ॥ ೧ ॥

ಕಂದನ ಮೊಗವ ಕಂಡು । ಬಾಳಿರ್ಪನೆಂದು ।
ಸುಂದರ ಕನಸು ಕಂಡು ॥
ಬಂದೆ ನಾ ನಲಿವೆನೆಂದು । ಕಾಂತಾರದಿ ।
ಕಂದರ ಗತಿಯಾಯ್ತಿಂದು ॥ ೨ ॥
ಎಷ್ಟು ಪೇಳಿದರೇನು । ಜಗದೀಶಗೆ । ದುಷ್ಟೆಯಾದೆನು ನಾನು ॥
ನಷ್ಟವಾಗುವೆನಿಲ್ಲಿ । ಸಂತಸದಿಂದ ।
ಸೃಷ್ಟೀಶ ಬಾಳಿರಲಿ ॥ ೩ ॥ ೬೨ ॥

**ಕಂದ**

ಇಂತಾಕಾಂತಾರದಿ ನೃಪ ।
ಕಾಂತೆಯಳಲುತಿರೆ ಕಂಡು ರಾಮಾವರಜಂ ॥
ಅಂತಃಕರಣದಿ ಮರುಗುತ ।
ಲಂತರ್ಯದ ಸಂತಾಪವನಿಂತೊರೆದನಾಗಳ್ ॥ ೧ ॥ ೬೩ ॥

**ಕೇದಾರಗೌಳ – ಅಷ್ಟ**

ಮಾತೆಯೆ ಮನ್ನಿಸು ಪಾತಕಿ ನಾನಾದೆ । ಘಾತವ ಗೈದೆನೆಂದು ॥
ಭೂತಳಪತಿಯೆಂದ ಮಾತನು ಪಾಲಿಸೆ ।
ಪೇತುಗನಾದೆನಿಂದು ॥ ೧ ॥
ನೇತ್ರವಾರಿಯ ಸೂಸಿ ಗಾತ್ರವ ತಗ್ಗಿಸಿ । ಧಾತ್ರಿಯೊಳುರುಳಾಡಲು ॥
ಮಿತ್ರಕುಲಜ ಸೌಮಿತ್ರಿಯ ನೋಡುತ ।
ಧಾತ್ರಿಜೆಯಿಂತೆಂದಳು ॥೨॥ ೬೪ ॥

**ದ್ವಿಜಾವಂತಿ – ಝಂಪೆ**

ಏಕೆ ನಿಂದಿಹೆ ಪೋಗು ಸೌಮಿತ್ರಿ ಬೇಗ ।
ಭೂಕಾಂತ ಕೋಪಿಸುವ ತಳುವಿದರೆಯೀಗ ॥ ೧ ॥
ಈ ಕಾಡೊಳುಗ್ರಜಂತುಗಳೆನಗೆ ನಂಟು ।
ಏಕಾಕಿ ರಘುನಾಥನಲ್ಲಿ ಯಾರುಂಟು ॥ ೨ ॥
ರಜಕನಾಡಿದ ಮಾತು ಹಿರಿದಾಯ್ತು ದೊರೆಗೆ ।
ನಿಜಸತಿಯ ಪಾವಿತ್ರ್ಯ ಹುಸಿಯಾಯ್ತು ಕಡೆಗೆ ॥ ೩ ॥

ಕರುಣಾಳು ರಾಘವನು ತಪ್ಪುವನೆ ತಾನು ।
ತರುಣಿ ಜನ್ಮದಿ ಬಂದ ಕಡುಪಾಪಿ ನಾನು ॥ ೪ ॥
ಬರುವ ಜನ್ಮಗಳಲ್ಲಿ ಪತಿಯಾಗಲವನು ।
ವಿರಹದುರಿ ಸೋಂಕದಿರಲೆಂದು ಬೇಡುವೆನು ॥ ೫ ॥
ಹಿಂದೆ ದೂರಿದೆ ನಿನ್ನ ಮನ್ನಿಪುದು ಚಿಣ್ಣ ।
ಚೆಂದದಲಿ ಬಾಳುವುದು ಮರೆತೆಲ್ಲರೆನ್ನ ॥ ೬ ॥ ೭೧ ॥

**ವಾರ್ಧಕ**

ತಾಯೆ ಭೂದೇವಿ ನೀ ಕಾಯ್ದುಕೊಳ್ವುದು ಸುತೆಯ ।
ನೋಯದಂತೀ ವನದಿ ಪೋಪೆ ತಾನೆಂದೆನುತ ।
ಲಾಯಸಂಬಡುತ ಬಿಸುಸುಯ್ದು ತೆರಳುತ್ತ
ಮರಳುತ್ತಲುಯ್ಯಲೆಯವೋಲು ॥
ತೋಯಜಾಕ್ಷಿಯ ಬಿಟ್ಟು ಸೌಮಿತ್ರಿ ಪೋಗುತಿರ ।
ಲಾಯ ತಪ್ಪಿಯೆ ಬಿದ್ದು ಮೈ ಮರೆದು ಬಳಿಕೆದ್ದು ।
ಬಾಯಬಿಟ್ಟೊರಲಿದಳು ತನ್ನ ಭಾಗ್ಯವ ಹಳಿದು ರಾಯನರಸಿಯು
ವನದೊಳು ॥ ೧ ॥ ೭೨ ॥

**ಸಾಂಗತ್ಯ – ರೂಪಕ**

ನಡೆಯುವೆ ನಾನೆಂತೀಯೆಡೆಯೊಳು ಶಿವ ಶಿವ ।
ನಡುಗುವುದಯ್ಯೋ ಎನ್ನೆದೆಯು ॥
ಪೊಡವಿಪನರಸಿಯ ಹುಡುಕುತ ಬಂದಿತೆ ।
ಹುಡಿಯೊಳು ಹೊರಳುವ ವಿಧಿಯು ॥ ೧ ॥
ಬತ್ತಿದೀ ಬದುಕನ್ನು ಹೊತ್ತುಳಿವುದಕಿಂತ । ಕುತ್ತವ ಕಳೆವುದೆ ಲೇಸು ॥
ಹೊತ್ತೆನು ಬಸುರನ್ನು ಮತ್ತಾವ ಭಾಗ್ಯಕೊ ।
ಸತ್ತೆನೆಂದರು ಕಯ್ಯ ಬಿಡದು ॥ ೨ ॥
ಜನಕರಾಯನೆ ತಂದೆ ಜನನಿಯೆ ಭೂದೇವಿ ।
ಇನಕುಲೇಶನೆ ಪಟ್ಟದರಸ ॥
ಅನಲ ತಾ ಸುಡಲಿಲ್ಲ ಜನಗಳು ಸುಟ್ಟರು ।
ವನಕಾಗಿ ಕಳೆದೆನೆ ವರುಷ ॥ ೩ ॥ ೭೩ ॥

**ಭಾಮಿನಿ ಅರ್ಧ**

ವನಿತೆ ತಾನತಿ ಶೋಕಭಾರದಿ ।
ತನುವ ಮರೆದಾ ವನದೊಳೊರಗಿರೆ ।
ಮನದೊಳರಿದೈತಂದು ನುಡಿಸಿದ ಮುನಿಪ ವಾಲ್ಮೀಕಿ ॥ ೧ ॥ ೭೬ ॥

**ನವರೋಜು – ಏಕ**

ಯಾರಮ್ಮಾ ಈ ವನಕೆ । ಬಹ । ಕಾರಣ ಪೇಳ್ ನೀ ದಿಟಕೆ ॥
ನಾರಿಯೆ ನಿನ್ನಯ ನೀರಜ ನೇತ್ರದಿ ।
ತೋರುವ ಶೋಕದ ವಾರಿಯಿದೇನಿದು ॥ ೧ ॥
ಭೀತಿಯ ನೀ ಬಿಡು ಬೇಗ । ಪ್ರಾ ।
ಚೇತಸ ನಾ ತಿಳಿಯೀಗ ॥
ಖಾತಿಯ ಘಾತಿಸಿ ನೀತಿಯ ಪ್ರೀತಿಸಿ ।
ಭೂತಹಿತಕೆ ಮನಸೋತರ ಕುಲಪತಿ ॥ ೨ ॥ ೭೮ ॥

**ದೇಶಿ – ಅಷ್ಟ**

ಮುನಿಪಾಲ ಕೇಳಯ್ಯ ಬಾಳಿನ ಕಥೆಯ ।
ಎನಗೀಗ ಬಂದಿರ್ಪ ಘನತರ ವ್ಯಥೆಯ ॥
ಜನಕರಾಯಗೆ ನಾನು ಅವನಿಯೊಳ್ ದೊರೆತೆ ।
ಜನಪನಿಂದೆನಗಾಯಿತಭಿಧಾನ ಸೀತೆ ॥ ೧ ॥
ಹರಧನುವೆತ್ತಿದ ಶ್ರೀರಾಮ ರಮಣ ।
ದುರುಳ ರಾವಣ ತೆತ್ತನೆನಗಾಗಿ ಹರಣ ॥
ದೊರೆಯಾದ ರಘುವೀರ ಕೋಸಲ ಧರೆಗೆ ।
ಗುರಿಯಾಗಿ ಬಂದಿಹೆ ಜನರ ನಾಲಿಗೆಗೆ ॥ ೨ ॥ ೮೦ ॥

**ಮಧ್ಯಮಾವತಿ – ತ್ರಿವುಡೆ**

ಲೋಕಪಾಲಕ ರಾಮಚಂದ್ರ ತ್ರಿ ।
ಲೋಕಪಾವನೆ ಧರಣಿಜಾತೆಯ ।
ಲೋಕನಿಂದೆಗೆ ಭೀತಿಗೊಳ್ಳುತ ।
ನೂಕಿದನೆ ಕಾರಡವಿಗೆ ॥ ಚಿತ್ರವಾಯ್ತು ॥ ೧ ॥

ಅರಗಳಿಗೆ ಯೋಚಿಸುತಲೆಂದನು ।
ಧರೆಯ ಬದುಕಿದು ಶೋಕಮೂಲವು ।
ಮರುಗಲೇನಿದೆ ಪ್ರಾಜ್ಞನೆನುತಲಿ । ಧರಣಿಜಾತೆಗೆ ಪೇಳ್ದನು ॥
ಮುನಿಪ ದಯದೀ ॥ ೨ ॥ ೮೨ ॥

### ಜಂಗಲಾ – ಏಕ

ಚಿಂತೆಯಿದೇತಕೆ ಬಿಡು ನೀ ಭ್ರಾಂತಿಯ । ಕಾಂತೆಶಿರೋಮಣಿಯೆ ॥
ಸಂತಾನದ ಸೌಭಾಗ್ಯದಿ ಶೋಭಿಸಿ ।
ಸಂತಸ ತಳೆಯುವೆಯೆಲೆ ತಾಯೆ ॥ ೧ ॥
ಅನ್ಯನು ನಾನೆಂಬೆಣಿಕೆಯ ಬಿಡು ನೀ । ಗಣ್ಯಪಿತಗೆ ಸಖನು ॥
ಪುಣ್ಯೋದಯಕಾಲವ ಕಾದಿರು ನಡೆ ।
ಯೆನ್ನಾಶ್ರಮದೆಡೆ ನೀನಿನ್ನು ॥ ೨ ॥ ೮೪ ॥

### ಭಾಮಿನಿ

ಕಾಲಗತಿಯನು ಮೀರಲಸದಳ ।
ವೇಳುಬೀಳುಗಳಿಲ್ಲಿ ಸಹಜವು ।
ಪೇಳಲೇನದನಜಕಪಾಲದಿ ಶೂಲಿ ಬಳಲಿದನು ॥
ಬಾಲೆ ಮರುಗದಿರೇಳು ಧೈರ್ಯವ ।
ತಾಳು ನಡೆಯೆನ್ನಾಶ್ರಮಕೆಯೆಂ ।
ದಾಲತಾಂಗಿಯ ಸಂತವಿಸಿ ಕರೆದೊಯ್ದ ವಾಲ್ಮೀಕಿ ॥ ೧ ॥
ಇನಕುಲೇಶನ ಪಟ್ಟದರಸಿಗೆ ।
ವನವೆ ನೆಲೆವನೆಯಾಯ್ತು ಶಿವಶಿವ ।
ದಿನವ ನೂಕುತಲಿರ್ದಳವನಿಜೆ ಮನದ ದುಗುಡದಲಿ ॥
ವನಿತೆ ಪಡೆದಳು ತನಯರೀರ್ವರ ।
ದಿನಪಕುಲಜರು ಕುಶಲವರು ಕಾ ।
ನನದೊಳನುದಿನ ಬೆಳೆವುತಿರ್ದರು ಮುನಿಪಕರುಣದಲಿ
॥ ೨ ॥ ೮೬ ॥

### ವಾರ್ಧಕ

ಇತ್ತಲಾ ರಾಮ ತನ್ನನ್ವಯಕೆ ರಾವಣನ ।
ಹತ್ಯೆಯಿಂ ಬ್ರಹ್ಮಹತ್ಯಾಪಾಪ ಘಟಿಸಿತದ ।
ನುತ್ತರಿಪ ಬಗೆಯಾವುದೆಂದು ಬೆಸಗೊಂಡು ಮುನಿಪೋತ್ತಮರ ಮತದಿಂದಲಿ ॥
ಉತ್ತಮಾಶ್ವವ ತರಿಸಿ ಹಯಮೇಧ ದೀಕ್ಷೆಯಂ ।
ಪೊತ್ತು ಶತ್ರುಘ್ನನಂ ಸೇನಾನಿಯಂ ಮಾಡಿ ।
ತತ್ತುರಗ ರಕ್ಷಣೆಗೆ ನಿಯಮಿಸಲ್ಕಾವಾಜಿ ಪೃಥ್ವಿಯೊಳ್ ಸಂಚರಿಸಿತು ॥ ೧ ॥ ೮೭ ॥

### ಕಾಂಬೋಧಿ – ಝಂಪೆ

ಶತ್ರುಘ್ನ ಸೇನೆಗಳ ಸೂತ್ರಗಳ ಧರಿಸುತ್ತ ।
ಸತ್ರತುರಗದ ರಕ್ಷೆಗೊಲಿದು ॥
ಶತ್ರುಗಳ ಮರ್ದಿಸುತ ಮಿತ್ರರನು ಸಲಹುತ್ತ ।
ಗೋತ್ರಹರನಂತೆ ನಡೆತಂದು ॥ ೧ ॥
ತಮಸೆಯಾ ತಟದಲ್ಲಿ ಕಮನೀಯ ಸೌಂದರ್ಯ ।
ಸಮನಾರು ತನಗೆನ್ನುತಿರಲು ॥
ರಮಣೀಯ ವನಚರಿಸಿ ತಮಹಾರಿಯೊಳು ಮಿಂದು ।
ಶ್ರಮಕಳೆವ ಮನವ ತಾಳಿರಲು ॥ ೨ ॥
ಉತ್ತಮಾಶ್ವವು ವಿಪಿನ ಸುತ್ತುತ್ತ ಮುನಿಪವನ ।
ದೊತ್ತಿನಲಿ ಮೇಯುತ್ತಲಿರಲು ॥
ಚಿತ್ತದೊಳಗಾಶ್ಚರ್ಯವೆತ್ತೋರ್ವ ಮುನಿಪುತ್ರ ।
ಹತ್ತಿರಕೆ ಕರೆದು ಮಿತ್ರರೊಳು ॥ ೩ ॥ ೯೦ ॥

### ಬಿಲಹರಿ – ಅಷ್ಟ

ಮಾಣಿಗಳೆಲ್ಲರು ಕೇಳಿ । ಬಂದ ।
ಪ್ರಾಣಿಯಾವುದು ನೀವು ಪೇಳಿ ॥ ಪ ॥
ಕ್ಷೋಣಿಯೊಳತಿ ಚೋದ್ಯ ನಾನೀಗ ಕಂಡೆನು ।
ಜಾಣರಾದರೆ ಮನಗಾಣಿಸಿಕೊಳ್ಳಿರಿ ॥ ಅ.ಪ॥

ಹೊತ್ತಿದೆ ಭಾರಿಯ ಮಯ್ಯ । ಅದ ।
ಸುತ್ತಿದೆ ಮಣಿಜಾಲವಯ್ಯ ॥
ಬೆತ್ತವ ಹಿಡಿದಿಹ ಸುತ್ತಣ ಜನಗಳು ।
ಹತ್ತಿರ ಹೋಗಲು ಬಿಟ್ಟಿಲ್ಲ ಸುಳ್ಳಲ್ಲ ॥ ಮಾಣಿ ॥ ೧ ॥
ಹಿಂಗಡೆ ಜೋಲುವ ಬಾಲಾ । ತಾನು ।
ರಂಗಿಲಿ ತೂಗುವ ಲೀಲಾ ॥
ಅಂಗವ ನೋಡಲು ಕಂಗಳು ಸಾಲವು ।
ಚಂಗು ಚಂಗನೆ ವೋಡಿ ಸಂಗಡ ಬನ್ನಿರಿ ॥ ಮಾಣಿ ॥ ೨ ॥
ಮಾವಿನ ಗಾತ್ರದ ಉಂಡೆ । ಹಿಂದೆ ।
ಠೀವಿಲಿ ಬೀಳ್ವುದ ಕಂಡೆ ॥
ನಾವಿಲ್ಲಿ ನಿಂತರೆ ತಾವನ್ನೆ ಬಿಡುವುದು ।
ಭಾವಿಸಿ ಕಾಂಬರೆ ಧಾವಿಸಿ ಬನ್ನಿರಿ ॥ ಮಾಣಿ ॥ ೩ ॥ ೯೩ ॥

## ಭಾಮಿನಿ

ಕುವರನಾಡಿದ ನುಡಿಗೆ ವಟುಗಳಿ ।
ದವನಿಯೊಳಗಾಶ್ಚರ್ಯವೆನುತಲಿ ।
ತವಕಗೊಳ್ಳುತ ಭರದಿ ಕರೆದರು ಲವಕುಮಾರಕನ ॥
ಬವರಗಲಿಯ್ಯೆತಂದು ಬೇಗದೊ । ಳವಸರವಿದೇನೆನುತ ಬೆಸಗೊಳ ।
ಲಿವರು ಪೇಳಲು ಕೇಳುತೊರೆದನು ಜವದಿ ಬಾಲರಲಿ
॥ ೧ ॥ ೯೪ ॥

## ನಾದನಾಮಕ್ರಿಯೆ – ಅಷ್ಟ

ಬಾಲಕರೆಲ್ಲರು ಕೇಳಿರಿ । ಭೂಮಿ । ಪಾಲಕನಶ್ವವು ತಿಳಿಯಿರಿ ॥
ಕೇಳಿದ ಹಯಶಾಸ್ತ್ರ ನೆನೆಯಿರಿ । ಅದ ।
ಪೋಲುವ ಪಶುವೆಂದು ಬಗೆಯಿರಿ ॥ ೧ ॥
ತವಕವಿದ್ದರೆ ಬೇಗ ಏಳಿರಿ । ಬಂದ ।
ಹವಣ ವಿಚಾರಿಪ ಸಾಗಿರಿ ॥
ಕವಿಗುರುವಾಶ್ರಮದೊಳಗಿಲ್ಲ । ವನ ।
ಬುವಿಯನ್ನು ಕಾಯುವ ನಾವೆಲ್ಲ ॥ ೨ ॥

ಲವನೆಂದ ಮಾತಿಗೆ ಒಲಿಯುತ್ತ । ಮುನಿ ।
ಕುವರರು ಹರ್ಷದಿ ಕುಣಿಯುತ್ತ ॥
ಜವದಿಂದಲೋಡೋಡಿ ಬಂದರು । ನಿಂದ ।
ಜವನದ ಪರಿಯನ್ನು ಕಂಡರು ॥ ೩ ॥ ೯೭ ॥

**ಕಂದ**

ಹರಿಯೆಡೆ ಸಾರ್ದಾವಟುಗಳ್ ।
ಹರುಷದಿ ಹರಿದಾಡುತ್ತಿರೆ ಕಾಣುತಲಾಗಳ್ ॥
ಹರಿತನುಜಂ ಹರಿಹಾಯುತ ।
ಹರಿಯಂತಾರ್ಭಟಿಸುತಲವರೊಡನಿಂತೊರೆದಂ ॥ ೧ ॥ ೯೮ ॥

**ಸೌರಾಷ್ಟ್ರ – ತ್ರಿವುಡೆ**

ನೋಡಿದಿರೆ ಬಾಲಕರು ಮೆರೆಯುವ ।
ರೂಢಿಪಾಲನ ಹಯದ ಪರಿಯನು ।
ಕಾಡಿಗಧಿಪತಿ ತಾನೆಯೆಂಬ ಸ । ಗಾಢದಿಂದ ॥ ೧ ॥
ಕೆಡಿಸಿತೀವನಸಿರಿಯನೇನಿದು । ಪೊಡವಿಪಾಲಕ ಬುದ್ಧಿಶೂನ್ಯನೆ ।
ಹಿಡಿದು ನೋಡುವ ಯಾರದೆನುತಲಿ । ತಡೆಯದೀಗ ॥ ೨ ॥
ಹತ್ತಿರಕೆ ಬಂದಾಗ ತುರಗದ । ನೆತ್ತಿಯೊಳು ಶೋಭಿಸುವ ಲಿಖಿತವ ।
ನೆತ್ತಿ ವಾಚಿಸತೊಡಗಿದನು । ಲವನರ್ತಿಯಿಂದ ॥ ೩ ॥ ೧೦೧ ॥

**ಕೇದಾರಗೌಳ – ಅಷ್ಟ**

ತರಣಿ ವಂಶಜರಾಮ ಧರಣಿಯೊಳ್ ನಿಸ್ಸೀಮ ।
ತುರಗಮೇಧವ ಮಾಳ್ಪನು ॥
ಪರಮವಿಕ್ರಮಿಗಳು ಹರಿಯನ್ನು ಬಂಧಿಸಿ ।
ಧುರವನ್ನು ಕೊಡಬಹುದು ॥ ೧ ॥
ರಣಕಂಜಿ ನಡೆವರು ಕನಕಾದಿಗಳ ಕೊಟ್ಟು ।
ಮಣಿಯಲು ಪಾದದೊಳು ॥
ದಣಿಸದೆ ಪೊರೆವನು ರಣಗಲಿ ಶತ್ರುಘ್ನ ।
ಗಣಿಸುವ ಮಿತ್ರರೊಳು ॥ ೨ ॥

ವಾಜಿಯ ಪಣೆಯಲಿ ರಾಜಿಪ ಲೇಖವ ।
ರಾಜತನೂಜ ನೋಡಿ ॥
ಸೋಜಿಗದಿಂದೋದಿ ತೇಜದಿಂದುರಿಯುತ್ತ ।
ಲಾಜಿಗೆ ಮನವ ಮಾಡಿ ॥ ೩ ॥ ೧೦೪ ॥

**ನಾದನಾಮಕ್ರಿಯೆ – ಅಷ್ಟ**

ದುರುಳ ರಾವಣನನ್ನು ಶೌರ್ಯದಿ । ತಾನು ।
ತರಿದವನೆನ್ನುವ ಗರ್ವದಿ ॥
ಮೆರೆಯುವ ರಾಘವನೆಂಬನು । ಇಂದು ।
ಧರಣಿದೇವಿಯು ಬಂಜೆಯೆಂದನು ॥ ೧ ॥
ಮಾರಿತೆ ಪೌರುಷ ರಾಮಗೆ । ಬಳಿ । ಸಾರಿತೆ ಷಂಢತೆ ವೀರರ್ಗೆ ॥
ಮೇರೆದಪ್ಪಿದ ಮದ ಮುರಿಯುವೆ । ರಣ ।
ಮಾರಿಗೆ ಹಬ್ಬವ ಕರೆಯುವೆ ॥ ೨ ॥ ೧೦೬ ॥

**ಭೈರವಿ – ತ್ರಿವುಡೆ**

ಜನಪಕುವರನ ವೀರವಾಕ್ಯವ । ಮುನಿಕುಮಾರರು ಕೇಳುತ ॥
ಧನುವ ಪಿಡಿದಿಹ ತರಳಗೆಂದರು ।
ಮನದಿ ಭಯವನು ತಾಳುತ ॥ ೧ ॥
ಲವನೆ ಕೇಳೈ ಅವನಿಪಾಲನ । ಸವನಹಯವಿದ ಕಟ್ಟಲು ॥
ಜವನ ದೂತರ ಹಬ್ಬವೆನಿಸುವ ।
ಬವರ ಬಪ್ಪುದು ತಿಳಿಯಲು ॥ ೨ ॥
ಬಡವ ಕೋಪಿಸಲೇನು ಫಲವೈ । ಒಡೆವುದಾತನ ದವಡೆಯು ॥
ತೊಡೆಯು ಮುರಿಯಲು ದಾರಿಯಲ್ಲವೆ ।
ಹುಡುಗನತಿ ಹಾರಾಟವು ॥ ೩ ॥
ಹೊಂಗೆಮರದಾ ತೊಂಗಲಲ್ಲಿ । ಮಂಗನಾಟವನಾಡುವ ॥
ಭಂಗಪಡುವುದು ಸಾಕು ಏಳೈ ।
ಸಂಗವೇತಕೆ ಭೂಪರ ॥ ೪ ॥ ೧೧೦ ॥

## ಕೇದಾರಗೌಳ – ಝಂಪೆ

ಕುವರರೆಂದುದನು ಕೇಳಿ । ನುಡಿದನಾ ।
ಲವನು ರೋಷವನು ತಾಳಿ ॥
ಬವರವೆಂಬುದ ಬಲ್ಲೆನು । ಕ್ಷಣದೊಳಗೆ ।
ಸವರುವೆನು ವೈರಿಗಳನು ॥ ೧ ॥
ಧಾರಿಣಿಗೆ ರಾಮನೋರ್ವ । ಧುರದೊಳಗೆ ।
ಧೀರ ತಾನೆಂಬ ಗರ್ವ ॥
ಹಾರಿಸದೆ ಪೋದರಾನು । ಕ್ಷೋಣಿಗತಿ ।
ಭಾರಕನು ಪೇಳಲೇನು ॥ ೨ ॥
ಎಂದು ಪೌರುಷವಾಡುತ । ಲವ ತಾನು ।
ಬಂದು ತುರಗವ ಪಿಡಿಯುತ ॥
ತಂದು ಕದಳಿಯ ಮೂಲಕೆ । ಕಟ್ಟುತ್ತ ।
ನಿಂದ ಸಹಸಿಯು ಯುದ್ಧಕೆ ॥ ೩ ॥ ೧೧೩ ॥

## ಕಂದ

ಲವನಾ ಹರಿಯಂ  ಬಿಗಿದು ತ ।
ರುವಿನೆಡೆಯೊಳ್ ಧನುಗೊಂಡುತ್ಸಹದಿಂದಾಗಳ್ ॥
ಹವಕನುವಾಗಿರೆ ಕಾಪಿಗ ।
ರವನಂ ನುಡಿಸಿದರುರುತರ ಲಘುನುಡಿಯಿಂದಂ ॥ ೧ ॥  ೧೧೪ ॥

## ನವರೋಜು – ಏಕ

ತುಂಟನಾದೆಯೋ ಎಲೆ ಮಾಣಿ । ನಿನ್ನ ।
ಸೊಂಟ ಮುರಿವುದು ದೇವರಾಣಿ ॥
ತುಂಟತೆಯಿಂದಲಿ ಬಂಟರನರಿಯದೆ ।
ಗಂಟಲಗಾಣದ ನಂಟತೆ ಮಾಳ್ಪರೆ ॥ ೧ ॥
ಪಾಣೀಪಂಚೆಯ ನಡುಕಟ್ಟು । ನಿನ್ನ ।
ಗೋಣಿನ ಮೇಲಕೆ ಮರಿಜುಟ್ಟು ॥
ಮಾಣಿಯ ಕಯ್ಯಲಿ ಬಾಣವ ಕಂಡರೆ ।
ಚೂಣಿಯ ವೀರರು ಪ್ರಾಣವ ಬಿಡುವರೆ ॥ ೨ ॥

ಗಂಡರ ಗಂಡನು ಶತ್ರುಘ್ನ । ಅವ ।
ಕಂಡರೆ ತಡೆಯನು ಈ ವಿಘ್ನ ॥
ಉಂಡೆಯ ಹಂಡೆಯ ತುಂಡಾಗಿಸು ನಡೆ ।
ಮಂಡೆಯ ತೆರೆದಿರು ಪುಂಡಾಟದಿ ನೀ ॥ ೩ ॥ ೧೧೭ ॥

**ಪರಿವರ್ಧಿನೀ**

ಆಲಿಸಿ ಚಾರಕರಾಡಿದ ನುಡಿಯನು ।
ಆಲಿಗಳುರಿಯಲು ಕಾರುತ ಕೆಂಗಿಡಿ ।
ಬಾಲನ ಪರಿಯನು ನೋಡಿರಿ ನೀವೀಗೆನುತಲಿ ಧನು ಸೆಳೆದು ॥
ಲೀಲೆಯೊಳವ ಶರಜಾಲವ ಬೀರಲು ।
ಶೂಲಿಯೊ ಕಾಲನೊ ಕೋಲನು ತಾಳೆವು ।
ಬಾಳುಳಿದರೆ ಸಾಕೆಂದೋಡುತ ಶತ್ರುಘ್ನಗೆ ದೂರಿದರು
॥ ೧ ॥ ೧೧೮ ॥

**ಪುನ್ನಾಗ – ಅಷ್ಟ**

ಸ್ವಾಮಿಯೆ ಶರಣೆಂಬೆವು । ಮಹಾ । ಸ್ವಾಮಿಯೆ ಶರಣೆಂಬೆವು ॥ ಪ ॥
ಸ್ವಾಮಿಯೆ ನಮ್ಮಯ ಪ್ರೇಮದ ದೇವನು ।
ಕಾಮಿತವೀಯುವ ಸಾಮರ್ಥ್ಯವಂತನು ॥ ಅ.ಪ.॥
ಧಾರಿಣಿ ಸುತ್ತುವ ತುರಗ । ಬಂದು । ಸೇರಿತು ಈ ವನಸೆರಗ ॥
ಭಾರಿಯ ವೀರರ ಸ್ವಾರಿಯ ಕಂಡಿಲ್ಲ ।
ಪೋರನು ತಾನೊಬ್ಬ ಭೋರನೆ ಕಟ್ಟಿದ ॥ ಸ್ವಾಮಿಯೆ ॥ ೧ ॥
ಅವನಾವ ರಾಯನ ಮಗನೊ । ಮತ್ತೆ ।
ದಿವಿಜನಾಥನೊ ಕಾಲನಹನೊ ॥
ಕುವರನ ಕಂಡರೆ ತವಸಿಯ ಸುತನಂತೆ ।
ಅವನಿಯೊಳಿದಿರಿಲ್ಲ ಬವರದೊಳಾತಗೆ ॥ ಸ್ವಾಮಿಯೆ ॥ ೨ ॥
ಪೇಳಲೇನೆಳೆಯ ಬಾಲಕನು । ನೋಡೆ ।
ಕೋಲುಮಿಂಚಿನ ಸರಿಸಮನು ॥
ಕೇಳಿದರಾತನ ಕೋಲಿನೊಳಿಟ್ಟನು ।
ತಾಳಲಿಕಾರದೆ ಪೇಳಲು ಬಂದೆವು ॥ ಸ್ವಾಮಿಯೆ ॥ ೩ ॥ ೧೨೧ ॥

**ವಾರ್ಧಕ**

ಚರರೆಂದ ಮಾತುಗಳನಾಲಿಸಿಯೆ ಶಿರವೊಲಿದು ।
ತರಳನೋರ್ವಂ ತುರಗಮಂ ಕಟ್ಟಿದನೆ ಕಾದ ।
ಲುರವಣಿಸಿದನೆ ರಘುಜಗಿದಿರಾಗಿ ಮಝುಭಲರೆ ಧರೆಗಿದು ವಿಚಿತ್ರವೆನುತ॥
ಅರಿಸೂದನನು ಮನದಿ ಚಿಂತಿಸುತಿರಲ್ಕಂಡು ।
ಶರಚಾಪಮಂ ಕೊಳ್ಳುತುರುತರಾವೇಶದಿಂ ।
ದುರುಳನಂ ತರಿವೆ ತಾನೆಂದುಬ್ಬಿ ಬೊಬ್ಬಿರಿದ ಧುರಧೀರ ಚಂದ್ರಕೇತು
॥ ೧ ॥ ೧೨೨ ॥

**ಮಾರವಿ – ಏಕ**

ಜನಕನೆ ಬಿಡುಬಿಡು ಮನಸಿನ ಚಿಂತೆಯ ।
ತನುಜನು ನಾನಿರಲು ॥
ಅನುಮತಿಯಿತ್ತಾಕ್ಷಣ ಹಯ ತರುವೆನು ।
ಸೆಣಸುತ ಬಾಲನೊಳು ॥ ೧ ॥
ಭೋರ್ಗುಡಿಸುವ ಬಲು ಮಾರ್ಗಣ ವರ್ಗದಿ ।
ಕಾರ್ಗಾಲವ ತೋರಿ ॥
ಭಾರ್ಗವನಾಗಲಿ ಭರ್ಗನೆಯಿರಲವ । ನೀರ್ಗುಡಿಸುವೆ ಸಾರಿ ॥ ೨ ॥
ಲಕ್ಷ್ಮಣತರಳನಪೇಕ್ಷಣವಾಲಿಸಿ । ಪಕ್ಷ್ಮವನರಳಿಸುತ ॥
ತಕ್ಷಣದಲಿ ಜಯಲಕ್ಷ್ಮಿಯ ವರಿಸೆನ । ಲಿಕ್ಷ್ವಾಕುಜಖ್ಯಾತ ॥ ೩ ॥
ತಾತನ ಬಳಿಯಿಂದಾತನು ಪೊರಟು ವ । ರೂಥದಿ ನಡೆತಂದು ॥
ಸೀತಾಸುತನನು ಖಾತಿಯೊಳೀಕ್ಷಿಸಿ ।
ಮಾತಾಡಿದನಂದು ॥ ೪ ॥ ೧೨೬ ॥

**ಶಂಕರಾಭರಣ – ಮಟ್ಟೆ**

ತರಳ ನೀನದಾರು ಪೇಳು । ಹರಿಯ ತುರಗ ಕಟ್ಟಿ ಬರಿದೆ ।
ಧುರದಿ ಪ್ರಾಣ ತೆರುವೆಯರಿತು । ತೆರಳು ಸುಮ್ಮನೆ ॥ ೧ ॥
ಮುನಿಪ ಕರುಣದಿಂದಲಾನು । ವನದಿ ಬೆಳೆದ ಕುವರ ಲವನು ।
ಜನಪಜಾತ ನಿನ್ನ ನಾಮವೆನಗೆ ತಿಳುಹಿಸು ॥ ೨ ॥

ಮಿತ್ರಕುಲಜ ಲಕ್ಷ್ಮಣಾಂಕ । ಪುತ್ರ ನಾನು ಚಂದ್ರಕೇತು ।
ಸತ್ರತುರಗ ಬಿಡಲು ನಿನಗೆ । ಮಿತ್ರನಾಗುವೆ ॥ ೩ ॥
ಸೃಷ್ಟಿಪಾಲ ಗರ್ವದಿಂದ । ಭ್ರಷ್ಟನಾದನದಕೆ ಹರಿಯ ।
ಕಟ್ಟಿ ಧುರಕೆ ನಿಂತೆ ನಾನು । ಬಿಟ್ಟು ಕೊಡುವೆನೆ ॥ ೪ ॥ ೧೩೦ ॥

**ಕೇದಾರಗೌಳ – ಝಂಪೆ**

ಧರೆಗಿಳಿದ ದೇವನನ್ನು । ನಿಂದಿಸುವ । ದುರುಳ ನಿನ್ನಯ ಶಿರವನು ॥
ತರಿವೆ ನೋಡೀ ಕ್ಷಣದಲಿ । ಜಗವೆಲ್ಲ ।
ವರಿತು ಮಾನದಿ ಬಾಳಲಿ ॥ ೧ ॥
ಅಲ್ಲ ನಾ ಬಡ ನೃಪಾಲ । ವಾಲ್ಮೀಕಿ । ಯಲ್ಲರಿತೆ ಶಸ್ತ್ರಜಾಲ ॥
ಸಲ್ಲದೀ ಮಾತೆನ್ನೊಳು । ಕೊರಳರಿದು ।
ಚಲ್ಲುವೆನು ನೋಡೀಗಲು ॥ ೨ ॥ ೧೩೨ ॥

**ಭಾಮಿನಿ**

ಧುರದಿ ಲವನೊಳು ಸೆಣಸಿ ಲಕ್ಷ್ಮಣ ।
ತರಳನುರುಳಲು ರಾಮಸೈನ್ಯವು ।
ಭರದಿ ಮುಸುಕಲು ಬಾಣಜಾಲದಿ ಧರಣಿಗುರುಳಿಸಲು ॥
ಮರಳಿ ವೀರರು ಮುಂದೆ ನುಗ್ಗುತ ।
ಲಿರಲು ಮನದೊಳಗರಿತು ಧಾವಿಸಿ ।
ಪರಿಕಿಸುವೆ ತಾನೆನುತ ರೋಷದಿ ಪೊರಟ ಶತ್ರುಘ್ನ ॥ ೧ ॥ ೧೩೩ ॥

**ಕಾಂಬೋಧಿ – ಝಂಪೆ**

ಕಂಡನಾ ಶತ್ರುಘ್ನ ದಿಂಡುಗಡೆದುರುಳಿರ್ದ । ಪುಂಡರೀಕಾಕ್ಷಸೇನೆಯನು ॥
ರುಂಡಮುಂಡಗಳನ್ನು ಚಂಡಾಡಿಯುಬ್ಬೇರಿ ।
ಗಂಡುಗಲಿ ಬಾಲ ಮೆರೆವುದನು ॥ ೧ ॥
ಕಲಿತನಕೆ ಬೆರಗಾಗಿ ನಿಲುವಿಕೆಗೆ ತಲೆದೂಗಿ ।
ಚೆಲುವಿಕೆಗೆ ಮನಮಾಡಿ ನೋಡಿ ॥
ಎಳೆಯನಿವ ಪೋಲುವನು ಇಳೆಯಾಣ್ಮತನುವಿದನು ।
ತಿಳಿಯಬೇಕೆಂದ ಮಾತಾಡಿ ॥ ೨ ॥ ೧೩೪ ॥

## ಸಾರಂಗ – ಅಷ್ಟ

ಯಾರಲೊ ಬಾಲಕನೆ । ಮೆಚ್ಚಿದೆ ನಾನು । ಭೂರಿಶೌರ್ಯಾನ್ವಿತನೆ ॥
ಯಾರ ಕಂದನು ನೀನು ತೋರುವೆ ವಟುವಂತೆ ।
ಹೋರುವ ಪರಿಗಳೇನು ॥ ಪೇಳ್ನೀನು ॥ ೧ ॥
ಅರಿಯೆನು ಕುಲವ ನಾನು । ವಾಲ್ಮೀಕಿಯ । ಕರುಣದಿ ಬೆಳೆದಿಹೆನು ॥
ಕರೆವರು ಲವನೆಂದು ಧುರದೊಳಾ ರಾಮನ ।
ಗರುವವ ಮುರಿಯಲೆಂದು ॥ ಬಂದಿಹೆನಿಂದು ॥ ೨ ॥
ತರಳ ಕೇಳ್ ರಾಮನನು । ಗೆಲ್ಲುವೆನೆಂಬ ।
ಪರಮವಿಕ್ರಮಿಯ ನಾನು ॥
ಸುರನರ ದನುಜರೊಳರಿತಿಲ್ಲ ಪೂರ್ವದಿ ।
ತೆರದಿರು ಪ್ರಾಣವನು ॥ ಸಣ್ಣವನು ॥ ೩ ॥
ಅಂಥ ಪರಾಕ್ರಮಿಯ । ಸಂಗರದಿ ಗೆ । ಲ್ವಂಥ ಮನೋವಾಂಛೆಯ॥
ಸಂತತ ತಾಳಿಹೆ ಸಂತಸವಾಗಿದೆ ।
ನಿಂತುನೋಡೀಗೆಂದನು ॥ ಬಾಲಕನು ॥ ೪ ॥
ಎಳೆಯ ಕೇಳಾಹವದಿ । ಎನ್ನನು ನೀನು । ಗೆಲಿದರೆಯೀದಿನದಿ ॥
ನಳಿನಾಕ್ಷನೈತಂದು ಕಲಹಕ್ಕೆ ನಿಲುವನು ।
ಅಳಿಯುವೆ ನೀನೋಡು ॥ ಹಯವ ಬಿಡು ॥ ೫ ॥ ೧೪೦ ॥

## ಮಾರವಿ – ಏಕ

ಬಿಡುಬಿಡು ನಿನ್ನಯ ಬಡಿವಾರಂಗಳ । ನುಡಿಯದಿರೆನ್ನೊಡನೆ ॥
ಬಡಿದು ರಣಾಗ್ರದಿ ಕೆಡಹುತ ಮಾರಿಗೆ ।
ಕೊಡುವೆನು ಬಲಿಯನ್ನೆ ॥ ೧ ॥
ಎಳೆಯನ ಭಾಗ್ಯವ ಕಲಹದೊಳೀದಿನ । ವಳಿಸಲು ಮನಬರದೆ ॥
ತಲೆಗಾಯ್ದಿಹೆನದ ತಿಳಿಯದೆ ಹಮ್ಮಲಿ ।
ಹಲುಬುವೆ ನೀ ಬರಿದೆ ॥ ೨ ॥
ಎಡಬಿಡದೀರ್ವರು ಗುಡುಗುತ ಕಣೆಗಳ ।
ಜಡಿಮಳೆಯನು ಸುರಿಸೆ ॥
ಹುಡುಗನ ಮೆಚ್ಚುತ ನುಡಿದನು ಶತ್ರುಹ ।
ಕುಡಿವೊಡೆದಿರಲಾಸೆ ॥ ೩ ॥ ೧೪೩ ॥

**ಜಂಜೂಟಿ – ರೂಪಕ**

ತರಳ ಕೇಳು ನಿನಗೆ ನಾನು । ಧುರದಿ ಮೆಚ್ಚಿದೆ ।
ಪರಮವೀರನಿಂದ ಧರೆಯ । ಸಿರಿಯು ಹೆಚ್ಚಿದೆ ॥
ಅರಳಿ ಫಲಿಸುವಂಥ ತರುವ । ತರಿವ ಪಾಪಕೆ ।
ಅರಿತು ಮನವ ಮಾಡಲಾರೆ । ತೆರಳು ನಿಲಯಕೆ ॥ ೧ ॥
ಧುರದಿ ಮಲೆತ ವೀರನನ್ನು । ಅರಿವ ಕಾರ್ಯಕೆ ।
ತರಣಿ ಕುಲಜ ಬರಿದೆ ನೀನು । ಮರುಗಲೇತಕೆ ॥
ತರಳನಾದರೇನು ಹಿಡಿದ । ಉರುವ ಶಸ್ತ್ರಕೆ ।
ತರಳತನವೆ ಮರುಳೆ ಹಿಂದೆ । ಸರಿವುದೇತಕೆ ॥ ೨ ॥ ೧೪೫ ॥

**ಪಂಚಾಗತಿ – ಮಟ್ಟೆ**

ಹುಡುಗನೆನುತಲಿ । ತಡೆದೆ ರಣದಲಿ ॥
ದಡಿಗತನವ ತೋರ್ಪೆ ನಿನ್ನ । ಬಡಿವೆ ಕ್ಷಣದಲಿ ॥ ೧ ॥
ಬರಿಯ ಮಾತಿದು । ಧುರದಿ ಸಾಕಿದು ॥
ಪೊರೆಯುವಂಥ ದೇವನನ್ನು । ಕರೆಸಿಕೊಳ್ಳುದು ॥ ೨ ॥
ಸೆಣಸಲಾಗಳು । ರಣದಿ ಭರದೊಳು ॥
ದಣಿದು ಲವನು ಶತ್ರುಹರನ । ಕಣೆಗೆ ಬೀಳಲು ॥ ೩ ॥ ೧೪೬ ॥

**ವಾರ್ಧಕ**

ನೋಡಿದನು ಶತ್ರುಘ್ನ ಬಾಲಕನ ರೂಪವನು ।
ಮಾಡಿದನು ಮನದೊಳಗೆ ಬಹುಪರಿಯ ಯೋಚನೆಯ ।
ರೂಢಿಪನ ಸಾದೃಶ್ಯವಂಗಾಂಗಗಳಲಿಯೊಡ
ಮೂಡಿರುವುದಚ್ಚರಿಯಲಾ ॥
ಆಡಿ ಫಲವೇನಿನ್ನು ಪೊಡವಿಜೆಯ ಸುತನಿವನು ।
ಕಾಡಿನೊಳು ತಾಪಸರ ಬಳಿವಿಡಿದು ಬದುಕಿಹನು ।
ಕೂಡಿಕೊಂಡಿವನ ನಾನೊಯ್ವೆ ರಥದೊಳಗಣ್ಣ
ಪಾಡರಿಯಲೆಂದೊಯ್ಯಲು ॥ ೧ ॥ ೧೪೭ ॥

### ಕಂದ

ಮುನಿಜರು ಕಂಡಿದ ಭಯದಿಂ ।
ಜನನಿಗೆ ತಿಳುಹುವುದೆನುತಲೆ ಜವದಿಂ ಬರುತಂ ॥
ಜನಕಜೆಗೊಂದಿಸಿ ನೀನೀ ।
ನೆನುತಿರಲವರೊಳಗೋರ್ವರ್ಂ ಬೊಬ್ಬಿಡುತೆಂದಂ ॥ ೧ ॥ ೧೫೦ ॥

### ಮುಖಾರಿ – ಏಕ

ಅಮ್ಮ ಲಾಲಿಸು ಮಾತನೊಂದ । ಕಂಡನು ವನದಿ ।
ನಿಮ್ಮ ಜಾತನು ಹಯವೊಂದ ॥
ನಮ್ಮನು ಕೇಳದೆಯೊಮ್ಮೆಗೆ ಬಂಧಿಸಿ ।
ಹಮ್ಮಿನ ಭಟರಾ ಹೆಮ್ಮೆಯನೆಲ್ಲವ ।
ಘಮ್ಮನೆ ಮುರಿದನು ಜುಮ್ಮನೆ ಮೂಜಗ ।
ಶರ್ಮೆಯವರ್ಣಿಸಲಮ್ಮನು ಮಾತೆಯೆ ॥ ೧ ॥
ಬಾಲನ ಶೌರ್ಯವ ಕೇಳಿ ।
ಸೇನಾನಿ ಮಹಾ ।
ಕಾಲನ ಪರಿ ಖತಿ ತಾಳಿ ॥
ಕಾಳಗಕಿಳಿಯುತ ಪೇಳಿದ ನೀತಿಯ ।
ಕೇಳದೆ ಲವ ಶರಜಾಲವ ಬೀರಲು ।
ಲೀಲೆಯೊಳೀತನ ಸೋಲಿಸಿ ರಥದೊಳ ।
ಗಾಲಯಕೊಯ್ದ ನೃಪಾಲಕನಾಲಿಸು ॥ ೨ ॥ ೧೫೨ ॥

### ಭಾಮಿನಿ

ಬಾಲರೆಂದುದನಾಲಿಸುತಲಾ ।
ಶೂಲ ಹೊಕ್ಕಂತಾಗಲುದರದಿ ।
ತಾಳಲಾರದೆ ಧರೆಯೊಳೊರಗುತ ಬಾಲೆಯಾಕ್ಷಣದಿ ॥
ಬಾಳುವೆನು ನಾನೆಂತು ಜಗದಲಿ ।
ಕೋಳುಗೊಂಡೀಭವದ ಬೆಳಸನು ।
ಕಾಳುಗೈದನು ದುರುಳ ವಿಧಿಯೀ ಬಾಳುವೆಯನೆನುತ
॥ ೧ ॥ ೧೫೩ ॥

## ನೀಲಾಂಬರಿ – ರೂಪಕ

ಬಾಲನೀಗೇತಕೆ ಬಂದಿತೊ । ಕಾಳಗಕಿಳಿಯುವ ಮನ ಜಗ ।
ಪಾಲಕನೇಗಯ್ವನೊ ಸೆರೆ । ಯಾಳಾಗಿಹನಲ್ಲ ॥ ೧ ॥
ಕಂದನ ನಗೆಮೊಗ ಕಾಣುತ । ಹಿಂದಿನದೆಲ್ಲವ ಮರೆಯುವೆ ।
ನೆಂದೆಣಿಸುತ ಬಾಳಿರಲಿಂದೀ ತೆರನಾಯ್ತು ॥ ೨ ॥
ಪಾತಕಿ ನಾನೀ ಜಗದೊಳ । ಗೇತಕೆ ಪುಟ್ಟಿದೆ ವ್ಯರ್ಥದಿ ।
ಪ್ರೀತಿಯನುಂಡರ ಜೀವನ । ಘಾತಕಿಯಾದೆನಲಾ ॥ ೩ ॥
ಪೇಳುವೆನಾರಿಗೆ ಬಂದಿಹ । ಗೋಳನು ಮುನಿಪಾಲಕ ಪಾ ।
ತಾಳಕೆ ಪೋಗಿಹ ವನದಲಿ ಕೇಳುವರಾರಿನ್ನು ॥ ೪ ॥ ೧೫೭ ॥

## ಭಾಮಿನಿ

ಕಂದನನು ನೆನೆಯುತ್ತ ಜನಕಜೆ ।
ನೊಂದುಕೊಳುತಿರುವಾಗ ಸಮಿಧೆಯ ।
ತಂದು ಕಂಡನು ಕುಶಕುಮಾರಕನಂದು ಮಾತೆಯನು ॥
ಇಂದಿದೇತಕೆ ತಾಯೆ ಶೋಕವು । ಕಂದಿದಾನನ ಸಿರಿಯ ಕಂಡೆನು ।
ಬಂದುದಾರಿಂದೆನಲು ಪೇಳ್ದಳು ಸಂದುದೆಲ್ಲವನು ॥ ೧ ॥ ೧೫೮ ॥

## ಆನಂದಭೈರವಿ – ಏಕ

ಕಂದ ಕೇಳು ಲವನು ವನಕೆ ।
ಬಂದ ಹಯವನೊಂದ ಕಂಡು ।
ಕಟ್ಟಲು । ಸುದ್ದಿ । ಮುಟ್ಟಲು ॥ ೧ ॥
ಬಂದು ಜನಪ ಧುರದಿ ಗೆಲಿದು ।
ಬಂಧಿಸುತ್ತಲವನ ರಥದಿ ।
ಒಯ್ದನು । ಕೊರಳ । ಕೊಯ್ದನು ॥ ೨ ॥ ೧೬೦ ॥

## ಮಾರವಿ – ಏಕ

ಪೊಡವಿಜೆಯಾಡಿದ ನುಡಿಗಳನಾಲಿಸಿ । ಕಿಡಿಗಳ ಸುರಿಸುತಲಿ ॥
ಸಿಡಿಲಾರ್ಭಟದಲಿ ಗುಡುಗಿದ ಕೈದುವ ।
ತುಡುಕುತ ರೋಷದಲಿ ॥ ೧ ॥

ಮಾತೆಯೆ ಮನದೊಳಗೇತಕೆ ಶೋಕವು । ಜಾತನು ನಾನಿಹೆನು ॥
ಮಾತೆನಗಿತ್ತರೆ ಘಾತಿಸಿ ಭೂಪನ । ಪ್ರೀತನ ಕರೆತಹೆನು ॥ ೨ ॥
ಚಿಕ್ಕವನನು ಸೆರೆಗಿಕ್ಕಿದ ದುರುಳನ ।
ಸೊಕ್ಕನೆ ಮುರಿಮುರಿದು ॥
ಹೊಕ್ಕಿರಿವುತ ಯಮನೊಕ್ಕಲಗೈವೆನು ।
ಫಕ್ಕನೆ ಹಿಡಿಹಿಡಿದು ॥ ೩ ॥
ಸುಡುವೆನು ಬ್ರಹ್ಮನ ಬಡಿವೆ ಮಹೇಶನ ।
ಒಡೆವೆನು ಹರಿಯುರವ ॥
ತಡೆಯದೆ ಬೇಗದಿ ಕೊಡು ನೀನಪ್ಪಣೆ ।
ಬಿಡುಬಿಡು ಸಂಶಯವ ॥ ೪ ॥
ಜನನಿಗೆ ವಂದಿಸುತನುಮತಿ ಪಡೆಯುತ ।
ಜನಕಜೆ ತನುಜಾತ ॥
ಘನಶೌರ್ಯದಿ ತಾನನುವರಕೊದಕಿದ ।
ನನುಜನನರಸುತ್ತ ॥ ೫ ॥ ೧೬೫॥

## ವಾರ್ಧಕ

ತಡೆದವರ ಹಿಡಿ ಹಿಡಿದು ಬಡಿದು ಮೇಣ್ ನಡಮುರಿದು ।
ಅಡಸಿದರ ತುಳಿದು ಕೆಡದುರುಳಿಸುತ ಹೊರಳಿಸುತ ।
ನಡುಗಿಸುತಲರಿಭಯಂಕರನಾಗಿ ಮೆರೆದಿರಲ್ ಗಡಬಡಿಸಿ
ರಿಪುವೀರರು ॥
ಪೊಡವಿಗಿಳಿದಿರ್ಪ ಕಡೆಗಾಲವೋ ಬಡಬನೋ ।
ತಡೆಯಲಾರೆವೆನುತ್ತಲೋಡುತಿರೆ ಸಂತೈಸಿ ।
ಹುಡುಗನಧಟಂ ನೋಳ್ಪೆ ತಾನೆನುತ ರೌದ್ರದಿಂ ನಡೆತಂದ ಶತ್ರುಘ್ನನು
॥ ೧ ॥ ೧೬೬ ॥

## ಭಾಮಿನಿ ಅರ್ಧ

ಶತ್ರುಹರನನು ಕಂಡು ಜನಕಜೆ ।
ಪುತ್ರ ಕೂರಂಬುಗಳ ಜಾಲದಿ ।
ಮಿತ್ರಕುಲಜನ ತನುವ ಮುಚ್ಚಿ ನಗುತ್ತಲಿಂತೆಂದ ॥ ೧ ॥೧೬೭ ॥

## ಭೈರವಿ – ಅಷ್ಟ

ಶತ್ರುಘ್ನನೇನೊ ನೀನು । ರಾಘವನೃಪ । ಸತ್ರದ ರಕ್ಷಕನು ॥
ಮಿತ್ರಜಕುಲಕೀರ್ತಿನೇತ್ರ ನೀನಪ್ಪೆಯೊ ।
ಮಿತ್ರನಾಗುವಿಯೊ ಇನ್ನು ॥ ೧ ॥
ಅವನೀಶರೆಲ್ಲರನು । ಗೆದ್ದಿರುವಂಥ । ಲವಣಾರಿಯಹೆನು ನಾನು ॥
ಬವರದಿ ಬಲುಹಿಂದ ಸವರುವ ವೀರನ ।
ಭುವನದಿ ಕಾಣೆನಿನ್ನು ॥ ೨ ॥
ಬಣಗು ನೃಪಾಲರನು । ಜೈಸಿದೆನೆಂಬ । ನೆಣಗೊಬ್ಬಿನಿಂದ ನೀನು ॥
ಮಣಿಯದೆ ಕುಶನೊಳು ಸೆಣಸಲೀ ಭೂಮಿಯ ।
ಋಣ ತೀರಿತೆಂಬೆ ನಾನು ॥ ೩ ॥
ಮೊದಲೋರ್ವ ತರಳ ಬಂದು । ಅಶ್ವವ ಕಟ್ಟಿ ।
ಕದನದಿ ಬಿದ್ದನಿಂದು ॥
ಮದವೇರಿ ರಣದೊಳಗಿದಿರಾಗಿ ಕೆಡದಿರು ।
ಸದನಕ್ಕೆ ನಡೆ ಮೊದಲು ॥ ೪ ॥
ಬಾಲನ ಗೆಲಿದವನು । ನೀನೆಂಬುದ । ಕೇಳಿಯೆ ಬಂದಿಹೆನು ॥
ಸೀಳಿ ನಿನ್ನುರವನ್ನು ಶೀಲನನೊಯ್ಯುವೆ ।
ತಾಳಿಕೊ ಶರಗಳನು ॥ ೫ ॥ ೧೭೨ ॥

## ಶಂಕರಾಭರಣ – ಮಟ್ಟೆ

ನುಡಿಯ ಕೇಳಿ ಶತ್ರುಹರನು । ತಡೆದುಕೊಳ್ಳೆನುತ್ತ ಶರವ ।
ಕಡುಹಿನಿಂದ ಸೆಳೆದು ಬಿಡಲು । ಕಡಿದ ಬಾಲನು ॥
ಬಿಡುವ ತೊಡುವ ಕೌಶಲಕ್ಕೆ । ಮುಡಿಯ ತೂಗಿ ಮೋಹಗೊಂಡು ।
ಒಡಲು ನೊಂದು ದಾಶರಥಿಯು ।
ನುಡಿದ ಕುಶನಿಗೆ ॥ ೧ ॥ ೧೭೩॥

## ಕಲ್ಯಾಣಿ – ಅಷ್ಟ

ಕುಶನೆ ಕೇಳೀಗ ಸಂಗರದಿ । ಗೆಲ್ದೆ । ವಸುಧೀಶರೆಲ್ಲರ ಜವದಿ ॥
ಅಸಮಸಾಹಸಿ ನಿನ್ನ ಪೋಲುವ ಭಟರಿಲ್ಲ ।
ಅಸುರಾರಿಯಾಣೆ ಸದ್ಗುಣಕೆ ಮತ್ಸರವಿಲ್ಲ ॥ ೧ ॥

ಆದರೆ ಕೇಳೊಂದು ಮಾತ । ನೀನು । ಕಾದುವುದೇಕಿನ್ನು ಜಾತ ॥
ಮೋದದಿ ಬಾರೆನ್ನ ಸೇರಿ ಸ್ಯಂದನವೇರಿ ।
ಆದರಿಸುವ ನಿನ್ನ ದೈತ್ಯಾರಿ ನಲವೇರಿ ॥ ೨ ॥
ನಿನ್ನ ಪೋಲುವ ಫಲವನ್ನು । ಈವ । ತನ್ನ ಭಾಗ್ಯದ ತರುವನ್ನು ॥
ಮುನ್ನ ಕತ್ತರಿಸಿದೆ ತಾನೆಂದು ಬೇಯುವ ।
ಎನ್ನಣ್ಣ ಕಂಡೀಗ ಮೋದವ ತಾಳುವ ॥ ೩ ॥ ೧೭೬ ॥

### ಪಹಡಿ – ರೂಪಕ

ಅರರೆ ಏನು ಮಾತು ಭಲಾ ।ಕರಗಿಹೋಯ್ತೆ ರಣದ ಚಲಾ ॥
ಕರದಿ ಧನುವನಾಂತ ಮಲ್ಲ । ಒರೆಯಲ್ಯಾತಕಿಂಥ ಸೊಲ್ಲ ॥ ೧ ॥
ಕಾಳಗದೊಳು ಪ್ರಾಣತೆತ್ತು । ಬಾಳು ಕೀರ್ತಿ ತನುವ ಹೊತ್ತು ॥
ಬಾಲನನ್ನು ಬಿಟ್ಟು ನೀನು ।
ಕಾಲಿಗೆರಗೆ ಕಾಯ್ವೆ ನಾನು ॥ ೨ ॥ ೧೭೮ ॥

### ಘಂಟಾರವ – ಅಷ್ಟ

ಅರರೆ ಬಾಲಕನೆಂದೀಗ ತಡೆದರೆ ॥
ಗರುವವೇರಿತೆ ತರಿದು ಶಿರವನು ।
ಧರೆಗೆ ಚೆಲ್ಲುವೆ ನೋಡೆಲಾ ॥ ೧ ॥
ಭಳಿರೆ ಶತ್ರುಹ ತೋರೆಲೋ ನಿನ್ನಯ ॥
ಬಲುಮೆಯೆಲ್ಲವನಿಂದು ತಲೆಯನು ।
ಉಳುಹಿಕೊಳ್ಳೆನುತೆಚ್ಚನು ॥ ೨ ॥ ೧೮೦ ॥

### ಭಾಮಿನಿ

ಭರಿತ ರೋಷದಿ ಸೆಣಸಲೀರ್ವರು ।
ಸುರರು ಬೆರಗಾಗಿರಲು ರಣದೊಳ ।
ಗೊರಗಿದನು ಸೌಮಿತ್ರಿ ತರಳನ ಶರದ ಘಾತಿಯಲಿ ॥
ಧುರದಿ ಬಾಲಕರೆಸಗಿದುಪಹತಿ ।
ಯರಿತು ಚಾರರ ಮುಖದಿ ಲಕ್ಷ್ಮಣ ।
ಕೆರಳಿ ಕಾಳಗಕಣಕೆ ಬಂದನು ತ್ವರಿತ ಗಮನದಲಿ ॥ ೧ ॥ ೧೮೧ ॥

**ಸೌರಾಷ್ಟ್ರ – ತ್ರಿವುಡೆ**

ನೋಡಿದನು ಸೌಮಿತ್ರಿ ರಣದಲಿ ।
ರೂಢಿಗುರುಳಿದ ಸಹಜ ತನುಜರ ।
ಬಾಡಿದನು ಶೋಕಾಗ್ನಿಯುರಿಯಲಿ । ಕೇಡ ನೆನೆದು ॥ ೧ ॥
ಪವನ ಪಾವಕರಂತೆ ಮೆರೆಯುವ ।
ಲವಕುಶರ ಕಾಣುತ್ತ ಬೆರಗಿನೊ ।
ಳವನಿಪಾಲನ ಹೋಲಿಕೆಗೆ ಮನ । ಕವಲುಗೊಂಡು ॥ ೨ ॥
ನುಗ್ಗಿದನು ಕೊಲಲೆಂದು ರೋಷದಿ ।
ಜಗ್ಗಿದನು ಕಂಡವರ ಮೋಹದಿ ।
ಅಗ್ಗಳೆಯರನುವರಿವೆನೆನುತಲಿ । ತಗ್ಗಿ ನುಡಿದ ॥ ೩ ॥ ೧೮೪ ॥

**ಪಹಡಿ – ಅಷ್ಟ**

ಯಾರಯ್ಯ ಬಾಲರು ನೀವು । ತಂದೆ ।
ಯಾರು ಪುಣ್ಯಾತ್ಮನು ತಾನು । ಪೇಳಿ ।
ತೋರುವ ವಟುರೂಪವೇನು ॥ ದೈತ್ಯ ।
ವಾರಣನಶ್ವವ ವೈರದಿ ಬಂಧಿಸಿ ।
ಹೋರುವ ಶೌರ್ಯದ ಕಾರಣಗಳನಿನ್ನು ॥ ೧ ॥
ಮುನಿಪತಿ ವಾಲ್ಮೀಕಿ ದಯದಿ । ನಮ್ಮ ।
ವನದೊಳು ಪೊರೆದನು ಮುದದಿ ।
ಪೆತ್ತ । ಜನಕನ ಪೆಸರೇಕೆ ರಣದಿ ॥ ನೀನು ।
ಧನುವಿಡಿದೈತಂದೆ ಸಣಸುವೊಡನುವಾಗು ।
ಘನತೆಯ ತೋರ್ಪೆವು ಕಣೆಗಳ ಜಾಲದಿ ॥ ೨ ॥
ಮಾನವ ಕುಲಜನೆ ರಾಮ । ದೇವ ।
ತಾನವ ವೈಕುಂಠಧಾಮ ॥ ಘೋರ।
ದಾನವ ಸಂಹಾರ ಭೀಮ ॥ ಅಭಿ ।
ಮಾನದಿ ಹೋರಾಡಿ ಪ್ರಾಣವ ತೆರುವ ವಿ ।
ಧಾನವು ಸರಿಯೆ ನಿಧಾನಿಸಿ ನೋಡಿರಿ ॥ ೩ ॥ ೧೮೭ ॥

**ಭೈರವಿ – ಆದಿ**

ಬಲ್ಲೆ ರಾಮನ ಪರಿಯ । ಎಲ್ಲವ ನಾನು ।
ಸೊಲ್ಲಿಸುವೆನು ಕೇಳಯ್ಯ ॥ ಪ ॥
ಸಲ್ಲದ ಕಾರ್ಯವ ಗೈದಿಹ ರಾಘವ ।
ಬಲ್ಲಿದ ತಾನಾದ ಧರೆಯೊಳಗೆಂಬುದ ॥ ಅ.ಪ ॥
ಹೆಣ್ಣಾದ ತಾಟಕಿಯ । ರಾಘವ ತಾನು । ಮಣ್ಣುಗೂಡಿಸಿದ ಶೌರ್ಯ॥
ಬಣ್ಣಿಸಲೇಕದನೆಣ್ಣಿದ ಸ್ತ್ರೀಹತ್ಯ ।
ಸಣ್ಣವನೆಂಬೆನೆ ಗಣ್ಯಪರಾಕ್ರಮಿ ॥ ಬಲ್ಲೆ ॥ ೧ ॥
ವಾನರವಾಲಿಯನು । ಬೆಂಗಡೆ ನಿಂದು । ಬಾಣದೊಳಿವ ಕೊಂದನು॥
ದಾನವ ಖರ ಪ್ರಾಣಹಾನಿಯ ಗೈವಾಗ ।
ಜಾಣ ಮೂರಡಿ ಹಿಂದೆ ತಾನು ಸಾರಿದನೆಂದು ॥ ಬಲ್ಲೆ ॥
॥ ೨ ॥ ೧೮೯ ॥

**ಭೈರವಿ – ಏಕ**

ಬಾಲರ ನುಡಿಗಳ ಕೇಳಿ । ಮಹ । ಕಾಲನ ಪರಿ ಖತಿ ತಾಳಿ ॥
ಕೋಲನು ಧನುವಿಗೆ ಹೂಡಿ । ಮಾ ।
ಲೋಲನ ಧ್ಯಾನವ ಮಾಡಿ ॥ ೧ ॥
ಎಸೆದ ಶರೌಘವ ತರಿದು । ಕುಶ । ಹೊಸಮಸೆದಸ್ತ್ರವನುಗಿದು ॥
ದಶರಥಸುತನಿಗೆ ಹೊಡೆದ । ಅವ ।
ನಸುವಳಿಯುತ ಮೈ ಮರೆದ ॥ ೨ ॥ ೧೯೧ ॥

**ವಾರ್ಧಕ**

ತರಳರೊಡನಾಹವದಿ ಸೌಮಿತ್ರಿ ಮೈಮರೆದು ।
ಧರೆಯೊಳಗೆ ಮಲಗಿರ್ದ ವಾರ್ತೆಯಂ ಕೇಳುತ್ತ ।
ಲರಸ ಚಿತ್ತದಿ ವ್ಯಥೆಯ ತಾಳಿರುವ ಸಮಯದಲಿ ಭರತ ಧೈರ್ಯವ
ಪೇಳುತ ॥
ವರರಥವನಡರಿ ತಾ ಹರಿವೇಗದಿಂ ಬಂದು ।
ಭರಿತ ರೋಷದಿ ಕಾದಿ ಮೂರ್ಚೆಯಿಂದೊರಗಲದ ।
ನರಿತು ರಣರಂಗದಿಂ ಚಾರರೈತಂದೆರಗಿ ಧರಣಿಪಾಲಗೆ ಪೇಳ್ದರು
॥ ೧ ॥ ೧೯೨ ॥

**ಪೂರ್ವಿ – ಏಕ**

ಸ್ವಾಮಿ ಪರಾಕು ಜೀಯ । ಸಾಕೇತರಾಯ ।
ಸ್ವಾಮಿ ಪರಾಕು ಜೀಯ ॥ ಪ ॥
ಸ್ವಾಮಿಯೆ ಸಂಗರ ಭೂಮಿಯ ಸೇರಿದ ।
ರಾಮಾನುಜರ ವಿರಾಮದ ಸುದ್ದಿಯ ॥
ಕೇಳೆಲ್ಲ । ನೀ ಸೊಲ್ಲ । ಸುಳ್ಳಲ್ಲ ।
ಪೇಳುವೆನೆಲ್ಲ ॥ ಅ.ಪ.॥
ಬಾಲರೀರ್ವರು ರಣದಿ । ನಿನ್ನಯ ತನುವ ।
ಪೋಲುವರೀ ದಿನದಿ ॥
ಲೀಲೆಯೊಳಿರಿವುದ ಕೇಳಿದ ಭರತನು ।
ಕಾಳಗಕಿಳಿಯಲು ಕಾಲನ ಪರಿ ಕುಶ ॥
ಶರಹೂಡಿ । ಗುರಿನೋಡಿ । ಬಿಡೆಖೋಡಿ ।
ಸೇರಿದ ರೂಢಿ ॥ ೧ ॥ ೧೯೩ ॥

**ವಾರ್ಧಕ**

ಚಾರರಾಡಿದ ಮಾತನಾಲಿಸುತ ದಾಶರಥಿ ।
ಭೂರಿಶೋಕಾವೇಗದಿಂದುರುಳಿ ಹಮ್ಮೈಸಿ ।
ಧಾರಿಣಿಪ ಧೈರ್ಯಮಂ ತಾಳ್ದು ಮುಂದಣಕಾರ್ಯಕನುವಾಗಿ ತಕ್ಷಣದಲಿ॥
ನಾರಿಯರ ಸಂತೈಸಿ ಯಜ್ಞಶಾಲೆಯ ತೊರೆದು ।
ಮಾರುತಾತ್ಮಜ ಮುಖ್ಯರೊಡಗೂಡಿ ರಥವೇರಿ ।
ಸಾರಿದಂ ಧನುವಿಡಿದು ವಾಯುಗತಿಯಂ ಮೀರಿ ಸೇರಿದಂ ರಣಭೂಮಿಯ ॥ ೧ ॥ ೧೯೪ ॥

**ಸಾಂಗತ್ಯ – ರೂಪಕ**

ಧರೆಯೊಳು ಮಲಗಿರ್ದ ತರಣಿಜ ಸೇನೆಯ ।
ಪರಿಯನ್ನು ಕಂಡಾಗ ರಾಮ ॥
ಭರತಾದಿಯನುಜರನೊರಗಿರ್ದ ತರಳರ ।
ಪರಿಕಿಸುತೆಂದ ನಿಸ್ಸೀಮ ॥ ೧ ॥

ಹರಹರಾ ಏನೆಂಬೆ ಹರಿಕುಲ ರತ್ನರ್ಗೆ ।
ಸರಿಸಮ ನರರುಂಟೆ ಜಗದಿ ॥
ಪರಮವಿಕ್ರಮಿಗಳ ತರಿದವ ವಿಧಿಯಲ್ತೆ ।
ತರಿವಂಥ ಭಟರುಂಟೆ ರಣದಿ ॥ ೨ ॥
ರಾಣಿಯ ತೊರೆದಿಹೆ ಸೂನುಗಳೆನಗಿಲ್ಲ ।
ಜಾಣರ ನಂಬಿದ್ದೆ ನಾನು ॥
ಪ್ರಾಣಸಮಾನರ ಹಾನಿಯ ಕಂಡಾಯ್ತು ।
ಕ್ಷೋಣಿಭಾರಕನಾದೆನಿನ್ನು ॥ ೩ ॥
ಸುಟ್ಟಿತೀ ಬದುಕಿನ್ನು ಮೆಟ್ಟಿದ ವಿಧಿಯೆನ್ನ ।
ಬಟ್ಟೆಯ ತೋರುವರೆಲ್ಲಿ ॥
ಕೆಟ್ಟೆನು ತಾನೆಂದು ಗಟ್ಟೀಗ ರಾಮನು ।
ಥಟ್ಟನೆ ಧಾರಿಣಿಗುರುಳಿ ॥ ೪ ॥ ೧೯೮ ॥

**ವಾರ್ಧಕ**

ಅಳಿದರೇ ರಘುವಂಶತಿಲಕರಿಂದಿನ ರಣದಿ ।
ಕಳೆಯಿತೇ ಮನುವಂಶಪುಣ್ಯದೇಳಿಗೆಯ ಸಿರಿ ।
ಯುಳಿದೆನೇ ದೌರ್ಭಾಗ್ಯಮಂ ಕಾಣಲೆಂದಾನು ಸೆಳೆಯನೇ
ವಿಧಿಯೆನ್ನನು॥
ಅಳಲಿ ಫಲವೇನಿನ್ನು ವೀರಕ್ಷತ್ರಿಯನಾಗಿ ।
ಬಳಿಕಿವರ ಮಡುಹಿರ್ದ ಖಳರ ಹೆಡತಲೆಯನುರೆ ।
ತುಳಿವೆನೆಂದುರುತರಾವೇಶದಿಂ ಧನುಶರಾವಳಿಗೊಂಡು
ಮುನ್ನಡೆಯಲು ॥ ೧ ॥ ೧೯೯ ॥

**ಭೂಪಾಳಿ – ಝಂಪೆ**

ಮುಂದಕೈತರಲು ರಣಮಂಡಲದಿ ಮೆರೆವ ನಿಜ ।
ಕಂದರನು ಕಾಣುತ್ತ ಮೋಹಗೊಂಡು ॥
ಹಿಂದಿನದ ನೆನೆಯುತ್ತ ಕಂದರ್ಪಪಿತ ಮರುಗಿ ।
ಸಂದ ಪುಣ್ಯನು ತಾನು ಎಂದು ಹಲುಬಿ ॥ ೧ ॥

ಚೆಲುವರನು ನೋಡಿದರೆ ನಲಿವುದೆನ್ನಯ ಹೃದಯ ।
ಕಲಿತನವು ಕರಗುತಿದೆ ಯಾಕೊ ಕಾಣೆ ॥
ಕೊಲುವ ಕಾರ್ಯಕೆ ಬಂದೆ ಚಲವು ಸರಿಯಿತು ಹಿಂದೆ ।
ಒಲವು ತಲೆದೋರಿತಿದು ತಿಳಿಯದಾಯ್ತು ॥ ೨ ॥
ತುಂಬು ಗರ್ಭಿಣಿ ಸತಿಯ ನಂಬಿಸಿಯೆ ಕೊಂದಿಹೆನು ।
ಹಂಬಲಿಸಿ ಫಲವೇನು ತುಂಬಿ ಬರದು ॥
ಕಂಬುಕಂಠಿನಿ ಸಾಮ್ಯವಿಂಬುಗೊಂಡಿಹುದಿಲ್ಲಿ ।
ಸಂಭವರೆಯಾಗಿರಲು ಧನ್ಯನೆಂದು ॥ ೩ ॥ ೨೦೨ ॥

**ಕಂದ**

ಚಿತ್ತದಿ ಬಹುಪರಿ ಯೋಚಿಸಿ ।
ಹತ್ತಿರ ಬರುತಿಹ ಜನಪನ ಕಂಡುತ್ಸಹದಿಂ ॥
ತತ್ತನುಜ ಕುಶಂ ಲವನಂ ।
ಮತ್ತತಿ ಸನಿಹಕೆ ಕರೆದವಗರ್ತಿಯೊಳೆಂದಂ ॥ ೧ ॥ ೨೦೩ ॥

**ಮಧುಮಾಧವಿ – ತ್ರಿವುಡೆ**

ಲವನೆ ಬಾಬಾ ನೋಡು ಬರುತಿಹ ।
ಅವನಿಪಾಲಕ ರಾಮಚಂದ್ರನು ।
ಬುವಿಯ ಭಾರವ ಕಳೆದ ಮಹಿಮನು ।
ಬವರ ಕೊಡುವನು ನಮ್ಮೊಳು ॥ ೧ ॥
ಅಣ್ಣ ಕೇಳಿವನನ್ನು ಕಾಣಲು ।
ಕಣ್ಣಪಾಪವು ಕಳೆದುಹೋಯಿತು ।
ತಣ್ಣಗಾಯಿತು ಧುರದ ಬಯಕೆಯು ।
ಪುಣ್ಯಪುರುಷನೆ ದಿಟವಿದು ॥ ೨ ॥
ಅನುಜ ಕೇಳೈ ಧನುವ ಪಿಡಿದಾ ।
ಜನಪಗಿದಿರಾಗುತ್ತ ಸೆಣಸುವ ।
ಘನತೆ ನಮ್ಮದು ವನದಿ ಗೈದಿಹ ।
ಘನ ತಪದ ಫಲ ತಿಳಿಯಲು ॥ ೩ ॥ ೨೦೪ ॥

**ಭಾಮಿನಿ ಅರ್ಧ**

ತನಯರನು ಕಾಣುತ್ತ ರಘುವರ ।
ತನುಪುಳಕ ರೋಮಾಂಚ ಸಮನಿಸೆ ।
ಮನದಿ ಯೋಚಿಸಿ ನಿಜವನರಿಯುವೆನೆನುತ ನುಡಿಸಿದನು
॥ ೧ ॥ ೨೦೭ ॥

**ಶಹನ – ಅಷ್ಟ**

ಮೆಚ್ಚಿದೆ ಬಾಲರೆ ನಿಮಗೆ । ಎನ ।
ಗಚ್ಚರಿಯಾದುದು ಸಾಹಸಸಿರಿಗೆ ॥
ಉಚ್ಚರಿಸುವುದೀಗಲೆನಗೆ । ನಿಮ್ಮ ।
ನೆಚ್ಚಿನ ತಾಯ್ತಂದೆ ಯಾರೆಂಬ ಬಗೆಗೆ ॥ ೧ ॥
ರಾಮಾಯಣ ಕವಿ ವಾಲ್ಮೀಕಿ । ಎಮ್ಮ ।
ಪ್ರೇಮದಿ ಪೊರೆದನು ವನದಿ ವಿವೇಕಿ ॥
ನಾಮವದೇನುಂಟೋ ಪಿತಗೆ । ಬಿಡು ।
ಸಾಮರ್ಥ್ಯದೈಶ್ವರ್ಯ ಸಾಕಯ್ಯ ನಮಗೆ ॥ ೨ ॥
ತಾಮಸಗೊಳದೀಗ ನೀವು । ಪೇಳಿ ।
ರಾಮಾಯಣವೆಂದರರಿಯೆವು ನಾವು ॥
ಗೋಮಿನಿಗತಿನೂತ್ನವಾಯ್ತು । ಕೇಳಿ ।
ಯಾಮುನಿವಿರಚಿತ ಕಾವ್ಯದ ಮಾತು ॥ ೩ ॥
ರಾಮನ ಜೀವನ ಕಥೆಯು । ಅದ ।
ರಾಮಣೀಯಕವಾಗಿ ಕಥಿಸಿದ ಮುನಿಯು ॥
ತಾಮರಸೋದ್ಭವ ಬಂದು । ಪೇಳ್ದ ।
ನಾಮಹಕಾವ್ಯಕೆ ಅಮರತ್ವವೆಂದು ॥ ೪ ॥ ೨೧೧ ॥

**ವಾರ್ಧಕ**

ಬಾಲಕರ ನುಡಿಗೇಳಿ ಮನದೊಳಗೆ ಯೋಚಿಸುತ ।
ಮಾಲೋಲ ನಿಜವರಿವೆ ಬೇರೊಂದುಪಾಯದಿಂ ।
ಕೇಳುವೆಂ ತಾನೆಂದು ನಿಶ್ಚಯಿಸಿ ರಘುರಾಯರೇಳಿಗೆಯ
ವಿವರಗಳನು ॥

ಕಾಲಾನುಕ್ರಮದಿಂದ ಪ್ರಶ್ನಿಸಲ್ ಕುಶಲವರ್ ।
ಪೇಳಲ್ಕೆ ಕಂಠಸ್ಥ ಕಾವ್ಯದಾಧಾರದಿಂ ।
ತಾಳಿ ಸಂತಾಪಮಂ ತೋರಿ ಸಂತೋಷಮಂ ಆಲೋಚಿಸುತ
ಪೇಳ್ದನು ॥ ೧ ॥ ೨೧೨ ॥

**ದೇಶಿ – ಅಷ್ಟ**

ಕಂದರೆ ನಿಮ್ಮಯ ನುಡಿಗಳ ಕೇಳಿ ।
ಹೊಂದಿಹೆ ಸಂತಸ ಮಾನಸದಲ್ಲಿ ॥
ಚಂದದಿ ಪೇಳಿರಿ ತಿಳಿದಿರ್ದೊಡೀಗ ।
ನಂದನರಾರಾಮಗೆಷ್ಟೆಂದು ಬೇಗ ॥ ೧ ॥
ಅವನೀಶ ತ್ಯಜಿಸಿದ ಪಾವನೆ ಸತಿಯ ।
ಸುವಿದಿತ ನಮಗದು ಪಠಿಸಿದ ವಿಷಯ ॥
ಕವಿಕೃತಿಯೊಳಗಿದೆ ಮಿಕ್ಕಿನದೆಲ್ಲ ।
ಅವಿದಿತಭುವನಕ್ಕೆ ಪ್ರಕಟಿಸಲಿಲ್ಲ ॥ ೨ ॥
ಏಳಿಪೋಗುವ ನಾವು ಮುನಿಪನಿದ್ದೆಡೆಗೆ ।
ಕೇಳಿ ತಿಳಿಯುವುದೆಲ್ಲ ಸಂಗತಿ ಕಡೆಗೆ ॥
ಬಾಳಿದು ಗೋಳಿನ ಕಥೆಯೆ ತಾನಹುದೊ ।
ನಾಳಿನ್ನು ಸೌಖ್ಯವ ಕಾಣಲುಬಹುದೊ ॥ ೩ ॥ ೨೧೩ ।

**ಸೌರಾಷ್ಟ್ರ – ತ್ರಿವುಡೆ**

ಎಂದು ರಾಮನು ಪೇಳುತಿರಲದ ।
ನಂದು ಕೇಳುತ ಬಾಲರಾಕ್ಷಣ ।
ಮಂದಹಾಸದಿ ನುಡಿದರಾತಗೆ । ಚಂದದಿಂದ ॥ ೧ ॥
ಯಾತಕೀಪರಿ ನುಡಿವೆ ಭೂಪತಿ ।
ಖಾತಿಯಡಗಿತೆ ರಣದಿ ನಿನಗತಿ ।
ಭೀತಿ ಮೂಡಿತೆ ಸಾಕು ಏಳೈ । ಖ್ಯಾತ ನೀನು ॥ ೨ ॥
ಮಂಗಳಾಂಗಿಯ ಹಂಗುದೊರೆವುತ ।
ಭಂಗಪಡಿಸಿಯಭಂಗಕೀರ್ತಿಯ ।
ಸಂಗ ಪಡೆದೇಕಾಂಗವೀರನು। ಕಂಗೆಡುವನೆ ॥ ೩ ॥

ಬಿಲ್ಲ ಪಿಡಿದಗೆ ಸಲ್ಲದಿರುವಾ । ಖುಲ್ಲ ವಾಕ್ಯವನೆಲ್ಲ ಸುಡುಸುಡು ।
ಮಲ್ಲತನವೀಗೆಲ್ಲಿಹೋಯಿತು । ನಿಲ್ಲು ಬೇಗ ॥ ೪ ॥ ೨೧೯ ॥

**ವಾರ್ಧಕ**

ತರಳರಾಡಿದ ನುಡಿಗೆ ತರಹರಿಸಿ ದಾಶರಥಿ ।
ಮರುಳನಾದೆನೆ ನಾನು ಬೆಸಗೊಂಡು ಬಾಲಕರ ।
ಮರುಗಲೇತಕೆ ಬರಿದೆ ಸೋದರರ ಕೊರಳರಿದ ದುರುಳರಿವರಂ
ತರಿಯಲು ॥
ಸುರನರೋರುಗರೆಲ್ಲ ನೆರೆನಿಂದು ನೋಡಲೀ ।
ಗರಿವೆನಿವರಂ ರಣದೊಳೆಂದುಗ್ರಕೋಪದಿಂ ।
ಹರಿನಾದಮಂಗೈದು ಕಾರ್ಮುಕವ ಝೇವಡೆಯೆ ಹರಿತಂದ
ವಾಲ್ಮೀಕಿಯು ॥ ೧ ॥ ೨೨೦ ॥

**ಸುರುಟಿ – ಏಕ**

ಧರಣಿಪ ರಘುವರನೆ । ಧರಿಸಿಹೆ । ಯುರುತರ ಕೋಪವನೆ ॥
ಧುರದೊಳು ದುರುಳರ ಕೊರಳರಿಯುವ ಶರ ।
ಕರದೊಳು ಧರಿಸಿಹೆ ತರಳರ ತರಿಯಲು ॥ ೧ ॥
ಕುವರರ ದಣಿಸಲಿಕೆ । ಸಾಗದು । ಬವರದೊಳೀಭವಕೆ ॥
ಅವರಿವರೆನ್ನುತ ಕವಲೆಣಿಸದಿರೈ ।
ಅವನಿಜೆ ತನುಭವರಿವರೆಂಬುದ ತಿಳಿ ॥ ೨ ॥
ಧನುಶರ ಕೆಳಗಿಳಿಸು । ನಿನ್ನಯ । ತನುಜರನಾದರಿಸು ॥
ಅನುವರ ಮಧ್ಯದಿ ತನುಮರೆದಿಹ ನಿ ।
ನ್ನನುಜರನೇಳಿಸುವೆನು ನಾನೀಗಲೆ ॥ ೩ ॥ ೨೨೩ ॥

**ಕಂದ**

ಮುನಿಪಕಮಂಡಲುಗತ ಜೀ ।
ವನದಿಂ ಗತಜೀವನರುಜ್ಜೀವಿಸಲಾಗಳ್ ॥
ಮನದೊಳು ಹರ್ಷವ ತಾಳುತ ।
ತನುಜಾನುಜರಂ ನೋಡುತ ಜನಪತಿಯಿಂತೆಂದಂ ॥ ೧ ॥ ೨೨೪ ॥

### ಕಾಂಬೋಧಿ – ಏಕ

ಚಂದವಾಯ್ತು ಮುನಿಯೆ ನಿನ್ನ । ಸಂದರ್ಶನದೊಳೆನಗೆ ॥
ಕಂದರನ್ನು ಕೊಟ್ಟ ಕರುಣಿ । ಯೆಂದು ಮಣಿವೆ ನಿನಗೆ ॥ ೧ ॥
ತರಳ ಬಾರೊ ಕುಶನೆ ಬಾಬಾ । ಕಿರಿಯ ನೀನು ಲವನು ॥
ಸರಿದು ನಿಲುವುದೇಕೊ ದೂರ । ದುರುಳನೆಂಬಿರೇನು ॥ ೨ ॥
ಕಂದರನ್ನು ಕಾಣದಂಥ । ಮಂದಭಾಗ್ಯಪಿತನು ॥
ಚಂದದಿಂದ ಬನ್ನಿ ಬೇಗ । ನಿಂದು ನಲಿವೆ ನಾನು ॥ ೩ ॥
ತನುಜರೊಡನೆಯಾಡಿ ದಣಿದು । ದಿನಪಕುಲಜ ಕುಣಿದು ॥
ಮುನಿಪಗೆಂದ ಮನದಿ ಸತಿಯ ।
ನೆನೆಯುತಾಗ ಮಣಿದು ॥ ೪ ॥ ೨೨೮ ॥

### ಸಾಂಗತ್ಯ – ರೂಪಕ

ಮುನಿನಾಥ ಲಾಲಿಸು ತನಯರನೊಡಗೂಡಿ ।
ಘನತೋಷ ತಾಳ್ದೆನೀ ದಿನದಿ ॥
ವನದಿ ನಾ ಬಿಸುಟಿರ್ದ ಜನಕಜೆ ಪಾಡೇನು ।
ಎನಗರುಹುವುದೀಗ ದಯದಿ ॥ ೧ ॥
ಅರಸನೀನರಿತವ ಕೊರಗುವುದೇತಕೆ । ತರುಣಿಯ ಕರೆತಹೆ ನಾಳೆ ॥
ಸರುವರ ಸೇರಿಸಿ ಮೆರೆದಿರು ಸಭೆಯಲ್ಲಿ ।
ಹಿರಿಮೆಯ ತೋರ್ಪಳು ಬಾಲೆ ॥ ೨ ॥ ೨೩೦ ॥

### ವಾರ್ಧಕ

ಅಸ್ತೆನುತ ಭೂವರಂ ಯಜ್ಞಶಾಲೆಗೆ ಬಂದು ।
ಪ್ರಸ್ತುತದ ಕಾರ್ಯಮಂ ಮನದಂದು ಮರುದಿನದಿ ।
ವಿಸ್ತರದ ಸಭೆಗಾಗಿ ಕರೆಸಿದನು ದೇಶದ ಸಮಸ್ತ ನರನಾರಿಯರನು ॥
ಸ್ವಸ್ತಿರದಿ ಮಂಡಿಸಿರೆ ವಾಲ್ಮೀಕಿ ಮುನಿಪತಿಯು ।
ಮತ್ತಿರದೆ ಕುಶಲವರ ಕೂಡಿಕೊಂಡೈತರಲು ।
ಚಿತ್ತದೊಳಗಾಶ್ಚರ್ಯವೆತ್ತಿರುವ ಸಭೆಯೊಳಗೆ ಪೃಥ್ವೀಶ ಸ್ವಾಗತಿಸುತ
॥ ೧ ॥ ೨೩೧ ॥

## ಸೌರಾಷ್ಟ್ರ – ತ್ರಿವುಡೆ

ಪರಮತೇಜೋರಾಶಿ ಮುನಿಪತಿ ।
ದುರಿತ ತಿಮಿರ ಪತಂಗ ನಿನ್ನಯ ।
ಬರವಿನಿಂದಲಿ ಧನ್ಯನಾದೆನು । ಒರೆಯಲೇನು ॥ ೧ ॥
ಬಾಲಕರ ಕಂಡಿರುವ ಜನಗಳು ।
ತಾಳಿಹರು ಕಾತರವನೀದಿನ ।
ಮೂಲವರುಹಿಸಿ ಕರುಣದಿಂದಲಿ । ಪಾಲಿಸುವುದು ॥ ೨ ॥ ೨೩೩ ॥

## ಆರಭಿ – ಏಕ

ಲಾಲಿಸೆಲೆ ಜನಪಾಲಕನೆ ನುಡಿಯ । ನಿನ್ನೊಡನೆ ಪೇಳುವೆ ।
ಬಾಲಕರ ಪರಿಪಾಲಿಸಿದ ಪರಿಯ ॥ ತಾಳಲಾರದೆ ಖೂಳನಿಂದೆಯ ।
ಬಾಲೆಯನು ಭೂಲೋಲ ತೊರೆದಾ ।
ಮೇಲೆ ಕಾಡಿನ ಮೂಲೆ ಸೇರುತ ।
ಗೋಳಿಡಲು ನಾ ಕೇಳಿ ಪೊರೆದನು ॥ ೧ ॥
ವನಿತೆ ಪಡೆದಳು ತನುಜರೀರ್ವರನು । ಕಾಣುತ್ತ ರಚಿಸಿದೆ ।
ಜನನ ಕರ್ಮವ ಸನುಮತದಿ ನಾನು ॥
ಜನಕಸುತೆ ಪಾವನೆಯು ಜಗದಲಿ ।
ಮನದ ಸಂಶಯವನುಚಿತವು ಕಾ ।
ನನವ ಸೇರಿದ ಜನನಿ ತನಯರ ।
ಜನಪ ಸ್ವೀಕರಿಸೆನಲು ಬಂದಿಹೆ ॥ ೨ ॥ ೨೩೪ ॥

## ಭಾಮಿನಿ

ಮುನಿಪವಚನವ ಕೇಳಿ ಪೌರರು ।
ವನಿತೆಶೀಲವ ಶಂಕಿಸದೆ ನೀ ।
ಜನಪ ಸ್ವೀಕರಿಸೆನುತ ಬಂದುರೆ ವಿನಯದಿಂದಾಡೆ ॥
ಇನಕುಲೇಶನು ಮಾತನಾಲಿಸಿ ।
ಮನದಿ ದುಗುಡವ ತಾಳಿ ಯೋಚಿಸಿ ।
ಜನಕಜೆಯ ನೋಡುತ್ತಲೆಂದನು ಜನರ ಸಭೆಯೊಳಗೆ
॥ ೧ ॥ ೨೩೬ ॥

## ಮಧುಮಾಧವಿ – ಆದಿ

ಸೇರಿದ ಗಣ್ಯರೆ ನೀವೆಲ್ಲ ಕೇಳಿ ।
ನಾರಿಯ ಸಂಗತಿ ತಿಳಿದೀಗ ಪೇಳಿ ॥ ಪ ॥
ಹರಧನು ಭಂಗಿಸಿ ಬಾಲೆಯ ಪಡೆದೆ ।
ತರುಣಿ ಶಿರೋಮಣಿಗೊಪ್ಪುವ ದೃಢದೆ ॥
ತೊರೆದೆಲ್ಲ ಸೌಖ್ಯವ ಬಂದಳು ವನಕೆ ।
ಪರಿಪರಿ ಕ್ಲೇಶದಿ ನೊಂದಿಹಳೀಕೆ ॥ ೧ ॥
ವಿಪಿನದಿ ರಾವಣ ಕದ್ದೊಯ್ದನಿವಳ ।
ತಪಿಸುತ ಕಳೆದಳು ದಿನಗಳ ಬಹಳ ॥
ತಪನಜಕುಲಕೀರ್ತಿಯುಳಿಸಲಿಕಾನು ।
ಅಪರಾಧಿಯನು ಕೊಂದು ಸೆರೆಬಿಡಿಸಿದೆನು ॥ ೨ ॥
ಅನಲನು ಪರಿಶುದ್ಧಗೈದನು ಸತಿಯ ।
ಜನಗಳು ಶಂಕಿಸೆ ಸತ್ಯಸಂಗತಿಯ ॥
ಜನಪನ ಮಾನವ ಕಾಯಲಿಕಾನು ।
ವನಿತೆಯ ಕಾಡಿಗೆ ಕಳುಹಿದೆನಿನ್ನು ॥ ೩ ॥
ಜಾನಕಿ ಪರಿಶುದ್ಧೆ ಸಂಶಯವಿಲ್ಲ ।
ಮಾನಿಸಿ ಜನರಿದನೊಪ್ಪಬೇಕಲ್ಲ ॥
ಮಾನಿನಿ ಶಪಥವ ಗೈದರೆ ಸಾಕು ।
ಮಾನವಲೋಕವ ಮೆಚ್ಚಿಸಬೇಕು ॥ ೪ ॥ ೨೪೦ ॥

## ಭಾಮಿನಿ ಅರ್ಧ

ಧರಣಿಪಾಲನ ಮಾತನಾಲಿಸಿ । ಬೆರಗಿನೊಳಗಿರೆ ಸರ್ವಜನಗಳು ।
ತರುಣಿ ಜಾನಕಿ ದುಗುಡದಾಳುತಲಿರವ ಪೇಳಿದಳು ॥ ೧ ॥ ೨೪೧ ॥

## ಭೂಪಾಳಿ – ತ್ರಿವುಡೆ

ಧರಣಿದೇವಿಯೆ ಕರುಣಿಸಿದ ಸುತೆ ।
ತರಣಿಕುಲಜನ ಪಟ್ಟದರಸಿಯು ।
ನೆರೆದ ಸಭೆಯೊಳು ಚರಿತೆಯೊರೆಯುವ ।
ಸಿರಿಯು ಸುರಿವುದ ಕಂಡೆನು ॥ ೧ ॥

ಪಾವಕನ ಮುಖದಿಂದ ಜಗದಲಿ ।
ಪಾವನೆಯು ನಾನಾದೊಡೇನಿದೆ ।
ಜೀವನದ ಸುಖವೆನ್ನಪಾಲಿಗೆ । ದಾವಸೇರಿತು ಬಲ್ಲೆನು ॥ ೨ ॥
ನಂಬಿದೆನು ನಾನಂಬುಜಾಕ್ಷನ ।
ಬೆಂಬಿಡಿದು ಬಲು ಹಂಬಲಿಸಿದೆನು ।
ಅಂಬುದವೆ ಕೂರಂಬ ಕರೆಯಲು ।
ನಂಬಲೇನಿದೆ ಬುವಿಯಲಿ ॥ ೩ ॥ ೨೪೪ ॥

**ವಾರ್ಧಕ**

ರಾಮನನು ಬಿಟ್ಟನ್ಯಪ್ರೇಮಿಗಳನೆಣಿಸಿಲ್ಲ ।
ರಾಮರಾಮೆನುವುದೀಶ್ಯಾಮೆಯಂತಃಕರಣ ।
ಏ ಮಾತು ದಿಟವಿರಲು ಗೋಮಿನಿಯೆ ಮೈದೋರಿ
ಪ್ರೇಮದಿಂದೊಯ್ವಳೆನಲು ॥
ಆ ಮಹಾಶಬ್ದದಿಂ ಬಿರಿದುದು ಸಭಾಸ್ಥಾನ ।
ಭೂಮಿದೇವಿಯೆ ಬಂದು ಮಂಗಳಾಕೃತಿದೋರಿ ।
ಕಾಮಿನಿಯ ಕೈಪಿಡಿದು ಕರೆದೊಯ್ಯೆ ಕಾಣುತ್ತಲಾ ಮಹಿಪ
ಮೈಮರೆದನು ॥ ೧ ॥
ಕಾಂತೆ ಲೋಕಾಂತರವ ಸೇರಲಾಭೂಕಾಂತ ।
ಭ್ರಾಂತನಂತಾಡುತಿರೆ ವಾಲ್ಮೀಕಿ ವಾಸಿಷ್ಠ ।
ಮುಂತಾದ ಮುನಿಗಳೀ ಸಂಸಾರಮಂ ತಿಳಿದು ಶಾಂತಿಯಂ
ಧರಿಸೆನ್ನಲು॥
ಅಂತರಂಗದ ಶೋಕಸಂತತಿಯ ಮರೆಮಾಡಿ ।
ತಾಂ ತಳೆದು ಧೈರ್ಯವಂ ಯಜ್ಞಮಂ ಪೂರೈಸಿ ।
ಸಂತಾನವೊಡಗೂಡಿ ನಿಜನಗರಿಗೈತಂದು ಸಂತಾಪದೊಳಗಿರ್ದನು
॥ ೨ ॥ ೨೪೬ ॥

***** **ಶುಭಂ** *****

# ಮರುತ್ ಜನ್ಮ

ಪ್ರಸಂಗ ವಿಧ :
ಪೌರಾಣಿಕ

ಆಧಾರ ಗ್ರಂಥ :
ಮಹಾಭಾರತ

ಭಾಷೆ :
ಕನ್ನಡ

ಕಥಾಸಂಯೋಜನೆ :
ವೇದಮೂರ್ತಿ ಕಮಲಾದೇವಿಪ್ರಸಾದ ಆಸ್ರಣ್ಣ, ಕಟೀಲು

ಹಿಂದಿನ ಪ್ರಕಾಶನ :
ಸದಾನಂದ ಆಸ್ರಣ್ಣ ಪ್ರಕಾಶನ, ಕಟೀಲು

ಒಟ್ಟು ಪದ್ಯಗಳು :
೮೮

# ಮರುತ್ ಜನ್ಮ

## ಪಾತ್ರಗಳು

ಇಂದ್ರ

ಕಶ್ಯಪ

ದಿತಿ

ದೂತ

ಬಲಿ

ಬ್ರಹ್ಮ

ನಾರಾಯಣ

ಅದಿತಿ

ಪ್ರಹ್ಲಾದ

# ಮರುತ್ ಜನ್ಮ

## ಕಥಾಸಾರಾಂಶ

ದೇವೇಂದ್ರನ ನಂದನವನ ವಿಹಾರ
ಕಶ್ಯಪನ ಎದುರು ದಿತಿಯ ಪ್ರಲಾಪ
ದಿತಿಯ ತಪಸ್ಸು
ದೇವೇಂದ್ರ ಮಾರುವೇಷದಿಂದ ಬಂದು ಅವಳ ಗರ್ಭವನ್ನು ಸೇರಿ ಭ್ರೂಣವನ್ನು ಏಳಾಗಿ ಸೀಳುವುದು.
ಸೇಡಿನಿಂದ ಬಲಿಯ ದೇವಲೋಕಕ್ಕೆ ಆಕ್ರಮಣ
ದೇವೇಂದ್ರನ ಸೋಲು
ಬ್ರಹ್ಮನಲ್ಲಿಗೆ ದೂರು
ವಿಷ್ಣುವಿನ ಸಮಾಧಾನ
ಭ್ರೂಣಹತ್ಯಾದೋಷಕ್ಕೆ ಪ್ರಾಯಶ್ಚಿತ್ತ
ಕಶ್ಯಪನ ಸಲಹೆಯಂತೆ ಅದಿತಿಯ ವ್ರತ
ಶುಕ್ರಾಚಾರ್ಯನು ಬಲಿಯ ಜೊತೆಗೆ ಪ್ರಹ್ಲಾದನಲ್ಲಿಗೆ ಪಯಣ

# ಮರುತ್ ಜನ್ಮ

## ಪ್ರಸಂಗ ಸಾಹಿತ್ಯ

**ಸೌರಾಷ್ಟ್ರ – ತ್ರಿವುಡೆ**

ಒಂದು ದಿನ ದೇವೇಂದ್ರ ವಿಭವದಿ ।
ಬಂದು ಸಿಂಹಾಸನವನೇರುತ ।
ವಂದಿಸಿದ ಸುರರನ್ನು ಮನ್ನಿಸು । ತೆಂದನಾಗ ॥ ೧ ॥

**ಕಲ್ಯಾಣಿ – ಅಷ್ಟ**

ಲಾಲಿಸಿ ಸುರರೆಲ್ಲ ಸೊಲ್ಲ । ಶ್ರೀ ।
ಲೋಲನ ದಯದಿಂದಲೆಲ್ಲ ॥
ಖೂಳ ಹಿರಣ್ಯಾಕ್ಷ ಹಿರಣ್ಯ ಕಶಿಪು ಖಳ ।
ಜಾಲ ನಿರ್ಮೂಲದಿ ಸಂಕಟ ದೂರಾಯ್ತು ॥ ೨ ॥
ಒಂದಾಗಿ ಹರಿಪೂಜೆ ಗೈದು । ಸತಿ ।
ವೃಂದದಿಂದೊಡಗೂಡಿ ನಲಿದು ॥
ನಂದನವನದಲ್ಲಿ ಸಂಭ್ರಮದಲಿ ದಿನ ।
ವೊಂದನು ಕಳೆಯುವ ಮನವಾಯಿತೆನಗೆನೆ ॥ ೩ ॥

**ಭಾಮಿನಿ**

ಸುರಪತಿಯ ನುಡಿ ಕೇಳಿ ಹರುಷದಿ ।
ತರುಣಿಯರ ಕರಕೊಂಡು ಬೇಗದಿ ।
ಸುರರು ನಂದನದೊಳಗೆ ಸಂಭ್ರಮದಿಂದಲಿರಲಿತ್ತ ॥

## (ದಿತಿಯ ಪ್ರವೇಶ)

ತರಳರಳಿವಿನ ಶೋಕವಹ್ನಿಗೆ ।
ಕರುಳು ಸುಡುತಿರೆ ದಿತಿಯು ಬಂದಳು ।
ನಿರುತ ತಪದೊಳಗಿರುವ ಕಶ್ಯಪ ಮುನಿಪನಿದ್ದೆಡೆಗೆ ॥ ೪ ॥

## ಕಶ್ಯಪನ ಪ್ರವೇಶ

## ಮಧುಮಾಧವಿ – ತ್ರಿವುಡೆ

ದಿನಪಕೋಟಿ ಪ್ರಭಾ ವಿಭೂಷಿತ ।
ಮುನಿಪ ಕಶ್ಯಪನಾಶ್ರಮದೊಳಿರೆ ।
ವನಿತೆ ದಿತಿಯೈತಂದು ಪಾದಕೆ ।
ಮಣಿದು ನಿಂತಿರೆ ಕಾಣುತ ॥ ೫ ॥
ದಿತಿಯೆ ಬಾಬಾ ಸುದತಿ ಕುಳ್ಳಿರು ।
ವ್ಯಥೆಯ ತಾಳಿಹುದೇಕೆ ಪೇಳ್ವುದು ।
ಮತಿಯುತೆಯು ನೀನರಿತಿರುವೆ ಜೀ ।
ವಿತದ ಗತಿಯತಿ ಚಂಚಲ ॥ ೬ ॥
ಕಳೆದುಕೊಂಡೆನು ಸುತರನೆಲ್ಲರ ।
ತಿಳಿದು ಮುನಿವರ ಕರುಣಿಸಿದೆ ನೀ ।
ಕೊಲಿಸಿಕೊಂಬರ ದಿವಿಜರಿಂದಲಿ ।
ಕರುಣವಿಲ್ಲವೆ ಎನ್ನೊಳು ॥ ೭ ॥

## ಕಾಂಬೋಧಿ – ಅಷ್ಟ

ಪಾತ್ರವನಾಧರಿಸಿ । ಸಂತಾನದ ।
ಪ್ರಾಪ್ತಿಯು ಕೇಳರಸಿ ॥
ದಾತೃ ತಾನಿತ್ತರು ಸಾರ್ಥಕವೆನಿಸಲು ।
ಪಾತ್ರಕೆ ಯೋಗ್ಯತೆ ಹೆಚ್ಚಿನದಿರಬೇಕು ॥ ೮ ॥
ಕೊಡುವಾತನಲಿ ತೇಜವು । ಹೆಚ್ಚಿನದಿರೆ ।
ಪಡೆವಾತನಲಿ ದೋಷವು ॥
ಅಡಗದೆ ಪೋದರೆ ತೇಜಕ್ಕೆ ಕುಂದಲ್ತೆ ।
ಮೃಡಸಮ ನಿನ್ನಿಂದಾಗದ ಕಾರ್ಯವುಂಟೇನು ॥ ೯ ॥

## ಸಾಂಗತ್ಯ – ರೂಪಕ

ತೇಜವು ಪುಸಿಯಾದ ದೃಷ್ಟಾಂತ ಕಾಣದು ।
ಸಾಜ ಪ್ರಭಾವ ಬೀರುವುದು ॥
ಗೋಜಲಾಗುವುದುಂಟು ಪಡೆವರ ಮನ ಮತ್ತೆ ।
ಭಾಜನ ಕಾಲ ದೋಷದೊಳು ॥ ೧೦ ॥
ಕಾಲ ಪ್ರಭಾವ ನಿಯಂತ್ರಿತ ಸಂತತಿ ।
ಜಾಲವೆಂದಾದರೆ ಮತ್ತೆ ॥
ಕಾಲವೆ ನಿಮ್ಮಯ ತೇಜಕಿಂತಲು ಬಲ ।
ಶಾಲಿಯೆಂದಾಯಿತೆ ನಲ್ಲ ॥ ೧೧ ॥

## ಬೇಗಡೆ – ಅಷ್ಟ

ಲೋಲಲೋಚನೆ ಕೇಳು ಪೇಳುವೆನು । ಈ ಜಗದ ಜೀವನ ।
ಕಾಲವಶವಿದು ತಿಳಿಯೆ ತತ್ವವನು ॥
ಬಾಲರನು ದುಷ್ಕಾಲದಲಿ ಪಡೆ ।
ದೇಳಿಗೆಯ ಬಯಸಿದರೆ ಫಲಿಪುದೆ ।
ಖೂಳತನದೊಳು ಗೋಳುಗುಡಿಸೀ ।
ರೇಳು ಜಗವನು ಸಂದರವದಿರು ॥ ೧೨ ॥
ಉತ್ತಮದ ಸಂತಾನ ಬೇಕಿರಲು । ಪುಂಸವನ ವ್ರತವನು ।
ಚಿತ್ತಶುದ್ಧದಿ ಚರಿಸು ನೀ ಮೊದಲು ॥
ವತ್ಸರಾವಧಿ ಪೂರ್ತಿಯಾದರೆ । ಸತ್ವದಲಿ ಮಿಗಿಲಹನು ಸುರಪಗೆ ।
ಮಿತ್ರನಾಗುವನಲ್ಲದಿರಲವ । ವ್ಯರ್ಥವಾಗದು ವ್ರತವಿದೆಂದಿಗು ॥ ೧೩॥

## ಭಾಮಿನಿ

ಚರಿಸುವೆನು ವ್ರತವನ್ನು ಭಕ್ತಿಯೊ ।
ಳರುಹು ವಿಧಿಗಳನೆನಲು ಮುನಿಪತಿ ।
ಹರಿಯ ವ್ರತವಿದು ಭಜಿಸುತಿರು ಶ್ರೀಲೋಲನನು ಬಿಡದೆ ॥
ಪರರ ಹಿಂಸೆಗೆ ಮನವ ಮಾಡದೆ ।
ಪರಮಮಂಗಳೆಯೆನಿಸಿ ಶುದ್ಧಾ ।
ಚರಣದೊಳಗಿರು ಸತ್ಯವನು ಬಿಡದಂತೆ ನಿಷ್ಠೆಯಲಿ ॥ ೧೪ ॥

## ದೇವೇಂದ್ರನ ಓಲಗ

### ಮಧುಮಾಧವಿ – ತ್ರಿವುಡೆ

ದೇವಸಭೆಯೊಳಗಿರಲು ಸುರಪತಿ ।
ಭಾವಭಕ್ತಿಯೊಳೆರಗೆ ಸುರತತಿ ।
ಭಾವೆಯರು ನರ್ತನಕೆ ತೊಡಗಿರೆ ।
ಧಾವಿಸುತ ಚರ ಮಣಿಯುತ ॥ ೧೫ ॥

### ಮುಖಾರಿ – ಏಕ

ಲಾಲಿಸಬೇಕು ಜೀಯ । ನಿರ್ಜರರಾಯ ।
ಲಾಲಿಸಬೇಕು ಜೀಯ ॥ ಪ ॥
ದುರುಳರ ಹನನದಿಂದ । ಹರಿಯಿತು ಕಷ್ಟವೆಂಬ ॥
ಹರುಷದಿ ನಲಿವಿರಿ । ಪರಿಪರಿ ಮೋದದಿ ।
ಅರಿಯದೆ ಮುಂದಣ । ದುರಿತ ಪರಂಪರೆ ॥ ೧೬ ॥
ದಿತಿದೇವಿ ಶೋಕಿಸುತಿಂದು । ಯತಿವರನೆಡೆ ಬಂದು ॥
ಸುತನನು ಬೇಡಲಿ । ಕತಿಬಲವಂತನ ।
ವ್ರತಿಪನು ಪೇಳಿಹ । ವ್ರತವನು ಚರಿಸಲು ॥ ೧೭ ॥
ಆತನು ಜನಿಸಿದರೆ । ಘಾತವಾಗುವುದು ಖರೆ ॥
ನೀ ತಿಳಿದನುವನು । ಭೀತಿಯ ಬಿಡಿಸೈ ।
ನಾಥನು ಜಗತಿಗೆ । ರೀತಿಯನರಿತಿಹೆ ॥೧೮ ॥

### ಭಾಮಿನಿ

ಭೀತಿಯನು ಬಿಡಿರಿದಕುಪಾಯವ ।
ನೀ ತತೂಕ್ಷಣಗೈವೆನೆನ್ನುತ ।
ದೂತರನು ಬೀಳ್ಗೊಟ್ಟು ಚಿಂತೆಯನಾತುಕೊಳ್ಳುತಲಿ ॥
ಯಾತಕೀಪದ ಬಯಸಿ ಬಂದೆನೊ ।
ಯಾತುಧಾನರ ಕಾಟ ತಪ್ಪದು ।
ಘಾತಗೈವುದು ಜನನಪೂರ್ವದೊಳೆಂದು ನಿರ್ಧರಿಸಿ ॥ ೧೯ ॥

## ಮೋಹನ – ಅಷ್ಟ

ವೇಷವ ಮರೆಸುತಲಿ । ಆ ದಿತಿಯಿರ್ಪ । ದೇಶವ ಸಾರುತಲಿ ॥
ಸಾಸಿರಕಣ್ಣನು ನಡೆತಂದು ವಂದಿಸ ।
ಲಾಸೀನಳಾಗಿಹ ಶತಪತ್ರನೇತ್ರೆಯ ॥ ೨೦ ॥
ಯಾರಯ್ಯ ತರುಣ ನೀನು । ಸುಂದರಕಾಯ ।
ಯಾರ ಮೋಹದ ಕಂದನು ॥
ವಾರಿ ತುಂಬಿದ ನೇತ್ರವಾರಿದ ಮುಖಕಾಂತಿ ।
ಸಾರುತಲಿದೆ ಶೋಕ ಭಾರವನರುಹಯ್ಯ ॥ ೨೧ ॥
ತಾಯಿ ತಂದೆಯ ಕಾಣೆನು । ನಿನ್ನಲ್ಲಿಯೆ ।
ತಾಯಿಯ ಮೊಗ ಕಂಡೆನು ॥
ಸಾಯುವ ತನಕವು ಸೇವೆಮಾಡುವೆನಮ್ಮ ।
ಮಾಯಕವಲ್ಲಿದು ಬೇಡುವೆನಾಶ್ರಯ ॥ ೨೨ ॥

## ಕಂದ

ಎನಲಾ ಮಾತಿಗೆ ಸಮ್ಮತಿ ।
ಯನು ಸೂಚಿಸೆ ಸಂತಸಂಬಡುತಾ ಶಕ್ರಂ ತಾ ॥
ನನುದಿನ ಸೇವೆಯ ಗೈಯುತ ।
ದಿನವಂ ಕಾಯುತಲಿರುತಿರೆ ಮಾಸಗಳುರುಳಲ್ ॥ ೨೩ ॥

## ವೃಂದಾವನ ಸಾರಂಗ – ಅಷ್ಟ

ಇರಲೊಂದು ದಿನ ಸಂಧ್ಯಾಸಮಯದಿ ದಿತಿದೇವಿ ।
ಚರಣವ ತೊಳೆಯದೆ ಕಾಲ್ನೀಡಿ । ಮಲ ।
ಗಿರುತಿರಲೆಂಜಲ ಬಾಯಲ್ಲಿ । ಕೆದ ।
ರಿರಲು ಕೂದಲರಾಶಿ ತಾನಲ್ಲಿ । ಶುಚಿ ।
ಯಿರದಲ್ಲಿ । ನಿದ್ರಾ । ಭರದಲ್ಲಿ ॥ ಕಂಡು ।
ಸುರಪತಿ ನಕ್ಕನು ಮನದಲ್ಲಿ । ಕಾಲ ।
ಸರಿಯಾದುದೆಂದು ತವಕದಲ್ಲಿ ॥  ೨೪ ॥

### ವಾರ್ಧಕ

ಸೂಕ್ಷ್ಮರೂಪವ ತಾಳಿ ದಿತಿಗರ್ಭವನು ಸೇರಿ ।
ತಕ್ಕುದನು ಗೈವೆನೆಂದಾಲೋಚಿಸುತ ಶಕ್ರ ।
ಘಕ್ಕನೇ ವಜ್ರದಿಂದೇಳಾಗಿ ಖಂಡಿಸುತಲಾ ಭ್ರೂಣವನ್ನು ಬಳಿಕ ॥
ಕಕ್ಕುಲತೆಯನು ತೊರೆಯುತೊಂದೊಂದನೇಳಾಗಿ ।
ಸಿಕ್ಕಡಿಯ ಮಾಡಲ್ಕೆ ಮಿತ್ರನಾಗುವೆವೆನ್ನು ।
ತೊಕ್ಕಣಿಸುತಿರೆ ಶಿಶುಗಳದಕೊಪ್ಪಿ ಕರಕೊಂಡು ಹೊರವಂಟು ಬಂದು
ನಿಲಲು ॥ ೨೫ ॥

### ಕಾಂಬೋಧಿ – ಝಂಪೆ

ಅಚ್ಚರಿಯು ಮೂಡಿಹುದು ಉಚ್ಚರಿಸು ನಿಜವನ್ನು ।
ಹೆಚ್ಚಿದರು ಸುತರೆಂತು ಪೇಳು ॥ ಇಚ್ಛಿಸಿದೆನೋರ್ವಸುತ ಸಚ್ಚರಿತ
ಬೇಕೆಂದು । ಮುಚ್ಚುಮರೆ ಬೇಡೆಂದು ಪೇಳೆ ॥ ೨೬ ॥
ಪುತ್ರನಂ ಕೊಲ್ಲಲ್ಕೆ ಶತ್ರುಭಾವದಿ ಬಂದ ।
ವೃತ್ರಾರಿ ನಾನಮ್ಮ ಕೇಳು ॥
ಪತ್ರಶಾಯಿಯ ದಯದಿ ಸತ್ತೊಮ್ಮೆ ಬದುಕಿರ್ದು ।
ಮಿತ್ರರು ಮರುತ್ತರೆನಿಸಿರ್ದು ॥ ೨೭ ॥
ಧೂರ್ತರನು ಪಡೆದಿರ್ದು ವ್ಯರ್ಥವಾಯಿತು ಬಾಳು ।
ಪ್ರಾರ್ಥಿಸಿದೆ ಸಚ್ಚರಿತ ಸುತನ ॥
ಸಾರ್ಥವಾಯಿತು ಬದುಕು ಪುತ್ರರನು ಕಂಡಿಂದು ।
ಸ್ವಾರ್ಥಸಾಧನೆಯಾಯ್ತು ಪೋಗು ॥ ೨೮ ॥

## ಬಲಿಯ ಪ್ರವೇಶ

### ಮಧ್ಯಮಾವತಿ – ತ್ರಿವುಡೆ

ಶೋಣಿತಾಪುರದೊಳಗೆ ವಿಭವದಿ ।
ದಾನವಾಧಿಪ ಬಲಿಯದೊಪ್ಪಿರೆ ।
ಗಾನನಾಟ್ಯ ವಿನೋದ ರಂಜಿತ ।
ಮಾನಸನು ತಾನಾಗುತ ॥ ಹರ್ಷದಿಂದ ॥ ೨೯ ॥

ಬಂದು ಚಾರಕನೋರ್ವ ಮಣಿಯಲು ।
ಮಂದಹಾಸದಿ ಪೇಳ್ದನೇನಿದು ।
ತಂದ ಸುದ್ದಿಯ ಬಿತ್ತರಿಸು ದಿವಿ ।
ಜೇಂದ್ರನೆಲ್ಲಿಹ ಗೈದನೇನನು ॥ ಎನಲು ಚರನು ॥ ೩೦ ॥

**ಪುನ್ನಾಗ – ಅಷ್ಟ**

ಸ್ವಾಮಿಯೆ ಶರಣೆಂಬೆನು । ಮಹಾ ।
ಸ್ವಾಮಿಯೆ ಶರಣೆಂಬೆನು ॥ ಪ ॥
ಸ್ವಾಮಿಯೆ ನಮ್ಮನು ಪ್ರೇಮದಿ ಕಾಯುವ ।
ಕಾಮಿತವೀಯುವ ಸಾಮರ್ಥ್ಯವಂತನ ॥ ಅ.ಪ. ॥
ದೇವಲೋಕಕೆ ಪೋಗಿ ಬಂದೆ । ಅಲ್ಲಿ ।
ಸಾವಿಲ್ಲದವರನ್ನು ಕಂಡೆ ॥
ದೇವರಾಜನು ಬಲು ಧೂರ್ತತೆಯಿಂದೀಗ ।
ಹೇವವಿಲ್ಲದೆ ಗೈದ ಕಾರ್ಯವನೇನೆಂಬೆ ॥ ೩೧ ॥
ವೇಷವ ಮರೆಸುತ್ತ ಪೋಗಿ । ದಿತಿ ।
ಯಾಶ್ರಮ ಸೇರಿದ ಖೋಡಿ ॥
ಮೋಸದಿಂದೊಳಪೊಕ್ಕು ಗರ್ಭದ ಶಿಶುವನ್ನು ।
ಹೇಸದೆ ಖಂಡಿಸಿ ಮಿತ್ರರಾಗಿಸಿಕೊಂಡ ॥ ೩೨ ॥

**ಮಾರವಿ – ಏಕ**

ಚರರಿಂತೆಂದುದನಾಲಿಸಿ ಕೋಪದೊ । ಳುರಿಗಿಡಿಗಳ ಸೂಸಿ ॥
ಅರರೆ ದುರಾತ್ಮನು ಗರುವದೊಳೀತೆರ ।
ವರಿದನೆ ಭ್ರೂಣವನು ॥ ೩೩ ॥
ಉತ್ತಮಸಂತತಿವೆತ್ತವಳಾಸೆಗೆ । ಕುತ್ತವ ತಂದಿರುವ ॥
ಧೂರ್ತನ ಶಿರವನು ಕತ್ತರಿಸದೆ ಬಿಡೆ ।
ದೈತ್ಯನು ನಾನಹೆನೆ ॥ ೩೪ ॥
ಏಳಿರಿ ಸ್ವರ್ಗಕೆ ದಾಳಿಯನಿಟ್ಟಾ । ಮೂಳನನೋಡಿಸುತ ॥
ಆಳುವ ನಾವೇ ಖೂಳನು ಸೇರಲಿ ।
ಪಾಳಾಗಿಹ ಗುಹೆಯ ॥ ೩೫ ॥

**ಮಾರವಿ – ಏಕ**

ಅಬ್ಬರಿಸುತ ಬಲಿಯಪ್ಪಣೆ ನೀಡಲು ।
ಹಬ್ಬಲು ಹರ್ಷವು ದೈತ್ಯರ ಲೋಕದಿ ।
ಕೊಬ್ಬಿದ ದಿವಿಜರ ಭಂಗಿಸಿ ಮೆರೆಯುವ ।
ಹಬ್ಬವ ಮಾಡುವ ಬನ್ನಿರಿ ನೀವೆನು ।
ತೊಬ್ಬೊಬ್ಬರ ಕರೆಕರೆಯುತ ಪೊರಟಿತು ।
ಬೊಬ್ಬೆಯ ಕೇಳ್ದಾ ದಿಗ್ಗಜ ಬೆದರಲು ॥ ಏನನೆಂಬೆ ॥ ೩೬ ॥

**ಕಂದ**

ದಾನವ ಸೈನ್ಯವನೀಕ್ಷಿಸಿ ।
ಮೇಣಿದನಿಂದ್ರಂಗೊರೆವುದೆ ಲೇಸೆಂದೆನುತಂ ॥
ತಾನತಿ ಜವದಿಂದೈತಂ ।
ದಾನತನಾಗುತ ಚರನತಿ ಭಯದಿಂ ನುಡಿದಂ ॥ ೩೭ ॥

**ಬಿಲಹರಿ – ಅಷ್ಟ**

ಬಂದಿದೆ ದೈತ್ಯರ ದಂಡು । ದೂರ ।
ದಿಂದಲೆ ಧಾವಿಸಿ ಬಂದೆನು ಕಂಡು ॥
ಮುಂದಿನ ಪರಿಯೇನು ನೋಡು । ಇದ ।
ರಿಂದಲಿ ಬರುವಂಥದೇನಿದೆ ಕೇಡು ॥ ೩೮ ॥
ಶೋಣಿತ ಪುರಪತಿಯಂತೆ । ಇಂದ್ರ ।
ಸೇನಕ ನೆಂಬಾತ ನತಿಬಲನಂತೆ ॥
ಜಾಣರು ನೀವಾದರೀಗ । ಓಡಿ ।
ಪ್ರಾಣದ ಮೇಲಾಶೆಯಿದ್ದರೆ ಬೇಗ ॥ ೩೯ ॥

**ಮಾರವಿ – ಏಕ**

ಚರರಿಂತೆಂದುದ ಕೇಳುತ ಶಕ್ರನು ।
ಉರಿಯುತ ಕೋಪದೊಳು ॥
ಹರಿಯಂತಾರ್ಭಟಗೈವುತಲೆಂದನು ।
ಸುರರನು ಕರೆಕರೆದು ॥ ೪೦ ॥

ಕೇಳಿರಿ ದಿವಿಜರು ಖೂಳದನುಜರುರು ।
ಪಾಳಯ ಬಂದಿಹುದ ॥
ತಾಳುವದೆಂತಿವರಾಳುತನಗಳನಿ ।
ನ್ನೇಳಿರಿ ನೀವೆನುತ ॥ ೪೧ ॥

**ಕಂದ**

ಬಂದಾ ಸುರಪತಿ ದಿವಿಜರ ।
ವೃಂದವ ಕೂಡುತಲಸುರರ ಪತಿಯಹ ಬಲಿಯಂ ॥
ಚಂದದೊಳೀಕ್ಷಿಸಿ ಮುಂದೈ ।
ತಂದುರೆ ನುಡಿಸಿದನಣಕಿಸುತವನಂ ಮಘವಂ ॥ ೪೨ ॥

**ಭೈರವಿ – ಅಷ್ಟ**

ಎಲವೊ ವೈರೋಚನಿಯೆ । ಹಿಂದಣ ಯುದ್ಧ ।
ದಲಿ ಸತ್ತು ಬದುಕಿರುವೆ ॥
ಕಲಹ ಗೈಯುವುದಕ್ಕೆ ಬಲವೆಲ್ಲಿ ನಿನಗಿಂದು ।
ತಲೆಭಾರ ಹೆಚ್ಚಿಹುದೆ ॥ ೪೩ ॥
ದಿತಿಯ ಗರ್ಭದ ಶಿಶುವ । ಛೇದಿಸಿದಂಥ । ಗತಿಗೇಡಿ ನಿನ್ನುರವ ॥
ಮಥಿಸುವ ಮನದಿಂದ ಖತಿಯೇರಿ ಬಂದಿಹೆ ।
ಹತಿಯ ತಾಳಿಕೊ ಮಘವ ॥ ೪೪ ॥
ಒಂದಾದ ಗರ್ಭವನು । ವಿಂಗಡಿಸುತ್ತ । ಹೊಂದಿಹೆ ಮೈತ್ರಿಯನು ॥
ಚಂದದೊಳಿಹರಭಿನಂದಿಸಿದಳು ಮಾತೆ ।
ನಿಂದಿಪುದ್ಯಾಕೆ ನೀನು ॥ ೪೫ ॥
ಧೂರ್ತ ನೀನಾಗಿರುವೆ । ದುಷ್ಕತ್ಯ ಸ । ಮರ್ಥನೆಗೆಳಸಿರುವೆ ॥
ವ್ಯರ್ಥವಾದಗಳೇತಕರ್ಥದ ನಿರ್ಣಯ ।
ಪೂರ್ತಿಗೊಳಿಪೆ ಯುದ್ಧದಿ ॥ ೪೬ ॥

**(ಯುದ್ಧ. ಇಂದ್ರನ ಸೋಲು)**

**ಭಾಮಿನಿ**

ದಿತಿಜರೊಳು ಬಡಿದಾಡಿ ಸೋತೆನು ।
ಗತಿಯೆ ಹಿಮಗಿರಿ ಗುಹೆಯದಾಯಿತು ।
ವ್ಯಥೆಯದೇತಕೆ ಬಂತೊ ತಿಳಿಯೆನು ಪೋಪೆನಜನೆಡೆಗೆ ॥
ಕಥಿಸುವೆನು ತಾನೆಲ್ಲವೆನುತಲಿ । ಶತಮಖನು ನಡೆತಂದು ಬ್ರಹ್ಮನ ।
ನುತಿಸೆ ಗೋಚರನಾದನಾತಗೆ ಕಮಲ ಸಂಭವನು ॥ ೪೭ ॥

**ಸುರುಟಿ – ಏಕ**

ಪಾಲಿಸ ಬೇಕೆನ್ನ । ಕಮಲಜ । ಲಾಲಿಸು ನುಡಿಯನ್ನ ॥
ಖೂಳ ಬಲಿಯು ಸುರರಾಲಯ ಮುತ್ತುತ ।
ಕಾಳಗಗೊಟ್ಟುರೆ ಸೋಲಿಸಿ ಮೆರೆದಿಹ ॥ ೪೮ ॥
ಘಾತಗೈದನೆಂತು । ಹಿಂದಕೆ । ಸೋತವ ತಾನಿಂತು ॥
ಯಾತಕೆ ನಮಗೀ ಭೀತಿಯದೊದಗಿತು ।
ಪಾತಕವೆತ್ತೆನೆ ನೀತಿಳುಹೆನಗೆನೆ ॥ ೪೯ ॥

**ಸಾಂಗತ್ಯ – ರೂಪಕ**

ದುಡುಕಿನ ನಡೆಯಿಂದ ಕೆಡುಕಾಯ್ತು ನಿನಗಿಂದು ।
ಜಡಜನಾಭನ ಸೇವೆಗೈವ ॥
ಮಡದಿಯ ಬಳಿಗೈಯ್ಯುತೊಡಲೊಳಗಿಹ ಶಿಶು ।
ಗಿಡುಕಿದೆ ವಜ್ರವ ನೀನು ॥ ೫೦ ॥
ದೋಷವೆ ಪೀಠವಿಶೇಷ ರಕ್ಷೆಗೆ ವೈರಿ । ನಾಶವ ಗೈದರೆ ಸ್ವಾಮಿ ॥
ಆ ಶಿಶು ಬೆಳೆದು ಸಿಂಹಾಸನವೇರ್ದರೆ ।
ದಾಸರು ನಾವೆಲ್ಲವವಗೆ ॥ ೫೧ ॥

**ಕಾಂಬೋಧಿ – ಝಂಪೆ**

ಪುಂಸವನ ವ್ರತವದಕೆ ದೇವ ಲಕ್ಷ್ಮೀರಮಣ ।
ಸಂಶಯವದೇಕೆ ಬಂತಯ್ಯ ॥
ಭ್ರಂಶಗೊಳಿಸಲಿಕುಂಟೆ ತಾನಿತ್ತ ಸ್ಥಾನವನು ।
ಸಂಸಾರಿ ನರನಂತೆ ನಡೆದೆ ॥ ೫೨ ॥

ಹಿಂದೆ ನಾ ಗೈದುದಕ್ಕನುಮತಿಯನಿತ್ತಿರುವ ।
ನೆಂದು ನಾನುದ್ಯುಕ್ತನಾದೆ ॥
ಮಂದಬುದ್ಧಿಯೊಳವಳು ವ್ರತವಿಧಿಯ ತಪ್ಪಿದುದ ।
ರಿಂದಾಯ್ತು ಗರ್ಭಕಾಪತ್ತು ॥ ೫೩ ॥
ಎಷ್ಟನಾಡಿದರೇನು ಭ್ರೂಣಹತ್ಯಾದೋಷ ।
ತಟ್ಟಿರುವುದೀ ಕೃತ್ಯದಿಂದ ॥
ನಷ್ಟವಾಗಲು ತೇಜ ಕಷ್ಟಗಳು ಸಹಜವಿದು ।
ಸೃಷ್ಟಿಯೊಳಗಿರುವಂಥ ನಿಯಮ ॥ ೫೪ ॥

## ದ್ವಿಪದಿ

ಹೊಂದಿರ್ದ ಪಾತಕವ ಕಳೆವೆ ನಾನೆಂತು ।
ಮುಂದೆ ದಾರಿಯ ತೋರು ತಂದೆ ನೀನಿಂತು ॥ ೫೫ ॥
ಹರಿಯ ಸಂಕಲ್ಪವೇನೆಂಬುದನು ನೀನು ।
ಹರಿಯಿಂದೆ ತಿಳಿಯುವುದು ಸರಿಯೆಂಬೆ ನಾನು ॥ ೫೬ ॥
ಎನಲೊಪ್ಪಿ ದೇವೇಂದ್ರ ಪೊರಟನಲ್ಲಿಂದ ॥
ಘನತಪವ ಕೈಗೊಂಡು ಗಯೆಯಲ್ಲಿ ನಿಂದ ॥ ೫೭ ॥

## ವಿಷ್ಣುವಿನ ಪ್ರವೇಶ

## ನವರೋಜು – ಏಕ

ಬಂದನು ವಾರಿಜನಯನ । ಸುರ ।
ವಂದಿತ ಪಾವನಚರಣ ॥
ಮಂದರಗಿರಿಧರ ಸುಂದರ ಮಾಧವ ।
ಕಂದರ್ಪನ ಪಿತ ನೊಂದರ ಪಾಲಿಪ ॥ ೫೮ ॥
ಏಳಯ್ಯಾ ಸುರಪಾಲ । ನೀ । ಪೇಳಯ್ಯಾ ಮನದಾಳ ॥
ಮೂಲೋಕವ ನೀನಾಳದೆ ವನದಲಿ ।
ಬಾಳುವ ವ್ರತವಿದ ತಾಳಿಹುದೇತಕೆ ॥ ೫೯ ॥

### ಮಧ್ಯಮಾವತಿ – ಆದಿ

ಕರುಣವಾರಿಧಿ ದೇವ ಕೇಳು ಬಿನ್ನಪವ ।
ಅರಿತನಿಗರುಹುವೆ ಮನದವಗತವ ॥ ಪ ॥
ದಿತಿಗರ್ಭವನು ಪೊಕ್ಕು ಭ್ರೂಣವ ತರಿದು ।
ಅತಿಶಯ ಪಾತಕ ಗಳಿಸಿದೆನಿಂದು ॥ ೬೦ ॥
ದಾನವ ಬಲಿಯಿಂದ ಸೋತವನಾಗಿ ।
ದೀನನಾಗುಳಿದಿಹೆ ಹಿಮಗಿರಿ ಸೇರಿ ॥ ೬೧ ॥
ಕಳೆಯುವುದೆಂತೀಗ ಪಾತಕವನ್ನು ।
ಗಳಿಸುವುದೆಂತೆನ್ನ ಪದವಿಯನಿನ್ನು ॥ ೬೨ ॥
ದಾರಿಗಾಣದೆ ಬಂದೆ ಬ್ರಹ್ಮನ ಮತದಿ ।
ತೋರಿಸು ನಿನ್ನಾಜ್ಞೆ ಧರಿಸುವೆ ಶಿರದಿ ॥ ೬೩ ॥

### ಶಂಕರಾಭರಣ – ರೂಪಕ

ಮರುತರಿಂಗೆ ಸುರರ ಸ್ಥಾನವನ್ನು ಕೊಡುವುದು । ಮತ್ತಾ ।
ದರಿಸಿ ಸೋಮಪಾನಕರ್ಹರೆಂದು ಗಣಿಪುದು ॥
ತೊರೆಯಬೇಕು ಪಾಪಮಯ ಶರೀರವಿದರನು । ಮುಂದೆ ।
ಪೊರೆವೆ ಬಂದುಪೇಂದ್ರನಾಗಿ ಕಷ್ಟ ಕಳೆವೆನು ॥ ೬೪ ॥

### ವಾರ್ಧಕ

ಎಂದು ಹರಿ ಮರೆಯಾಗಲಿಂದ್ರನಲ್ಲಿಂ ಪೊರಟು ।
ಮಿಂದು ನದಿಯೊಳು ತನ್ನ ದೇಹವಂ ತೊರೆದಾ ಪು ।
ಲಿಂದ ನಾಮಕನಾಗಿ ವ್ಯಾಧರೂಪವ ತಳೆದು ಪರ್ವತಾಧಿಪನೆನಿಸುತ॥
ಸಂದು ಪೋಗುತ ಮತ್ತೆ ಹಿಂದಣ ಶರೀರವಂ ।
ಚಂದದಿಂ ಸ್ವೀಕರಿಸುತದಿತಿಯಲ್ಲಿಗೆ ಬಂದು ।
ಬಂದ ಸಂಕಷ್ಟಗಳ ಪೇಳಲ್ಕೆ ಭರವಸವನಿತ್ತವಳು ಕಳುಹಿಸಲ್ಕೆ
॥ ೬೫ ॥

## ಕಶ್ಯಪ – ಅದಿತಿಯರ ಪ್ರವೇಶ

### ಸೌರಾಷ್ಟ್ರ – ತ್ರಿವುಡೆ

ಬಂದು ಕಶ್ಯಪಗೆರಗಲದಿತಿಯು ।
ಸಚಂದದಿಂ ಪಿಡಿದೆತ್ತಿ ಮುನಿಪತಿ ।
ನೊಂದುಕೊಂಡಿಹುದೇಕೆ ಪೇಳೌ ।
ಬಂದ ಬವಣೆ ॥ ೬೬ ॥

### ತೋಡಿ – ಆದಿ

ಕೇಳಯ್ಯ ಮುನಿಪಾಲ ಪೇಳುವ ನುಡಿಯ ।
ಬಾಲನಿಗೊದಗಿದ ದೈನ್ಯದ ಸ್ಥಿತಿಯ ॥ ೬೭ ॥
ದಾನವರುಪಹತಿಯಿಂದೆಲ್ಲ ಸಿರಿಯು ।
ಹಾನಿಯಾಗಲು ಬಂತು ಬಹಳ ದುಸ್ಥಿತಿಯು ॥ ೬೮ ॥
ಕಾಲಕರ್ಮದ ಗತಿ ಮೀರುವುದುಂಟೆ ।
ಶೀಲೆ ನಿನ್ನಳುವಿಂದ ಕರಗುವುದುಂಟೆ ॥ ೬೯ ॥
ಹೆತ್ತೊಡಲಿನ ನೋವನರಿತಿಹೆಯಲ್ಲ ।
ಬಿತ್ತರಿಸಿದಕೊಂದುಪಾಯವ ನಲ್ಲ ॥ ೭೦ ॥

### ಕೇದಾರಗೌಳ – ಅಷ್ಟ

ತೋಯಜಮುಖಿ ಕೇಳು ತೋಯಜಾಕ್ಷನ ಮನ ।
ದಾಯವ ತಿಳಿದರಾರು ॥
ಕಾಯುವನಾತನು ಕಾಯುತಲಿರು ಮನ ।
ಕಾಯವನೊಂದಾಗಿಸಿ ॥ ೭೧ ॥
ಪರಮಾತ್ಮನನು ನೆನೆ ಕ್ಷೀರಸೇವನೆ ಗೈವು ।
ತಿರುವುದು ವ್ರತನಿಯಮ ॥
ಪರಮಪಯೋವ್ರತವಾಚರಿಸಲು ರಮೆ ।
ಯರಸನುದಿಸುವನಿಲ್ಲಿ ॥ ೭೨ ॥

### ಭಾಮಿನಿ

ಲಲನೆ ಚಿಂತಿಸಬೇಡ ಮಾಧವ ।
ನೊಲುಮೆ ಕಾವುದು ನಮ್ಮ ತರಳನ ।
ಕಳೆದು ಕತ್ತಲೆ ಬೆಳಕು ಬರುವುದು ಸಹಜ ಲೋಕದಲಿ ॥
ನಳಿನಲೋಚನೆ ವ್ರತವ ಧರಿಸಲು । ತಿಳಿವುತಿದನೆಲ್ಲವನು ಶುಕ್ರನು ।
ಬಲಿಗೆ ಪೇಳಲು ಬಂದನವ ಪ್ರಹ್ಲಾದನಿರುವಡೆಗೆ ॥ ೭೩ ॥

## ಪ್ರಹ್ಲಾದನ ಪ್ರವೇಶ (ಬಲಿ ಪ್ರಹ್ಲಾದರ ಸಂಭಾಷಣೆ)

### ಮಧುಮಾಧವಿ – ತ್ರಿವುಡೆ

ಹರಿಯೆ ಸರ್ವೋತ್ತಮನು ಲೋಕದಿ ।
ಪರಮಮೋಕ್ಷಪ್ರದಾಯಕನು ನರ ।
ಹರಿಯೆ ರಕ್ಷಿಸು ನಮ್ಮನೆನುತಿಹ ।
ಶರಣಶ್ರೇಷ್ಠಗೆ ಮಣಿಯಲು ॥ ೭೪ ॥
ಮಗನೆ ಬಾ ಬಾ ಸುಗುಣವಾರಿಧಿ ।
ಸೊಗಯಿಸುವ ಮುಖಕಾಂತಿಯೀ ದಿನ ।
ಹಗಲಚಂದ್ರನ ತೆರದಿ ತೋರ್ಪುದು ।
ದುಗುಡವೆಲ್ಲಿಂ ಬಂದುದು ॥ ೭೫ ॥

### ಆರ್ಯಾಸವಾಯಿ – ಏಕ

ಹರಿಯನು ನಂಬಲು ಪೊರೆಯುವನೆಂಬಿರಿ ।
ಅರುಹಿದರಂದವನೆಲೆ ತಾತ ॥
ಸರಸಿಜನೇತ್ರಗೆ ನಮ್ಮಲಿ ದ್ವೇಷವು ।
ಸುರಪನೊಳಿಹುದೇನತಿ ಮಮತಾ ॥ ೭೬ ॥

### ಸಾಂಗತ್ಯ – ರೂಪಕ

ತನ್ನನೆ ನಂಬಿದನನ್ಯ ಭಕ್ತನ ಹರಿ । ಯನ್ಯಾಯಕೊಳಗಾಗದಂತೆ ॥
ಚೆನ್ನಾಗಿ ಪೊರೆಯುವನಿನ್ನು ಸಂಶಯಬೇಡ ।
ನಿನ್ನ ಮನವನರುಹುವುದು ॥ ೭೭ ॥

**ಮಾರವಿ – ಏಕ**

ಮರೆತನೆ ಕೊಟ್ಟಿರುವುರುತರ ಭಾಷೆಯ ।
ನರಹರಿ ನಿಮಗಂದು ॥
ಸುರಪತಿಯೆಮ್ಮನು ಪರಿಪರಿ ಪೀಡಿಸಿ ।
ದರು ಸುಮ್ಮನೆ ಇಹನು ॥ ೭೮ ॥

**ಸಾಂಗತ್ಯ – ರೂಪಕ**

ದೇವೇಂದ್ರನಿಂದೇನು ತೊಂದರೆ ನಮಗಾಯ್ತು ।
ನಾವಿರುವಲ್ಲಿಗೆ ಬಾರ ॥
ಗೈವನು ತಕ್ಕುದ ಮಿತಿಮೀರಿ ನಡೆದರೆ ।
ದೇವಗಿಲ್ಲವು ಪಕ್ಷಪಾತ ॥ ೭೯ ॥

**ಮಾರವಿ – ಏಕ**

ಶೀಲವ ಬೇಡಿದ ನಿಮ್ಮಲಿ ಸುರಪನು ।
ಖೂಳತನದೊಳಂದು ॥
ಸೀಳಿದ ದಿತಿಗರ್ಭವ ತಾ ಮೋಸದಿ ।
ತಾಳುತ ಮತ್ಸರವ ॥ ೮೦ ॥
ಇಂದ್ರನ ಮಾತಿಂದೆನ್ನನು ತುಳಿಯಲು ।
ಮಂದರಧರ ತಾನು ॥
ಮುಂದವತರಿಸುವನದಿತಿಯ ಗರ್ಭದೊ ।
ಳೆಂದರುಹಿದರೆನಗೆ ॥ ೮೧ ॥

**ಸಾಂಗತ್ಯ – ರೂಪಕ**

ಸ್ವರ್ಗಾಧಿಪತಿಯಾದೆ ಸೋಲಿಸುತಿಂದ್ರನ ।
ನುಗ್ರಪರಾಕ್ರಮದಿಂದ ॥
ನಿಗ್ರಹಕಾರಣವಾಯ್ತಾಸುರೀಭಾವ ।
ದಗ್ಗಳಿಕೆಯು ತುಂಬಿಕೊಂಡು ॥ ೮೨ ॥

**ಮಾರವಿ – ಏಕ**

ಧೂರ್ತನಾದಿಂದ್ರನ ಮತ್ತಿಳಿಸಲು ನಾನು । ಹೊತ್ತಿಹೆ ಛಲವನ್ನು ॥
ಚಿತ್ತದಿ ಹರಿಭಕ್ತಿ ತುಂಬಿಹುದೆನ್ನೊಳ ।
ಗೆತ್ತ ಹೋದರು ಬಿಡೆನು ॥ ೮೩ ॥

**ಕೇದಾರಗೌಳ – ಅಷ್ಟ**

ಹರಿಯ ಸಂಕಲ್ಪದ ತೆರನಿಂದ್ರ ಲೋಕದಿ । ಗರುವನು ನಮ್ಮಿಂದಲಿ ॥
ಸರಿಯಲ್ಲ ಮುರಿವುದು ನರಹರಿ ನೇಮವ ।
ದುರಿತ ಭಾಜನರಪ್ಪೆವು ॥ ೮೪ ॥

**ಕೇದಾರಗೌಳ – ಝಂಪೆ**

ತೊಟ್ಟಿರುವ ಛಲವ ನಾನು । ಬಿಟ್ಟರತಿ । ಭ್ರಷ್ಟನೆಂದೊರೆವರಿನ್ನು ॥
ದುಷ್ಟನಾದಿಂದ್ರನನ್ನು । ನಿಗ್ರಹಿಸಿ । ಶ್ರೇಷ್ಠನೆಂದೆನಿಪೆನಿನ್ನು ॥ ೮೫ ॥
ದುಷ್ಟನಾಗಿಹೆ ಲೋಕದಿ । ನಿಂದಿಸುವೆ । ಶ್ರೇಷ್ಠ ಶ್ರೀಹರಿಯ ಮದದಿ ॥
ಭ್ರಷ್ಟವಾಗಲಿ ರಾಜ್ಯವು । ಎಂದು ನಾ ।
ಕೊಟ್ಟಿರುವುದುರು ಶಾಪವು ॥ ೮೬ ॥

**ಸಾವೇರಿ – ಆದಿ**

ಮನ್ನಿಪುದಪರಾಧವ । ಇರಿಸುವುದೀಗ । ಚಿಣ್ಣನ ಮೇಲ್ದಯವ ॥
ನಿನ್ನ ಕೈಮೇಲಾಡಿ ಬೆಳೆದೆ । ಎನ್ನನು ನೀನು ।
ಮಣ್ಣಾಗಿಸುವುದಿದು ಸರಿಯೆ ॥ ೮೭ ॥

**ಕೇದಾರಗೌಳ – ಅಷ್ಟ**

ಆಡಿದ ಮಾತಿದು ಪುಸಿಯಾಗದೆಂದಿಗು ।
ಬೇಡಿಕೊ ನರಹರಿಯನ್ನು ॥
ನೀಡುವನುನ್ನತ ಸ್ಥಾನವನಾತನು ।
ಕೂಡಲಿ ಯಶ ನಿನಗಿನ್ನು ॥ ೮೮ ॥

***** **ಶುಭಂ** *****

# ಗಯ ಯಜ್ಞ

ಪ್ರಸಂಗ ವಿಧ :
ಪೌರಾಣಿಕ

ಆಧಾರ ಗ್ರಂಥ :
ಭಾಗವತ

ಭಾಷೆ :
ಕನ್ನಡ

ಕಥಾಸಂಯೋಜನೆ :
ವೇದಮೂರ್ತಿ ಕಮಲಾದೇವಿಪ್ರಸಾದ ಆಸ್ರಣ್ಣ, ಕಟೀಲು

ಹಿಂದಿನ ಪ್ರಕಾಶನ :
ಸದಾನಂದ ಆಸ್ರಣ್ಣ ಪ್ರಕಾಶನ, ಕಟೀಲು

ಒಟ್ಟು ಪದ್ಯಗಳು :
೧೦೨

# ಗಯ ಯಜ್ಞ

## ಪಾತ್ರಗಳು

ಧರ್ಮಮೂರ್ತಿ

ವಿಶ್ವರೂಪೆ

ಧರ್ಮವ್ರತೆ

ಮರೀಚಿ

ಬ್ರಹ್ಮ

ವಿಷ್ಣು

ಗಯಾಸುರ

ಯಮ

ಚಿತ್ರಗುಪ್ತ

ದೇವತೆಗಳು

# ಗಯ ಯಜ್ಞ

## ಕಥಾಸಾರಾಂಶ

ಧರ್ಮ ಮೂರ್ತಿಯ ಮಗಳು ಧರ್ಮವ್ರತೆಯು ತಂದೆಯ ಸೂಚನೆಯಂತೆ ಕಾಡಿಗೆ ಹೋಗಿ ವರನಿಗಾಗಿ ತಪಸ್ಸು

ಮರೀಚಿ ಮುನಿಯ ದರ್ಶನ, ಮದುವೆ

ಗಯಾಸುರನ ತಪಸ್ಸು

ವಿಷ್ಣು ಒಲಿದು ಯಾರನ್ನು ಮುಟ್ಟಿದರೂ ಅವರ ಪಾಪ ಪರಿಹಾರದ ವರದಾನ

ಮರೀಚಿಯು ಧರ್ಮವ್ರತೆಯ ಕಾಲಮೇಲೆ ಮಲಗಿದ್ದ ಸಮಯ ಬ್ರಹ್ಮನ ಆಗಮನ, ಧರ್ಮವ್ರತೆಯ ಉಪಚಾರ

ನಿದ್ರಾಭಂಗವಾಗಿ ಮರೀಚನಿಂದ ಅವಳಿಗೆ ಕಲ್ಲಾಗು ಎಂದು ಶಾಪ

ಧರ್ಮವ್ರತೆಯ ತಪಸ್ಸು, ವಿಷ್ಣು ಒಲಿದು ಸಾಲಿಗ್ರಾಮ ವಾಗೆಂದು ಅನುಗ್ರಹ

ಯಮನ ಓಲಗ, ಪಾಪಿಗಳಿಲ್ಲವೆಂದು ಚಿಂತಿಸಿ ಬ್ರಹ್ಮ, ಅಲ್ಲಿಂದ ವಿಷ್ಣುವಿನಲ್ಲಿಗೆ ದೂರು

ಗಯಾಸುರನ ಮೇಲೆ ಯಜ್ಞ ಮಾಡಲು ಹರಿಯ ಸಲಹೆ

ದೇವೇಂದ್ರನ ಕೋರಿಕೆಯಂತೆ ಯಜ್ಞ ಮಾಡಲು ಗಯನ ಒಪ್ಪಿಗೆ

ದೇಹದ ಅಲುಗಾಟ ಕೆಳಗಿನ ಶಿಲೆಯ ಕಾಟ. ವಿಷ್ಣುವಿಗೆ ಮೊರೆ.

ಗದಾಧರ ರೂಪದಿಂದ ಧರ್ಮವ್ರತೆಯ ಮೇಲೆ ವಿಷ್ಣು ನಿಲ್ಲಲು ಯಜ್ಞ ಮುಂದುವರಿಯುತ್ತದೆ. ಅದೇ ಗಯಾಕ್ಷೇತ್ರ.

# ಗಯ ಯಜ್ಞ

## ಪ್ರಸಂಗ ಸಾಹಿತ್ಯ

**(ಧರ್ಮಾರಣ್ಯದಲ್ಲಿ ಧರ್ಮಮೂರ್ತಿಯೆಂಬ ತಪಸ್ವಿಯ ವಾಸ.
ವಿಶ್ವರೂಪೆ ಅವನ ಸತಿ; ಧರ್ಮವ್ರತೆ ಮಗಳು.)**

### ಧರ್ಮಮೂರ್ತಿಯ ಪ್ರವೇಶ

**ಸೌರಾಷ್ಟ್ರ – ತ್ರಿವುಡೆ**

ಪರಮ ಧಾರ್ಮಿಕ ಧರ್ಮಮೂರ್ತಿಯು ।
ತರುಣಿಮಣಿಯಹ ವಿಶ್ವರೂಪೆಯ ।
ವರಿಸಿ ಸುಖದೊಳಗಿರುತಲೊಂದಿನ । ಕರೆದು ಸತಿಯ ॥ ೧ ॥

**ಕೇದಾರಗೌಳ – ಅಷ್ಟ**

ಪರಿಣಯವೆಂಬುದು ಪರಿಪೂರ್ಣ ಬದುಕಿಗೆ ।
ಹಿರಿದಾದ ಸಾಧನವು ॥
ಪರಿಪರಿ ಗಾರ್ಹಸ್ಥ್ಯ ಕರ್ತವ್ಯವೆಸಗಲು । ತೆರೆದಿಹ ಬಾಗಿಲವು ॥ ೨ ॥
ತರುಣಿಯೋಳ್ ಧರ್ಮ ತಪ್ಪದ ತೆರ ನಡೆವುದು ।
ಕರಣದುಬ್ಬರ ತಡೆದು ॥
ಬೆರೆವುದು ಸಂತಾನ ಭಾಗ್ಯಕ್ಕೆ ಸತಿಯನ್ನು ।
ಹರಿಸಲು ಪಿತೃಋಣವ ॥ ೩ ॥
ಮತಿವಂತೆ ಸತಿ ನಿನ್ನ ಜೊತೆಗೂಡಿ ಪಡೆದಿಹೆ ।
ಸುತೆ ಧರ್ಮವ್ರತೆಯ ನಾನು ॥
ಸುತನಿಲ್ಲವೆಂಬಂಥ ವ್ಯಥೆಯಿಲ್ಲವೆನಗೀಗ ।
ಅತಿಶಯ ಗುಣವಂತೆಯು ॥ ೪ ॥

ಪತಿಯೆ ಲಾಲಿಸು ಸುತೆಯತಿಶಯ ಗುಣಯುತೆ ।
ಮತಿಯುತೆ ರೂಪಾನ್ವಿತೆ ॥
ಪತಿಯುತೆಯಲ್ಲೆಂಬ ವ್ಯಥೆಯೆನ್ನ ಸುಡುತಿದೆ ।
ಗತಿಯೇನು ಪೇಳನಿತೆ ॥ ೫ ॥
ಹರಯದಿ ಶೋಭಿಪ ತರಳೆಗೆ ತಕ್ಕಂಥ ।
ವರನನ್ನು ಶೋಧಿಸಿದೆ ॥
ಧರಣಿಯೊಳೆಲ್ಲಿಯು ಕಾಣೆ ಸ್ವಯಂವರ ।
ಸರಿಯೆಂಬುದರುಹುವೆನು ॥ ೬ ॥

**(ಮಗಳನ್ನು ಕರೆಯುತ್ತಾನೆ. ಧರ್ಮವ್ರತೆಯ ಪ್ರವೇಶ)**

**ಕಾಂಬೋಧಿ – ಝಂಪೆ**

ಮಗಳೆ ಬಾ ಸುಗುಣನಿಧಿ ಧರ್ಮವ್ರತೆ ನಿನ್ನಿದಿರು ।
ಮೊಗವೆತ್ತಿ ನಿಲಲೆಂತು ನಾನು ॥
ಮಗಳ ಮದುವೆಯ ಕಾಂಬ ಸಂಭ್ರಮಕೆ ಕೊನೆಯಾಯ್ತು ।
ಹಗೆಯಾಯ್ತು ಸುಗುಣ ಸಂಪದವು ॥ ೭ ॥
ವನಧಿ ಪರಿಮಿತದವನಿಯಲಿ ಹುಡುಕಿ ಬಳಲಿದೆನು ।
ಅನುಗುಣನ ನಾ ಕಾಣೆನಿನ್ನು ॥
ಅನುಮತಿಯನಿತ್ತಿಹೆನು ಪೋಗು ಶೋಧಿಸು ನಿನ್ನ ।
ಮನಕೊಪ್ಪುವಂಥ ವರನನ್ನು ॥ ೮ ॥

**ಸುರುಟಿ – ಏಕ**

ತಂದೆ ನಿನ್ನ ಮಾತು । ಕೇಳುತ । ನಿಂದೆ ಚೋದ್ಯವಾಂತು ॥
ಇಂದೀವರದಿಂದೊಂದೇ ಹೊಡೆತಕೆ ।
ಮಂದರಗಿರಿಯನು ಛಿಂದಿಸಲಹುದೆ ॥ ೯ ॥
ಮಂದ ಬುದ್ಧಿಗಳಿಗೆ । ಕಾಂಬುದು ।
ಅಂದವೆ ಹಿರಿದಾಗಿ ॥
ಚಂದಕೆ ಮರುಳಾದೊಂದು ಪತಂಗದ ।
ನಿಂದಿತ ಗತಿಯನು ಹೊಂದುವೆ ನಿಶ್ಚಯ ॥ ೧೦ ॥

### ಕಾಂಬೋಧಿ – ಝಂಪೆ

ಹುಡುಕು ವರನನು ನೀನು ತಪವನಾಚರಿಸಿಯಾ ।
ಮೃಡನ ಕರುಣೆಯ ಪಡೆದು ಮಗಳೆ ॥
ಮಡದಿಯಾದಳು ಗಿರಿಜೆ ಹರನ ಮೆಚ್ಚಿಸಿ ತಪದಿ ।
ಪೊಡವಿಯೊಳು ಮಿಗಿಲಿಲ್ಲ ತಪಕೆ ॥ ೧೧ ॥

### ಸಾಂಗತ್ಯ – ರೂಪಕ

ಪಿತ ನಿನ್ನ ಮಾತಿದು ಶ್ರುತಿವಚನದ ಸಾರ ।
ಪ್ರತಿಯಾಡಲುಂಟೇನು ನಾನು ॥
ಅತಿ ಜವದಲಿ ಪೋಗಿ ಶಿತಿಕಂಠನೊಲುಮೆಯಿಂ ।
ಪತಿಪರಮೇಶನ ಪಡೆವೆ ॥ ೧೨ ॥

### ಭಾಮಿನಿ

ತೆರಳು ತಡಮಾಡದಿರು ವನದೊಳ ।
ಗಿರುತ ತಪವನು ಚರಿಸಿ ಪುರಹರ ।
ಕರುಣೆಯಲಿ ಪಡೆ ವರನ ಸುಗುಣಾಕರನ ನೀನೆನಲು ॥
ತರುಣಿ ಮಾತಾಪಿತರಿಗೆರಗುತ ।
ಪರಕೆಯನು ಕೈಗೊಂಡು ವಿಪಿನಕೆ ।
ತೆರಳಿ ಹರನನು ಭಜಿಸುತಿರ್ದಳು ಧ್ಯಾನಪರಳಾಗಿ ॥ ೧೩ ॥

### ಮರೀಚಿಯ ಪ್ರವೇಶ

### ಮಧುಮಾಧವಿ – ತ್ರಿವುಡೆ

ಬ್ರಹ್ಮಮಾನಸಪುತ್ರನಾಗಿಹ । ಬ್ರಹ್ಮತೇಜೋನಿಧಿ ಮರೀಚಿಯು ।
ಬ್ರಹ್ಮಚರ್ಯವ ಮುಗಿಸಿ ಮುಂದಣ ।
ಬ್ರಹ್ಮಕರ್ಮವ ಯೋಚಿಸಿ ॥ ೧೪ ॥
ಪತಿಯನೇ ಪರದೈವವೆನ್ನುವ । ಸತಿಯ ಶೋಧಿಸುತಲೆಯುತಿರುವೆನು।
ಪೃಥಿವಿಯೊಳಗಾನೆಲ್ಲು ಕಾಣೆನು ।
ಗತಿಯು ಮುಂದೇನೆನುತಲಿ ॥ ೧೫ ॥

**ಭಾಮಿನಿ**

ತಪವನೆಸಗಲು ಮನದ ಬಯಕೆಯು ।
ಸಫಲವಪ್ಪುದು ವೇದವಚನವು ।
ತಪಸಿಗುತ್ತಮ ನೆಲೆಯ ಶೋಧಿಪೆನೆನುತ ನಿಶ್ಚಯಿಸಿ ॥
ಉಪವನಾಂತದಿ ಬರುತ ಕಂಡನು ।
ಅಪರಚಂದ್ರಮಭಾಸ ಶೋಭೆಯೊ ।
ಉಪಲ ಮಧ್ಯೆ ವಿರಾಜಿಸುವ ಶಿವಧ್ಯಾನಪರಳನ್ನು ॥ ೧೬ ॥

**ಕಾಪಿ – ಅಷ್ಟ**

ಕೊರೆದಿಟ್ಟ ವಿಗ್ರಹದಂತೆ । ಧ್ಯಾನ ।
ಪರಳಾಗಿ ಕುಳಿತಿರ್ಪಳಿವಳ್ಯಾವ ಕಾಂತೆ ॥
ಅರರೆ ಭಾಸ್ಕರನೊಂದು ತುಣುಕೊ । ಸಿರಿ ।
ಸರಸತಿಯುಮೆಯರ ಚೆಲ್ವಿನೊಂದಣಕೊ ॥ ೧೭ ॥
ಮನಕಾಮನೆಗೆ ರೂಪುಗೊಟ್ಟು । ಈ ।
ವನಿತೆಯ ಸೃಜಿಸಿದ ಪಿತ ದಯವಿಟ್ಟು ॥
ಎನಗನುಕೂಲಳು ಕನ್ನೆ । ಮನ ।
ದನು ತಿಳಿಯಲು ನುಡಿಸುವೆನಿವಳನ್ನೆ ॥ ೧೮ ॥

**ಕೇದಾರಗೌಳ – ಝಂಪೆ**

ಕಮಲ ಕೋಮಲೆಯೆ ಬಾಲೆ । ತಪದ ಪರಿ ।
ಶ್ರಮವಿದೇಕೆಂದು ಪೇಳೆ ॥
ಕಮನೀಯ ನಾಮವನ್ನು । ಪಿತನಾರು ।
ಮಮತೆಯಲಿ ಪೊರೆದಾತನು ॥ ೧೯ ॥

**ಶಂಕರಾಭರಣ – ರೂಪಕ**

ಧರ್ಮಮೂರ್ತಿ ತನುಜೆಯಾನು ।
ಧರ್ಮವ್ರತೆಯು ನಾಮವೆನಗೆ ॥
ಧರ್ಮನಿಷ್ಠ ಪತಿಯ ಪಡೆಯೆ ।
ಧರ್ಮ ಚರಿಪೆನು ॥ ೨೦ ॥

**ಕೇದಾರಗೌಳ – ಝಂಪೆ**

ಪರಮೇಷ್ಠಿಯಣುಗ ನಾನು । ಕನ್ಯೆಯನು । ಅರಸುತ್ತ ಪೊರಟಿರುವೆನು॥
ವರ ಮರೀಚಿಯು ಲೋಕದಿ । ನೀನೊಪ್ಪಿ ।
ದರೆ ಮದುವೆಯಪ್ಪೆ ಮುದದಿ ॥ ೨೧ ॥

**ಶಂಕರಾಭರಣ – ರೂಪಕ**

ಪಿತನು ಧಾರೆಯೆರೆದು ಕೊಡಲು । ಸತಿಯದಪ್ಪೆ ಮುನಿಪ ನಿನಗೆ ।
ಖತಿಯ ತಾಳಬೇಡವೆನ್ನ । ಪಿತನನೊಪ್ಪಿಸು ॥ ೨೨ ॥

**ಕೇದಾರಗೌಳ – ಝಂಪೆ**

ಲೇಸಾಯ್ತು ನಿನ್ನ ಮಾತು । ಧರ್ಮವ್ರತ । ತ್ರಾಸದಲಿ ತೂಗಿ ಬಂತು॥
ಏಸು ಧನ್ಯನೊ ತವಪಿತ । ಎಲ್ಲಿರ್ಪ ।
ಹೇ ಸುದತಿ ತೋರಿಸೆನುತ ॥ ೨೩ ॥

**ಕಂದ**

ಕಾತರದಿಂದಿರಲಾತಂ ।
ತಾತನು ನೆಲಸಿಹ ಸನಿಹದಿ ತೋರಿಪೆನೆನುತಂ ॥
ಜಾತೆಯು ಧರ್ಮಾರಣ್ಯಕೆ ।
ತಾ ತಳುವದೆ ಕರೆತರಲವರನು ಕಂಡಾತಂ ॥ ೨೪ ॥

**ಸಾಂಗತ್ಯ – ರೂಪಕ**

ಘನತಪೋನಿಧಿ ನಿನ್ನಾಗಮನದಿ ಗೃಹವು ಪಾ ।
ವನವಾಯ್ತು ಧನ್ಯನಾಗಿಹೆನು ॥
ಅನುಮಾನವನು ಬಿಟ್ಟು ಬಯಸಿದರ್ಥವ ಪೇಳು ।
ಮನವೊಪ್ಪಿ ಪಾಲಿಪೆನೆನಲು ॥ ೨೫ ॥
ಸತಿಯಿಲ್ಲದಾತನು ಪತಿಯಲ್ಲ ಪತಿತ ತಾ ।
ಪಥಭ್ರಷ್ಟ ವ್ರತಭ್ರಷ್ಟ ನಷ್ಟ ॥
ವ್ಯಥಿಸಿ ಬಂದಿಹೆ ನಿನ್ನ ಸುತೆಯ ಸಾಂಗತ್ಯ ಸ ।
ದ್ಗತಿಗೆ ಸಾಧನ ದ್ವಾರವೆಂದು ॥ ೨೬ ॥

ಪುಣ್ಯಾತ್ಮ ನಿನ್ನಂಥ ಸತ್ಪಾತ್ರ ಲಾಭವು । ಪುಣ್ಯಪ್ರಭಾವದ ಫಲವು ॥
ಧನ್ಯನು ನಾನಾದೆ ವಂಶಪಾವನವಾಯ್ತು ।
ಕನ್ಯಾದಾನವ ಮಾಡಿ ತಣಿವೆ ॥ ೨೭ ॥

**ವಾರ್ಧಕ**

ಸಂತಸದಿ ವೈವಾಹ ವಿಧಿಗಳಂ ಪೂರೈಸಿ ।
ನಂತರದಿ ನಡೆತಂದು ನೆಲಸಿರಲ್ಕಾಶ್ರಮದಿ ।
ಕಂತುಹರಸಮತೇಜ ಮುನಿಮರೀಚಿಯು ತನ್ನ ಸತಿಯ
ಕರೆದಿಂತೆಂದನು॥
ಕಾಂತೆ ಕೇಳ್ಸತಿಗೆ ಪತಿ ಪರದೈವ ಮತ್ತೊಂದ ।
ಚಿಂತಿಸದೆ ಪತಿಯ ಶುಶ್ರೂಷೆಯೊಳು ತೊಡಗಿರ್ಪು ।
ದಂತರಾಯವ ತರದೆ ನೀನೆನಲ್ಕದನೊಪ್ಪಿ ಸತಿಯಿರಲ್ಕತಿ ಹರುಷದಿ
॥ ೨೮ ॥

**ಗಯಾಸುರನ ಪ್ರವೇಶ**

**[ಶ್ವೇತವರಾಹ ಕಲ್ಪದ ಆದಿಯಲ್ಲಿ ಸೃಷ್ಟಿಕರ್ತನಾದ ಬ್ರಹ್ಮ ತಮೋಗುಣೋಪೇತನಾದ ಗಯಾಸುರನ್ನು ಸೃಜಿಸಿದ. ಘನವಾದ ಶರೀರ. ೨೫ ಯೋಜನ ಉದ್ದ, ೬೦ ಯೋಜನ ಅಗಲ.]**

**ಕೇದಾರಗೌಳ – ಅಷ್ಟ**

ಜನಿಸಿ ತಾಮಸಗುಣೋಪೇತ ನಾ ಸೇರಿದೆ । ದನುಜರ ವರ್ಗದಲಿ ॥
ಘನವಾದ ದೇಹವ ಪೊತ್ತಿಹೆ ಲೋಕದೊ ।
ಳನುಪಮ ಕಾರ್ಯವನು ॥ ೨೯ ॥
ಎಸಗಿ ಪ್ರಸಿದ್ಧಿಯ ಸೂರೆಗೊಳ್ಳಲುಬೇಕು । ಶಶಿರವಿಯಿರುವನಕ ॥
ಹಸಿವುನಿದ್ದೆಯ ಬಿಟ್ಟು ತಪವನಾಚರಿಸಿ ಮ ।
ತ್ತಸಮನಾಗುವೆ ಜಗದಿ ॥ ೩೦ ॥
ರುದ್ರಬ್ರಹ್ಮರು ತಮರಜಸಂಭೂತರು ವೈರ । ವಿದ್ದವರಲ್ಲೆಮ್ಮಲ್ಲಿ ॥
ಬದ್ಧವೈರಿಯು ಹರಿ ಸತ್ವಗುಣಾನ್ವಿತ ।
ಹೊದ್ದುವೆನಾತನನು ॥ ೩೧ ॥

ಕಾಮಪಿತನು ದಯದೋರಿದರೆನ್ನಯ ।
ಕಾಮನೆ ಸಿದ್ಧಿಪುದು ॥
ತಾಮಸಗುಣ ಪೋಗಿ ಸತ್ವವು ಹೆಚ್ಚಲು ।
ಸಾಮರ್ಥ್ಯ ವರ್ಧಿಪುದು ॥ ೩೨ ॥

**ಭಾಮಿನಿ**

ಎಂದು ನಿಶ್ಚಯಗೈದು ವನದೆಡೆ ।
ಬಂದು ಹಸುತೃಷೆ ತೊರೆದು ಹರಿಯನ ।
ದೊಂದೆ ಮನದಲಿ ಧ್ಯಾನಿಸುತ್ತಿರೆ ಹೆಚ್ಚಿ ತಪಜ್ವಾಲೆ ॥
ನೊಂದು ಸುರತತಿ ಬೆಂದು ಕಮಲಜ ।
ಗೆಂದೊಡನೆ ಶ್ರೀವರಗೆ ಮೊರೆಯಿಡೆ ।
ಬಂದು ದನುಜನನೆಬ್ಬಿಸುತಲಿಂತೆಂದ ಮಾಧವನು ॥ ೩೩ ॥

**ಭೈರವಿ – ಅಷ್ಟ**

ಏಳು ಗಯಾಸುರನೆ । ಮೆಚ್ಚಿದೆ ನಾನು ।
ಪೇಳು ಮನೋಕಾಮನೆ ॥
ತಾಳಲಾರದೆ ತಾಪ ಗೋಳಿಡುತಿದೆ ಲೋಕ ।
ಶೀಲಗುಣಾನ್ವಿತನೆ ॥ ೩೪ ॥

**ಬೇಗಡೆ – ಅಷ್ಟ**

ಬಾಳು ಸಾರ್ಥಕವಾಯ್ತು ಶ್ರೀಲೋಲ । ಕಂಡಾಗ ಹರಿಯಿತು ।
ಕಾಲಕರ್ಮದ ದೋಷ ದುರ್ಜಾಲ ॥
ವ್ಯಾಳಶಯನನೆ ಸಾಕು ಸಾಕೀ । ಬಾಳ ತಾಮಸಗುಣವಿಶೇಷವ ।
ಕೀಳು ತುಂಬುತ ಸತ್ವಗುಣವನು ।
ಶೀಲ ಪುಣ್ಯಾತ್ಮಕನ ಮಾಡೈ ॥ ೩೫ ॥
ಎನ್ನ ಸ್ಪರ್ಶವ ಗೈದ ಮಾನವರು । ಪಾಪಾತ್ಮರಾದರು ।
ಪುಣ್ಯವಂತರೆ ಆಗಬೇಕವರು ॥
ಅನ್ಯರಿಂಗತಿ ದುರ್ಲಭದ ಗತಿ । ಯನ್ನು ಪಡೆಯುತಲಿರಲಿ ಸ್ವರ್ಗದಿ।
ನಿನ್ನ ಕರುಣೆಗೆ ಪಾತ್ರರಾಗಲಿ । ಯೆನ್ನುವೀ ವರವನ್ನು ನೀಡೈ ॥ ೩೬ ॥

## ಭಾಮಿನಿ

ಅಸುರನಾದೊಡದೇನು ನಿನ್ನಲಿ ।
ಯಸುರತನ ಲವಲೇಶ ಕಾಣೆನು ।
ವಸುಮತಿಯೊಳುತ್ತಮನು ನೀನಹೆ ಕೊಟ್ಟೆ ವರವನ್ನು ॥
ಶಶಿರವಿಗಳಿರುವನಕ ಕೀರ್ತಿಯು ।
ಮಸಳಿಸದು ನಿಶ್ಚಿಂತನಾಗೆನು ।
ತುಸುರಿ ಶ್ರೀಹರಿ ಪೋಗಲಿತ್ತ ಮರೀಚಿ ಮಡದಿಯಲಿ ॥ ೩೭ ॥

## ಕಾಂಬೋಧಿ – ಏಕ

ಸಮಿಧೆಗೆಂದು ಕಾಡ ಸುತ್ತಿ । ಶ್ರಮವು ಹೆಚ್ಚಿದೆ ॥
ಕಮಲಗಂಧಿ ಕಾಲನೊತ್ತು । ಶಮನಗೊಳಿಪಡೆ ॥ ೩೮ ॥
ನೋವಿನೆಣ್ಣೆಯನ್ನು ಹಚ್ಚಿ । ನೀವಿಕೊಡುವೆನು ॥
ಜೀವಿತೇಶ ತಾಳು ಚಣದಿ । ನೋವು ಪೋಪುದು ॥ ೩೯ ॥
ಮುದ್ದು ಮಡದಿ ಕಾಲನೊತ್ತೆ । ಮದ್ದು ಬೇಹುದೆ ॥
ನಿದ್ದೆಗಿಳಿದನೊಡನೆ ಮುನಿಪ । ಸದ್ದ ಮಾಡದೆ ॥ ೪೦ ॥

## ದ್ವಿಪದಿ

ಮಗನು ಮಲಗಿರಲಲ್ಲಿ ತಂದೆಯೆಚ್ಚತ್ತು ।
ಜಗಕೆ ಹಿತವೆಸಗಲ್ಕೆ ಸರಿಯಾದ ಹೊತ್ತು ॥ ೪೧ ॥
ಎಂದೆನುತಲೈತಂದ ಮುನಿಪನಾಶ್ರಮಕೆ ।
ಬಂದ ಮಾವನ ಕಂಡು ಸಂಭ್ರಮದೊಳಾಕೆ ॥ ೪೨ ॥
ಗಂಡನನು ಬಿಟ್ಟೆದ್ದು ಬಂದಳತಿ ಜವದಿ ।
ಪುಂಡರೀಕೋದ್ಭವನಿಗೆರಗಿದಳು ಮುದದಿ ॥ ೪೩ ॥
ಮಾವಯ್ಯ ನೀವು ನಡೆತಂದುದಪರೂಪ
ಸೇವೆಗೈಯುವೆ ನಾನು ಮಲಗಿರುವನೋಪ ॥ ೪೪ ॥
ಉಣುವಾಸೆಯೆನಗಿಹುದು ಸಮಯ ಬಹಳಿಲ್ಲ ।
ವನಿತೆ ಫಲವಿತ್ತರದು ತಿನಿಸು ನಮಗೆಲ್ಲ ॥ ೪೫ ॥
ಹಂಸವಾಹನ ಫಲವನುಂಡು ಸಂತಸದಿ ।
ಹಂಸವನ್ನೇರಿದನು ಸತಿಯಳನು ಹರಸಿ ॥ ೪೬ ॥

## ಸೌರಾಷ್ಟ್ರ – ತ್ರಿವುಡೆ

ಎಚ್ಚರಿತು ಮುನಿ ಸತಿಯ ಕಾಣದೆ ।
ಕಿಚ್ಚಿನಂತುರಿವುತ್ತ ಮನದಲಿ ।
ತುಚ್ಛನಂತೀಗೆನ್ನ ತೊರೆದಳೆ । ದುಶ್ಚರಿತ್ರೆ ॥ ೪೭ ॥
ಪತಿಯ ಸೇವೆಯ ತೊರೆದ ಪಾತಕಿ ।
ಮತಿವಿಹೀನಳೆ ವಂಶಘಾತಕಿ ।
ಸತತ ಶಿಲೆಯಾಗೆಂದು ಶಪಿಸಲು । ಸತಿಯು ನೊಂದು ॥ ೪೮ ॥

## ಕಾಂಬೋಧಿ – ಅಷ್ಟ

ಅಪರಾಧವೆಸಗಿದಳಲ್ಲ । ಎನ್ನನು ನೀನು । ಶಪಿಸುವುದುಚಿತವಲ್ಲ ॥
ಅಪರೂಪಕೈತಂದ ಮಾವನ ಕಂಡಾನು ।
ಉಪಚಾರಗೈದರೆ ತಪ್ಪೇನು ಪೇಳ್ನೀನು ॥ ೪೯ ॥
ಬಳಲಿರ್ಪೆ ನೀನೆನ್ನುತ । ಎಬ್ಬಿಸಲಿಕ್ಕೆ । ಅಳುಕಿರ್ದೆ ಪ್ರಾಣನಾಥ ॥
ಹಳಿ ಬಾರದಂತೆ ಫಲಾಹಾರವಿತ್ತು ನಾ ।
ಕಳುಹಿಕೊಟ್ಟಿರುವುದೇನಪರಾಧವಾಯಿತೆ ॥ ೫೦ ॥
ಅವಿವೇಕವೆಸಗಿದೆನೆ । ಶಾಪವನಿತ್ತು ।
ಸುವಿವೇಕವನು ಮರೆತೆನೆ ॥
ಭವಿಗಳಂತೆಸಗಿದೆ ಬ್ರಹ್ಮಮಾನಸಪುತ್ರ ।
ಹವಣರಿಯದೆ ಭ್ರಾಂತಗೊಂಡಿಹುದೀ ಚಿತ್ತ ॥ ೫೧ ॥

## ವಾರ್ಧಕ

ಕೋಪದೊಳಗಿತ್ತಿಹೆನು ಸತತಶಿಲೆಯಾಗೆಂಬ ।
ಶಾಪವನು ಪ್ರತಿಶಾಪವೆನಗೆ ಗೋಚರವಿಲ್ಲ ।
ಶ್ರೀಪತಿಯ ನೆರೆನಂಬು ತೋರ್ಪ ದಾರಿಯ ಮುಂದೆ ತಪವ ಚರಿಸುವುದೆನ್ನಲು ॥
ಸ್ಥಾಪಿಸುವೆನೀ ತನುವ ಗಾರ್ಹಪತ್ಯಾಗ್ನಿಯಲಿ ।
ಪಾಪನಾಶಕ ಹರಿಯನನವರತ ನೆನೆಯುವೆನು ।
ಕಾಪಿಡುವನವನೆನುತ ವಹ್ನಿಗಿಳಿಯಲು ಮುನಿಪ ವನದೆಡೆಯ ಸಾರುತಿರಲು ॥ ೫೨ ॥

## ನಾದನಾಮಕ್ರಿಯೆ – ಅಷ್ಟ

ತಾಪವು ಹೆಚ್ಚಿತು ದಿವಿಯಲ್ಲಿ । ದೇವ ।
ರೂಪವು ಕುಂದಿತು ಧಗೆಯಲ್ಲಿ ॥
ಆ ಪವನನು ಬಿಸಿಯಾದನು । ಮತ್ತೆ ।
ಆಪದೇವನು ಕುದಿಯಾದನು ॥ ೫೩ ॥

## ವಾರ್ಧಕ

ತರುಣಿಯ ತಪೋಜ್ವಾಲೆಯಿಂದೆದ್ದ ಹೊಗೆಯಿಂದ ।
ಸುರರು ಮುಚ್ಚದ ಕಣ್ಗೆ ಬಟ್ಟೆಯನು ಕಟ್ಟುತ್ತ ।
ಉರಿಗೆಯುರುಳಾಡುತ್ತ ಬೆಮರವಾಸನೆಯಿಂದ ಬಳಲುತ್ತ
ಸುರನಾಥಗೆ ॥
ಅರುಹಲವರಂ ಕೂಡಿ ಕಮಲಜಗೆ ಪೇಳಲ್ಕೆ ।
ಹರಿಯ ಧ್ಯಾನಿಸಲಾಗಿ ಬೆದರದಿರಿ ನೀವೆಂದು ।
ಸಿರಿವರನು ಕಳುಹುತ್ತ ಗರುಡವಾಹನನಾಗಿ ತರುಣಿಯೆಡೆಗೈತಂದನು
॥ ೫೪ ॥

## ನವರೋಜು – ಏಕ

ಮೆಚ್ಚಿದೆ ನಿನ್ನಯ ತಪಕೆ । ಪೇಳ್ ।
ಹೆಚ್ಚಿನದೇನಿದೆ ಬಯಕೆ ॥
ಸಚ್ಚರಿತಳೆ ಜಗಕಚ್ಚರಿಯೆನಿಸುವ ।
ನಿಚ್ಚಟ ತಪವಿದು ತುಚ್ಛರಿಗಸದಳ ॥ ೫೫ ॥

## ಜಂಜೂಟಿ – ಅಷ್ಟ

ಕಂಡೆ ನಿನ್ನಯ ಪಾದಾಂಬುಜವ । ಸೂರೆ ।
ಗೊಂಡೆನು ಸಕಲಸಂಪದವ ॥
ಬೆಂಡಾದೆ ತಪ್ಪಿಲ್ಲದಿತ್ತಿಹ ಶಾಪದಿ ॥
ಹಿಂಡುತಿದೆ ಜೀವವನು ಮುಕ್ತಿಯ ।
ಪುಂಡರೀಕಾಂಬಕನೆ ನೀಡೈ ॥ ೫೬ ॥

**ನವರೋಜು – ಏಕ**

ವಿಪ್ರನ ವಾಕ್ಯವು ತಾನು । ಮುಸಿ ।
ಯಪ್ಪುದೆ ಪೇಳೆನಗಿನ್ನು ॥
ತಪ್ಪದೆ ನೀನನುಭವಿಸುವುದೇ ವಿಧಿ ।
ಯೊಪ್ಪಿಕೊ ನೀನದ ತಪ್ಪಿಸಲಾರೆನು ॥ ೫೭ ॥

**ಜಂಜೂಟಿ – ಅಷ್ಟ**

ಶಿಲೆಯಾಗಿ ನೆಲಸಿದ ಮೇಲೆ । ಎನ ।
ಗುಳಿಯುವುದೆಂಥದು ಬಾಳೆ ॥
ತುಳಿವರು ಕಾಲಿಂದ ಕಳೆವರು ಮಲಬಾಧೆ ॥
ಫಲವಿದಾದರೆ ಧರ್ಮಚರಣೆಗೆ ।
ನೆಲಸುವುದೆ ಸದ್ಧರ್ಮ ಜಗದಲಿ ॥ ೫೮ ॥

**ನವರೋಜು – ಏಕ**

ಪಾವನವಾಗಿಹ ಶಿಲೆಗೆ । ಸಕ ।
ಲಾವನಿ ಬಾಗುವುದಡಿಗೆ ॥
ದೇವರ ವಿಗ್ರಹ ಸಾಲಿಗ್ರಾಮವು ।
ಜೀವಿಗಳಿಂದಾರಾಧ್ಯಗಳಲ್ಲವೆ ॥ ೫೯ ॥

**ಜಂಜೂಟಿ – ಅಷ್ಟ**

ಪಾವನಶಿಲೆಯಾಗಬೇಕು । ಎನ್ನ ।
ಜೀವ ಸಾರ್ಥಕವಾಗಬೇಕು ॥
ದೇವ ಋಷಿಗಳಲ್ಲಿ ತರ್ಪಣ ನೀಡಲು ॥
ಸಾವಿರದ ಫಲ ದೊರಕಿ ಪಿತೃಗಳು ।
ತಾವು ಸೇರಲಿ ದಿವ್ಯ ಲೋಕವ ॥ ೬೦ ॥

### ವಾರ್ಧಕ

ಲಲನೆ ಚಿಂತಿಸಬೇಡ ನೆಲಸುವೆನು ನಾನಿನ್ನ ।
ಶಿಲೆಯ ಬಳಿ ಪದಚಿಹ್ನೆ ಮೂಡಲಿದೆ ಭಾಗದಲಿ ।
ಗಳಿಸುವರು ಜನರಧಿಕ ಪುಣ್ಯಗಳ ಶ್ರಾದ್ಧಾದಿ ಕ್ರಿಯೆಗಳಂ ಗೈದಿಲ್ಲಿಯೆ॥
ಇಳೆಯೊಳಗಿನತ್ಯಧಿಕ ಪುಣ್ಯಕ್ಷೇತ್ರವಿದೆನಿಸಿ ।
ಕಲಿಮಲವ ಕಳೆಯುತ್ತಲಿರು ನೀನು ಕಲ್ಪಾಂತ ।
ದಲಿ ಮುಕ್ತಳಾಗುತಿಹೆಯೆಂದು ಹರಿ ಪೋಗುತಿರೆ ಇತ್ತಲಾ
ಯಮಲೋಕದಿ ॥ ೬೧ ॥

### ಯಮನ ಪ್ರವೇಶ

### ಮಧ್ಯಮಾವತಿ – ತ್ರಿವುಡೆ

ಓಲಗವ ಸೇರುತ್ತಲಾ ದಿನ ।
ಕಾಲಪುರುಷನು ವೀಕ್ಷಿಸಿ ॥
ಕಾಲಗತಿಯನು ಸೇರ್ದ ಜನಗಳ ।
ಸಾಲ ಕಾಣದೆ ಯೋಚಿಸಿ ॥ ಪೇಳ್ದನಾಗ ॥ ೬೨ ॥
ಚಿತ್ರಗುಪ್ತನೆ ಪೇಳು ಪೇಳ್ಕೈ ।
ಸತ್ತು ಹೋದವರಿಲ್ಲವೆ ॥
ಸುತ್ತ ನೋಡಿದರೊಬ್ಬರಿಲ್ಲವು ।
ಮೃತ್ಯು ಮುಟ್ಟದೆ ಮರ್ತ್ಯರ ॥ ಚಿತ್ರವಾಯ್ತು ॥ ೬೩ ॥

### ಸೌರಾಷ್ಟ್ರ – ಅಷ್ಟ

ಪಾಪಿಗಳೊಬ್ಬರು ಬರಲಿಲ್ಲವಿಲ್ಲಿಗೆ ।ಯಮರಾಯ ॥ ಮತ್ತೆ ।
ಪೋಪರದೆಲ್ಲಿಗೆ ಯಮಲೋಕವನು ಬಿಟ್ಟು ॥ ಚಿತ್ರಗುಪ್ತ ॥ ೬೪ ॥
ನಾಕಲೋಕವ ಸೇರಿ ಸುಖದೊಳಗಿರ್ಪರು ॥
ಯಮರಾಯ ॥ ನೀವ ।
ದೇಕೆ ಬಿಟ್ಟಿರಿಯವರ ಎಳತರಬೇಕಿಲ್ಲಿ ॥ ಚಿತ್ರಗುಪ್ತ ॥ ೬೫ ॥
ಹರಿದೂತರೆಮ್ಮನು ಬಡಿಯುವರಲ್ಲಯ್ಯ ॥ ಯಮರಾಯ ॥ ಶ್ರೀ ।
ವರದೂತರೆಮ್ಮನು ತಡೆಯುವುದೇಕಯ್ಯ ॥ ಚಿತ್ರಗುಪ್ತ ॥ ೬೬ ॥

ಗಯನಿಗಿತ್ತಿಹವರ ಪಾಲಿಸಬೇಕಂತೆ ॥ ಯಮರಾಯ ॥ ವ್ಯಾಳ ।
ಶಯನನಿತ್ತಿಹ ವರವೇನೆಂದು ಪೇಳಯ್ಯ ॥ ಚಿತ್ರಗುಪ್ತ ॥ ೬೭ ॥
ಅಸುರನ ಮುಟ್ಟಲು ಭಸಿತವಪ್ಪುದು ಪಾಪ ॥ ಯಮರಾಯ ॥ ಅವ॥
ರೆಸೆವ ಸ್ವರ್ಗವ ಸೇರಿ ಸುಖಿಸುವರಂತಯ್ಯ
॥ಯಮರಾಯ ॥ಅವ॥ ೬೮॥
ಕೆಲಸ ಹೋಯಿತು ನಮಗಿನ್ನು ಮಾಡುವುದೇನು
॥ ಚಿತ್ರಗುಪ್ತ ॥ ಪೋಗಿ ।
ನಳಿನಸಂಭವನಲ್ಲಿ ದೂರಿಕೊಳ್ಳುವೆ ನಾನು ॥ ಚಿತ್ರಗುಪ್ತ ॥ ೬೯ ॥

## ಪಂತುವರಾಳಿ – ರೂಪಕ

ಕಮಲಪೀಠನೆಡೆಯ ಸೇರುತ । ಕೈ ಮುಗಿದು ನಿಂತು ।
ಯಮನು ಶೋಕಭರಿತನಾಗುತ ॥
ನಿಮಗದೇನು ಮುನಿಸೊ ತಿಳಿಯೆ ।
ಕ್ರಮವಿಲೋಪಗೈದುದರಿಯೆ ।
ಸಮತೆಯಿಂದ ಕಾರ್ಯವೆಸಗಿ ।
ವಿಮಲಧರ್ಮವೆತ್ತಿ ಹಿಡಿದೆ ॥ ೭೦ ॥
ಇದ್ದಕಿದ್ದ ಹಾಗೆ ಎನ್ನನು । ಉದ್ಯೋಗದಿಂದ ।
ಲೊದ್ದು ಕಳುಹಲೇಕೆ ಪೇಳಿನ್ನು ॥
ತಿದ್ದಲಾರದಂಥ ತಪ್ಪ । ಬುದ್ಧಿ ತಿಳಿದು ಗೈಯಲಿಲ್ಲ ।
ಶುದ್ಧಹಸ್ತನೆಂದು ಜಗ ಪ್ರ ।
ಸಿದ್ಧನಾಗಿರಲ್ಕೆ ಹೀಗೆ ॥ ೭೧ ॥

## ಶಂಕರಾಭರಣ – ಏಕ

ತರಣಿಜಾತ ನೀನು ಮನದಿ । ಮರುಗುತಿರುವುದೇಕೊ ತಿಳಿಯೆ ।
ಅರುಹು ನೇರವಾಗಿ ಬಂದ । ಕೊರತೆಯೆಲ್ಲವ ॥ ೭೨ ॥
ಗಯನ ಸ್ಪರ್ಶ ಗೈದು ಜನರು । ಭಯವಿದೂರರಾಗಿ ಸುರಾ ।
ಲಯವ ಸೇರಿ ಸುಖದೊಳಿಹರು । ಕ್ಷಯವು ನರಕಕೆ ॥ ೭೩ ॥
ದುಗುಡವೇಕೆ ಜಗದ ಜನರು । ಅಘವಿನಾಶಗೈದು ಬಳಿಕ ।
ಸೊಗದ ಸುಖವ ಸವಿದರೆಮಗೆ । ಹಗೆಯದೇತಕೆ ॥ ೭೪ ॥

ಕರ್ಮಕುಚಿತ ಫಲವಿದೆಂಬ । ಧರ್ಮನಿಯಮ ತಪ್ಪಲಾಗ ।
ಧರ್ಮ ವಿಜೃಂಭಿಸುವುದೆಂಬ । ಮರ್ಮವೆನ್ನದು ॥ ೭೫ ॥
ಕರ್ಮಕಿಹುದು ಕ್ಷಯವು ಪ್ರತಿ । ಕರ್ಮದಿಂದ ಜಗದ ನಿಯಮ ।
ಕರ್ಮಪಾತಕಿವನ ಸ್ಪರ್ಶ । ಕರ್ಮವಪ್ಪುದು ॥ ೭೬ ॥

**ಸಾಂಗತ್ಯ – ರೂಪಕ**

ಹಸಿದವಗನ್ನವು ತೃಷಿತಗೆ ಜಲದಂತೆ ಹಸನಾದ ಪ್ರತಿಕರ್ಮದಿಂದ ॥
ನಶಿಸುವುದೈ ಕರ್ಮ ತಾರತಮ್ಯದ ನೆಲ ।
ಕುಸಿಯುವುದಲ್ಲದೆಯಿರಲು ॥ ೭೭ ॥
ವರವನಿತ್ತಿಹ ಹರಿಯರಿತಿಹನಿದನೆಲ್ಲ ।
ಬರಿದೆ ಚಿಂತಿಪುದೇಕೆ ನಾವು ॥
ಅರುಹಲಿಕಾತಗೆ ಪರಿಹರಿಸುವನೆಲ್ಲ ।
ಚರಿಸುವುದವನಿಚ್ಛೆಯಂತೆ ॥ ೭೮ ॥

**ಭಾಮಿನಿ**

ತರಣಿಜನ ಜೊತೆಗೂಡಿ ಬ್ರಹ್ಮನು ।
ಶರಧಿತಡಿಯಲಿ ನಿಂದು ಲಕ್ಷ್ಮೀ ।
ವರನ ನುತಿಸುತಲಿರಲು ಕಮಲಾಂಬಕನು ಮೈದೋರಿ ॥
ತೆರಳಿ ಬಂದಿಹುದೇತಕಿಲ್ಲಿಗೆ ।
ಕೊರತೆಯೇನದನರುಹಿ ನಮಗೆನೆ ।
ಸರಸಿಜಾಸನ ಯಮರು ನುಡಿದರು ಶಿರವ ತಗ್ಗಿಸುತ ॥ ೭೯ ॥

**ತೋಡಿ – ಆದಿ**

ಶ್ರೀಲೋಲ ಬಿನ್ನಹ ಮಾಡುವೆವಿಂದು ।
ಪಾಲಿಸು ನಮ್ಮನು ಹೇ ದಯಾಸಿಂಧು ॥ ಪ ॥
ವರವಿತ್ತೆ ಗಯನಿಗೆ ಕಡುದಯದಿಂದ ।
ವರವಾಯ್ತು ದುರ್ಜನಲೋಕಕಾನಂದ ॥
ಸುರಲೋಕದೊಳು ಸುಖಿಸುವರವರೆಲ್ಲ ।
ಬರಿದಾಯ್ತು ನಾರಕಿಗಳ ಲೋಕ ಸುಳ್ಳಲ್ಲ ॥ ೮೦ ॥

ಕುಗ್ಗಿದೆ ಸತ್ಕರ್ಮನಿರತರುತ್ಸಾಹ ।
ಹಿಗ್ಗಿದೆ ದುಷ್ಕರ್ಮ ಚೋದಕದಾಹ ॥
ಬಗ್ಗದೆ ದಂಡದ ಭೀತಿಗೆ ಜನರು ।
ನುಗ್ಗುವರುರು ಪಾಪಕರ್ಮಕೆಲ್ಲವರು ॥ ೮೧ ॥
ದಂಡನೆಯಿಂದಲಿ ಶುದ್ಧತೆ ಪಡೆದು ।
ಮಂಡಿತನಾಗಲು ಸ್ವರ್ಗದಿ ಸಾಧು ॥
ಖಂಡನೆಗೊಂಡಿದೆ ಶ್ರುತಿವಾಕ್ಯವಿಂದು ।
ಭಂಡರೆ ನಾಕದಿ ತುಂಬಿಹರಿಂದು ॥ ೮೨ ॥

**ಕಲ್ಯಾಣಿ – ಅಷ್ಟ**

ಅಂಬುಜಾಸನನೆಂದ ಮಾತ । ಕೇಳು ।
ತ್ತಂಬುಜನಾಭನು ನಗುತ ॥
ಸಂಭಾರಗಳನಣಿಗೊಳಿಸಿ ಯಜ್ಞವ ಮಾಡು ।
ಜಂಭಾರಿವೈರಿಯ ಯಜ್ಞಭೂಮಿಯ ಮಾಡಿ ॥ ೮೩ ॥
ಕೇಳಿದರಾತನ ನೀನು । ಪ್ರೀತಿ ।
ದಾಳಿ ಕೊಡುವ ದೇಹವನ್ನು ॥
ಮೇಳವಿಸಿದ ಸತ್ವಗುಣದ ಪ್ರಭಾವದಿ ।
ಬಾಳುವನಾತನು ಸ್ವಾರ್ಥವ ಹಿಂದಿಕ್ಕಿ ॥ ೮೪ ॥

**ವಾರ್ಧಕ**

ಎಂದ ನುಡಿಗೊಡಬಟ್ಟು ಕಮಲಜನು ಪೊಡಮಟ್ಟು ।
ಮುಂದೆ ಮಾಡುವ ಕಾರ್ಯದಂದವನು ಚಿಂತಿಸುತ ।
ಬಂದು ಗಯನೆದುರು ನಿಲೆ ಕಂಡಾತನಭಿನಮಿಸಿ ನುಡಿದನತಿ
ವಿನಯದಿಂದ ॥
ತಂದೆ ನೀನ್ಯೆತಂದೆ ಬಿಂದುವಿನ ಬಳಿಗೆಂದೆ ।
ಸಿಂಧುವೈತಂದಂತೆ ಮೌನ ತಬ್ಬಿದೆ ಮಾತ ।
ನಿಂದೆನಗೆ ಕಾರ್ಯವನು ಬೆಸಸೆಂದು ಬಾಗಿರಲು
ಕಮಲಭವನಿಂತೆಂದನು ॥ ೮೫ ॥

## ಭೈರವಿ – ಝಂಪೆ

ಯಾಗವೊಂದನು ಮಾಡಲೆಳಸಿ ಪಾವನದ ಭೂ ।
ಭಾಗವನ್ನರಸಿದೆನು ಸಿಗಲಿಲ್ಲವೆನಗೆ ॥
ಯಾಗಭೂಮಿಗೆ ತಕ್ಕ ದೇಹ ನಿನ್ನದು ಮಾತ್ರ ।
ಹೇಗೆ ಕೇಳಲಿ ನಾನು ಯೋಚನೆಯ ಬಿಟ್ಟೆ ॥ ೮೬ ॥

## ಭೈರವಿ – ಏಕ

ಎನಲಾ ಮಾತನು ಕೇಳಿ । ಗಯ । ಘನತರ ಹರುಷವ ತಾಳಿ ॥
ಅನುಮಾನಿಸುವುದಿದೇಕೆ । ಈ । ತನು ನಿನಗರ್ಪಿತ ಸಾಕೆ ॥ ೮೭ ॥
ಜೀವನ ಸಾರ್ಥಕವಾಯ್ತು । ಅತಿ । ಪಾವನವಾಯಿತು ಕುಲವು ॥
ದೇವ ಯಜನಯೋಗ್ಯ । ತನು । ನೀವೆನಗಿತ್ತಿಹ ಭಾಗ್ಯ ॥ ೮೮ ॥

## ಭಾಮಿನಿ

ತಾಮಸಿಕಗುಣಮಯದ ಸೃಷ್ಟಿಯ ।
ಕಾಮಜನಕನ ದಯದಿ ತುಂಬಿದೆ ।
ಸಾಮರಸ್ಯದ ಸತ್ವಗುಣವನು ತಮವನುರೆ ಮೆಟ್ಟಿ ॥
ಈ ಮಹಾತನು ಯಜ್ಞಕಾರ್ಯಕೆ ।
ಭೂಮಿಯಾಗಲಿ ದೊರೆಯಲೆನಗೀ ।
ಸೋಮ ಸೂರ್ಯಸ್ಥಿತಿಯ ಪರ್ಯಂತದ ಸುಕೀರ್ತಿಗಳು ॥ ೮೯ ॥

## ದ್ವಿಪದಿ

ಗರುವ ನೀನಹುದೆಂದು ಬ್ರಹ್ಮ ತಲೆದೂಗಿ ।
ಕರೆಸಿದನು ದೇವತೆಗಳನು ಯಜ್ಞಕಾಗಿ ॥ ೯೦ ॥
ಮಲಗಿಸಿದರಂಗಾತವಾಗಿ ದಾನವನ ।
ತಲೆಯ ಕೋಲಾಹಲದ ಪರ್ವಕಿಡುತವನ ॥ ೯೧ ॥
ಉತ್ತರಕೆ ತಲೆಯಿರಲು ದಕ್ಷಿಣಕೆ ಕಾಲು ।
ಬಿತ್ತರದ ಶಿಲೆಯಿಟ್ಟು ಸಮಗೊಳಿಸುತವರು ॥ ೯೨ ॥
ಯಜ್ಞವೇದಿಕೆಯನ್ನು ಸಿದ್ಧಗೊಳಿಸಿದರು ।
ಪ್ರಾಜ್ಞರಹ ಮುನಿಗಳನ್ನಾಮಂತ್ರಿಸಿದರು ॥ ೯೩ ॥

ಕಲ್ಲಮೇಲೋಡಾಡೆ ದೇವತೆಗಳೆಲ್ಲ ।
ಮೆಲ್ಲನಲುಗಾಡಿದನು ಕೆಳಗಿರ್ಪ ಮಲ್ಲ ॥ ೯೪ ॥

**ದೇಶಿ – ಅಷ್ಟ**

ಹೋಯಿತು । ಚೆಲ್ಲಿ । ಹೋಯಿತು ॥ ಪ ॥
ಯಾಗಕ್ಕೆ ತಂದಿಟ್ಟ ಸಾಮಗ್ರಿಯೆಲ್ಲ ।
ಈಗಲುಗಾಡಲು ಚೆಲ್ಲಿ ಹೋಯ್ತಲ್ಲ ॥
ಹೀಗಾದ ಮೇಲಿನ್ನು ಮಾಡುವುದೇನು ।
ಸಾಗದು ಕಾರ್ಯವು ಮುಂದೆಮಗಿನ್ನು ॥ ೯೫ ॥
ಕಲ್ಲೊಂದನಿರಿಸಿ ಶಿರಸ್ಸಿನ ಮೇಲೆ ।
ನಿಲ್ಲದೆ ಕುಲುಕಾಟ ಕಾಲಿನ ಮೇಲೆ ।
ನಿಲ್ಲಿರಿ ನೀವೆಂದು ಪೇಳಲಿಕಾಗ ।
ಎಲ್ಲರು ನಿಂತರು ಕಾಲನೇರ್ದಾಗ ॥ ೯೬ ॥
ಏನಮಾಡಿದರೇನು ಫಲವಿಲ್ಲವಲ್ಲ ।
ದಾನವನಲುಗಾಟ ನಿಲ್ಲುವುದಿಲ್ಲ ॥
ದಾನವಾರಿಯೆ ಗತಿ ಮುಂದೆಮಗೆಲ್ಲ ।
ಧ್ಯಾನಿಸಿರಾತನನೆಂದವರೆಲ್ಲ ॥ ೯೭ ॥

**ವಾರ್ಧಕ**

ಹರಿ ನೀನೆ ಗತಿಯೆಂದು ಬ್ರಹ್ಮಾದಿ ಸುರರೆಲ್ಲ ।
ಕರಗಳಂ ಜೋಡಿಸುತ ಧ್ಯಾನಪರರಾಗಿರಲು ।
ಶರಣಜನ ಸುರಧೇನು ಮೈದೋರಿ ಬೆದರದಿರಿ ನೀವೆಂದು ಸಂತೈಸುತ ॥
ಧರೆಯೊಳಗೆ ಪಾಷಾಣ ರೂಪದಿಂದಿರುತಿರುವ ।
ತರುಣಿ ಧರ್ಮವ್ರತೆಯ ಶಿರದ ಮೇಲಿಡುತಂದು ।
ವರ ಗದಾಧರ ರೂಪದಿಂ ತಾನು ಹಾಸುಗಲ್ಲನ್ನೇರಿ ನಿಂತಿರಲ್ಕೆ ॥ ೯೮ ॥

## ಸಾಂಗತ್ಯ – ರೂಪಕ

ಗಯನು ಸಂತೋಷದೊಳಲುಗಾಟ ನಿಲ್ಲಿಸಿ ।
ಜಯ ನಮೋ ಹರಿಯೆಂದು ನುತಿಸೆ ॥
ಪ್ರಿಯಭಕ್ತ ನೀನಹೆ ಪೇಳು ಮನದೊಳಿರ್ಪ ।
ಬಯಕೆಯದೇನೆಂದ ಹರಿಯು ॥ ೯೯ ॥
ಇದು ಪುಣ್ಯಕ್ಷೇತ್ರವೆಂದಾಗಲೆನ್ನಯ ಪೆಸ ।
ರದರೊಂದಿಗಿರಲಿ ನೀನಿಲ್ಲಿ ॥
ಪದವಿಟ್ಟ ಶಿಲೆ ವಿಷ್ಣುಪಾದವೆಂದಾಗಲಿ ।
ಸದಮಲರಿಲ್ಲಿಗೆ ಬಂದು ॥ ೧೦೦ ॥
ಶ್ರದ್ಧೆಯಿಂದಲಿ ಗೈದ ಶ್ರಾದ್ಧಾದಿ ಕ್ರಿಯೆಗಳಿಂ ।
ಶುದ್ಧತೆ ಪೊಂದಿ ಪಿತೃಗಳು ॥
ಸದ್ಧರ್ಮರತರ ಸದ್ಗತಿಯನ್ನು ಪಡೆಯಲಿ ।
ಸಿದ್ಧಿಕ್ಷೇತ್ರವಿದಾಗಲೆಂಬೆ ॥ ೧೦೧ ॥

## ವಾರ್ಧಕ

ಎಂದ ನುಡಿಯಂ ಕೇಳಿ ಮಂದಹಾಸವ ಬೀರಿ ।
ಮಂದರೋದ್ಧರ ನುಡಿದನಿಂದು ನೀನೆಂದಂತೆ ।
ಮುಂದೆಲ್ಲ ನಡೆಯುವುದು ಕುಂದುಕೊರತೆಗಳಿಲ್ಲವೆಂದು
ಭರವಸವೀಯಲು॥
ವೃಂದಾರಕರ ವೃಂದ ಜಯಘೋಷ ಮೊಳಗಿಸಲು ।
ಬಂಧುರದ ಸಂಗೀತ ನಾಟ್ಯಾದಿ ಸಂಭ್ರಮದಿ ।
ಮುಂದೆಸಗೆ ವೇದೋಕ್ತ ವಿಧಿಯಂತೆ ಯಜ್ಞವದು
ಗಯಯಜ್ಞವೆಂದೆನಿಸಿತು ॥ ೧೦೨ ॥

***** **ಶುಭಂ** *****

# ರಾಮಧಾನ್ಯ ಚರಿತ್ರೆ

ಪ್ರಸಂಗ ವಿಧ :
ಪೌರಾಣಿಕ

ಆಧಾರ ಗ್ರಂಥ :
ಕನಕದಾಸರ ರಾಮಧಾನ್ಯ ಚರಿತೆ

ಭಾಷೆ :
ಕನ್ನಡ

ಒಟ್ಟು ಪದ್ಯಗಳು :
೮೫

# ರಾಮಧಾನ್ಯ ಚರಿತ್ರೆ

## ಪಾತ್ರಗಳು

**ರಾಮ**

**ಸೀತೆ**

**ಗೌತಮ**

**ಹನುಮಂತ**

**ನರೆದಲಗ**

**ವ್ರೀಹಿಗ**

**ಇಂದ್ರ**

**ನಾರದ**

**ಋಷಿಗಳು**

**ದೇವತೆಗಳು**

# ರಾಮಧಾನ್ಯ ಚರಿತ್ರೆ

## ಕಥಾಸಾರಾಂಶ

ಕನಕದಾಸರ ರಾಮಧಾನ್ಯ ಚರಿತೆ ಒಂದು ಅಪೂರ್ವ ಕೃತಿ. ಧಾನ್ಯಗಳನ್ನು ಪಾತ್ರವಾಗಿಸಿರುವುದು ಇಲ್ಲಿನ ವಿಶೇಷ. ಅಕ್ಕಿ ಮತ್ತು ರಾಗಿಗಳ ನಡುವಣ ವಿವಾದ ಮತ್ತು ಪರಿಹಾರಗಳೇ ಇಲ್ಲಿನ ಕೇಂದ್ರವಸ್ತು. ಅದು ಕೇವಲ ಧಾನ್ಯಗಳ ನಡುವಣ ಕಲಹವಲ್ಲ. ಸಾಮಾಜಿಕ ಅಶಾಂತಿಯ ಮೂಲದ ಶೋಧ ಮತು ಚಿಕಿತ್ಸೆಯನ್ನು ಸೂಚಿಸುವ ಕಾವ್ಯ. ವರ್ಗಸಂಘರ್ಷದ ಚಿತ್ರಣದೊಂದಿಗೆ ಸಾಮರಸ್ಯದ ಸಾಧ್ಯತೆಯ ಶೋಧವೂ ಇದೆ. ಇಂಥ ಮಹತ್ವದ ಕೃತಿಯನ್ನು ಯಕ್ಷಗಾನರೂಪಕ್ಕಿಳಿಸುವ ಪ್ರಯತ್ನ ಇಲ್ಲಿ ನಡೆದಿದೆ.

**ಕಥಾಸಾರ**

ಶ್ರೀರಾಮನು ರಾವಣನೇ ಮುಂತಾದ ರಾಕ್ಷಸರನ್ನು ಕೊಂದು ಸೀತೆ ಯನ್ನು ಕರೆದುಕೊಂಡು ಅಯೋಧ್ಯೆಗೆ ಮರಳುತ್ತಿರುವಾಗ ಸುಂದರವಾದ ವನಪ್ರದೇಶ ವೊಂದು ಕಾಣುತ್ತದೆ. ಅದನ್ನು ಸೀತೆಗೆ ತೋರಿದಾಗ ಅವಳು ಒಂದು ದಿನ ಅಲ್ಲಿಯೇ ಇದ್ದು ವನದ ಸೌಂದರ್ಯವನ್ನು ವೀಕ್ಷಿಸಿ ಮುಂದೆ ಪಯಣಿಸುವ ಬಯಕೆಯನ್ನು ವ್ಯಕ್ತಪಡಿಸುತ್ತಾಳೆ. ರಾಮನು ಅದಕ್ಕೊಪ್ಪಿ ವಾನರ, ರಾಕ್ಷಸರ ಪರಿವಾರದೊಂದಿಗೆ ಅಲ್ಲಿ ಬಿಡದಿಯನ್ನೇರ್ಪಡಿಸುತ್ತಾನೆ. ರಾಮ ಮತ್ತು ಅವನ ಪರಿವಾರವು ವನಪ್ರದೇಶಕ್ಕೆ ಬಂದ ಸುದ್ದಿ ಹರಡುತ್ತಿದ್ದಂತೆ, ಅವನಿಗೂ ಅವನ ಪರಿವಾರಕ್ಕೂ ಆತಿಥ್ಯವನ್ನು ನೀಡಲು ಮುನಿಗಳು ಗೌತಮನ ನೇತೃತ್ವದಲ್ಲಿ ಭಕ್ಷ್ಯ ಭೋಜ್ಯಗಳನ್ನು ಸಿದ್ಧಪಡಿಸಿಕೊಂಡು ಬಂದು ಆತಿಥ್ಯವನ್ನು ಸ್ವೀಕರಿಸುವಂತೆ ರಾಮನನ್ನು ಕೇಳಿಕೊಂಡಾಗ ಅವನು ಅದಕ್ಕೊಪ್ಪುತ್ತಾನೆ. ಅವನೂ ಅವನ ಪರಿವಾರದವರೂ ಉಂಡು ತೃಪ್ತರಾಗುತ್ತಾರೆ.

ಭೋಜನಾನಂತರದಲ್ಲಿ ರಾಮನು ಹನುಮಂತನನ್ನು ಕರೆದು ಭಕ್ಷ್ಯಗಳ ಸವಿಯ ಕುರಿತು ಪ್ರಶ್ನಿಸುತ್ತಾನೆ. ಎಲ್ಲವೂ ಸವಿಯಾಗಿರುವುದೆಂದು ಹೇಳಿದಾಗ ಅವುಗಳಲ್ಲಿ ಯಾವ ಧಾನ್ಯವು ಶ್ರೇಷ್ಠವೆಂದು ತಿಳಿಯುವ ಅಪೇಕ್ಷೆಯಾಗುತ್ತದೆ. ಎಲ್ಲ ಧಾನ್ಯಗಳನ್ನು ತರಿಸಿ ಯಾವುದು ಶ್ರೇಷ್ಠವೆಂದು ಕೇಳಿದಾಗ ಒಬ್ಬೊಬ್ಬರು

ಒಂದೊಂದು ಧಾನ್ಯವು ಶ್ರೇಷ್ಠವೆನ್ನುತ್ತಾರೆ.

ಆಗ ರಾಮನು ಗೌತಮರನ್ನು ತೀರ್ಮಾನವನ್ನು ಹೇಳುವಂತೆ ಕೇಳಿದಾಗ ಅವರು ನರೆದಲಗ (ರಾಗಿ) ವೇ ಶ್ರೇಷ್ಠವೆಂದು ಹೇಳುತ್ತಾರೆ. ಅದನ್ನು ಕೇಳಿ ವ್ರೀಹಿಗನಿಗೆ (ಅಕ್ಕಿ) ಸಿಟ್ಟು ಬರುತ್ತದೆ. ಅವನು ಗೌತಮನು ಪಕ್ಷಪಾತಿಯೆಂದು ದೂರಿ ನರೆದಲಗನನ್ನು ಹೀಯಾಳಿಸುತ್ತಾನೆ. ಅದರಿಂದ ಕೆರಳಿದ ನರೆದಲಗನು ವ್ರೀಹಿಗನ ದೌರ್ಬಲ್ಯ ಹಾಗೂ ತನ್ನ ಶ್ರೇಷ್ಠತೆಗಳನ್ನು ಹೇಳಿಕೊಳ್ಳುತ್ತಾನೆ. ಅವರ ಆರೋಪ ಪ್ರತ್ಯಾರೋಪಗಳು ತೀವ್ರವಾಗಿ ಕೇಳುವವರು ಗೊಂದಲಗೊಳ್ಳುತ್ತಾರೆ.

ರಾಮನು ಕೂಡ ಇದರ ತೀರ್ಮಾನವು ಸದ್ಯಕ್ಕೆ ಆಗದೆಂದೂ ಅಯೋಧ್ಯೆಗೆ ಮರಳಿದ ಮೇಲೆ ದೇವತೆಗಳನ್ನು ಕರೆಸಿಕೊಂಡು ತೀರ್ಮಾನಿಸುವುದು ಉಚಿತ ವೆಂದೂ ಹೇಳಿ ನರೆದಲಗ ಹಾಗು ವ್ರೀಹಿಗರನ್ನು ಆರು ತಿಂಗಳುಗಳವರೆಗೆ ಸೆರೆಯಲ್ಲಿಡುವಂತೆ ಹೇಳಿ ಅಲ್ಲಿಂದ ಹೊರಡುತ್ತಾನೆ.

ಅಯೋಧ್ಯೆಗೆ ಬಂದು ಪಟ್ಟಾಭಿಷಿಕ್ತನಾಗಿ ಆರು ತಿಂಗಳು ಕಳೆದ ಮೇಲೆ ಸೆರೆಯಲ್ಲಿರುವ ಧಾನ್ಯಗಳ ಸಮೇತ ಆಸ್ಥಾನಕ್ಕೆ ಬರುವಂತೆ ಗೌತಮರಿಗೆ ಹನುಮನ ಮೂಲಕ ಸಂದೇಶವನ್ನು ಕಳುಹಿಸುತ್ತಾನೆ. ಅದರಂತೆ ಗೌತಮನು ಮುನಿವೃಂದದೊಡನೆ ಬರುತ್ತಾನೆ. ರಾಮನು ಅವರನ್ನು ಸ್ವಾಗತಿಸಿ ಶಿವ, ಇಂದ್ರ ಮುಂತಾದ ದೇವತೆಗಳನ್ನು ಪ್ರಾರ್ಥಿಸಿಕೊಂಡಾಗ ಅವರೆಲ್ಲರೂ ಬರುತ್ತಾರೆ. ಅವರಲ್ಲಿ ಈ ಪ್ರಶ್ನೆಯನ್ನು ಇಡಲಾಗಿ ಇಂದ್ರನು 'ನರೆದಲಗನೇ ಶ್ರೇಷ್ಠ' ಎಂದು ಹೇಳುತ್ತಾನೆ. ದೇವರ್ಷಿ ನಾರದನೇ ಮುಂತಾದವರು ಅದನ್ನು ಸಮರ್ಥಿಸುತ್ತಾರೆ.

ಆಗ ರಾಮನು ನರೆದಲಗನನ್ನು ಪ್ರೀತಿಯಿಂದ ಕರೆದು ಕರದಲ್ಲಿರಿಸಿಕೊಂಡು 'ಇನ್ನು ಮೇಲೆ ನನ್ನ ರಾಘವನೆಂಬ ಹೆಸರು ನಿನಗಾಗಲಿ' ಎನ್ನುತ್ತಾನೆ. ಅದು ಸಂಕ್ಷಿಪ್ತವಾಗಿ 'ರಾಗಿ'ಯೆಂದು ಪ್ರಸಿದ್ಧವಾಗುತ್ತದೆ.

ಇದರಿಂದ ನೊಂದ ವ್ರೀಹಿಗನನ್ನು ಕರೆದು ನರೆದಲಗನು ಬರಗಾಲದಲ್ಲಿ ಜನರನ್ನು ಕಾಪಾಡುವವನಾದುದರಿಂದ ಶ್ರೇಷ್ಠನಾದನೆಂದು ವಿವರಿಸಿ ದೇವತೆಗಳಿಗೆ ಪ್ರಿಯನಾದ ನೀನು ಪಾವನನೆಂದು ಸಂತೈಸಿ, ಇಬ್ಬರೂ ಪಾವನರಾಗಿರೆಂದು ವರವನ್ನು ಕೊಟ್ಟು ಸಮಾಧಾನಿಸುತ್ತಾನೆ. ಒಬ್ಬರು ಮತ್ತೊಬ್ಬರ ಗುಣವನ್ನು ಗೌರವಿಸುತ್ತ ಬದುಕಬೇಕೆಂದು ಉಪದೇಶಿಸುತ್ತಾನೆ. ಅಲ್ಲಿ ಸೇರಿದ ಸಮಸ್ತರೂ ಅದನ್ನು ಅನುಮೋದಿಸುತ್ತಾರೆ

ಈ ಪ್ರಸಂಗರಚನೆಯಲ್ಲಿ ಕನಕದಾಸರ ಕೃತಿಯ ಪದ್ಯ ಹಾಗೂ ಭಾವಗಳನ್ನು ಧಾರಾಳವಾಗಿ ಬಳಸಿಕೊಳ್ಳಲಾಗಿದೆ. ಹಾಗಾಗಿ ಇದರಲ್ಲಿ ಭಾಗವಹಿಸುವ ಕಲಾವಿದರಿಗೆ ಮೂಲಕಾವ್ಯದ ಪರಿಚಯವಿರುವುದು ಅಪೇಕ್ಷಣೀಯವಾಗಿದೆ.

# ರಾಮಧಾನ್ಯ ಚರಿತ್ರೆ

## ಪ್ರಸಂಗ ಸಾಹಿತ್ಯ

**ವಾರ್ಧಕ**

ಶ್ರೀರಾಮನಾಹವದಿ ರಾವಣಾದ್ಯರ ಕೊಂದು ।
ಕಾರುಣ್ಯನಿಧಿ ವಿಭೀಷಣಗಿತ್ತು ಪಟ್ಟವಂ ।
ನಾರಿ ಜಾನಕಿಗೂಡಿ ಸೌಮಿತ್ರಿ ಸಹಿತಲಾ ವಾನರಾನೀಕದೊಡನೆ ॥
ಏರಿ ಪುಷ್ಪಕವನ್ನು ಪುರಕಾಗಿ ಗಮಿಸುತಿರೆ ।
ಚಾರುತರ ಸೌಂದರ್ಯದಿಂದ ನಂದನವನವ ।
ಮೀರಿಸಿತೊ ತಾನೆಂಬ ಚೆಲ್ವಾದ ವನವೊಂದ ಕಂಡು ಸಂತಸಗೊಳ್ಳುತ
॥ ೧ ॥

**ಕಾಂಬೋಧಿ – ಝಂಪೆ**

ನೋಡಿದೆಯ ವೈದೇಹಿ ಕಾಡಿನಲಿ ಚಲುವು ಮನೆ ।
ಮಾಡಿಕೊಂಡಿರುವ ಬಗೆಗಳನು ॥
ನಾಡ ಸೇರಿದ ಮೇಲೆ ಬೇಡಿದರು ಸಿಗದಿಂಥ ।
ಗಾಡಿಕೆಯ ತುಂಬಿಕೊಳ್ಳೆನುತ ॥ ೨ ॥

**ಶಂಕರಾಭರಣ – ರೂಪಕ**

ನಲ್ಲ ನೋಡು ಫುಲ್ಲಕುಸುಮ । ಚಲ್ಲುವರಿದಿದೆ ।
ಅಲ್ಲಿ ನೋಡು ಹುಲ್ಲೆ ಮರಿಯು । ನಿಲ್ಲದೋಡಿದೆ ॥
ಎಲ್ಲ ಜಗದ ಚಲುವು ಬಂದು । ಇಲ್ಲಿ ನೆಲಸಿದೆ
ನಿಲ್ಲಬೇಕೆಂಬಾಸೆ ಮನದಿ ಪಲ್ಲವಿಸುತಿದೆ ॥ ೩ ॥

**ಭಾಮಿನಿ**

ಕಾಂತೆಯೆಂದುದ ಕೇಳುತಾ ಭೂ । ಕಾಂತನೊಳ್ಳಿತು ನಿಲುತಲೊಂದಿನ।
ಮುಂತೆ ಪಯಣವಗೈವುದೆನುತಲಿ ಮನದಿ ನಿಶ್ಚಯಿಸಿ ॥
ನಿಂತಿರಲು ಬಿಡದಿಯನು ರಚಿಸಿ ವ ।
ನಾಂತದಲಿ ನೆಲಸಿರಲು ಋಷಿಗಳು ।
ಸಂತಸದೊಳೈತಂದು ಕಂಡರು ರಾಘವೇಶ್ವರನ ॥ ೪ ॥

**ಕಾಂಬೋಧಿ – ಅಷ್ಟ**

ಮುನಿವರರನು ಕಾಣುತ । ರಘುನಾಥನು ।
ಮನದಿ ಹರ್ಷವ ತಾಳುತ ॥
ಘನತಪೋಧನರ ದರ್ಶನದಿಂದ ಪಾವನ ।
ಜನುಮವಿದಾಯ್ತೆನ್ನುತೆರಗಲು ಮುನಿಗಳು ॥ ೫ ॥
ಅತಿಥಿಯು ನೀನೆಮಗೆ । ದಾನವರುಪ
ಹತಿಯೆಲ್ಲ ಕೊನೆಗೊಂಡಿದೆ ॥
ಮತಿಯುತ ನಿನಗೊಂದಾತಿಥ್ಯವ ನೀಡಲಿ ।
ಕತಿಜವದಿಂದ ನಾವೈತಂದೆವಿಲ್ಲಿಗೆ ॥ ೬ ॥
ವಿಧ ವಿಧ ಭಕ್ಷ್ಯಗಳ । ತಂದಿಹೆವಿಲ್ಲಿ ।
ಮಧುರಮನದಿ ನೀವೆಲ್ಲ ॥
ಒದಗಿ ಸೇವಿಸೆ ತೃಪ್ತಿಯಹುದೆಮಗೆನ್ನಲು ।
ಮುದದಿಂದಲೊಪ್ಪುತ ಪರಿವಾರದೊಡಗೂಡಿ ॥ ೭ ॥

**ಕೇದಾರಗೌಳ – ಝಂಪೆ**

ಉಂಡು ಸಂತಸದಾಳುತ । ಮಾರುತಿಯ ।
ಕಂಡು ಶ್ರೀರಾಮ ನಗುತ ॥
ಉಂಡಿರುವ ಧಾನ್ಯಗಳಲಿ । ರುಚಿಯಧಿಕ ।
ಕಂಡುದೇತರ ಬಳಿಯಲಿ ॥ ೮ ॥
ಸವಿಯಾಯಿತೆಲ್ಲ ಭಕ್ಷ್ಯ । ಹಸಿವೆಯನು ।
ತವಿಸುವಾಗೊಂದೆ ಲಕ್ಷ್ಯ ॥
ಸುವಿವೇಕದಿಂದೀಕ್ಷಿಸಿ । ತಿಳಿಯುವುದು ।
ಭುವನೇಶ ಬಲು ಯೋಚಿಸಿ ॥ ೯ ॥

ಮುನಿಪಾಲ ಕೇಳು ಮಾತು । ಧಾನ್ಯಗಳ ।
ತನುವ ಕಾಂಬಾಸೆಯಾಯ್ತು ॥
ಘನಬೇಗ ತರಿಸೆನ್ನಲು । ಮುನಿವಟುಗ ।
ಳನುನಯದಿ ತಂದಿರಿಸಲು ॥ ೧೦ ॥

### ಭಾಮಿನಿ

ನರೆದಲಗನಿದು ನೆಲ್ಲು ಹಾರಕ ।
ಬರಗು ಜೋಳವು ಕಂಬು ಸಾವೆಯು ।
ಉರುತರದ ನವಣೆಯಿದು ನವಧಾನ್ಯಗಳ ನೋಡೆನಲು ॥
ಮೆರೆವ ರಾಸಿಯ ಕಂಡು ಇದರೊಳು ।
ಪರಮಸಾರದ ಹೃದಯನಾರೆಂ ।
ದರುಹಬೇಕೆನೆ ಥರಥರದಿ ಪೇಳಲ್ಕೆ ಮುನಿವೃಂದ ॥ ೧೧ ॥

### ಕೇದಾರಗೌಳ – ಅಷ್ಟ

ಹಲಬರು ಹಲಬಗೆಯಿಂದ ಪೇಳ್ವುದ ಕೇಳಿ ।
ಗಲಿಬಿಲಿಗೊಂಡು ರಾಮ ॥
ಹಲವು ಮಾತೇಕೊಂದ ಪೇಳು ಗೌತಮ ಮುನಿ ।
ತಿಳಿದೀಗ ನಿಶ್ಚಯದಿ ॥ ೧೨ ॥
ದಾಶರಥಿಯೆ ಕೇಳು ರಾಶಿಧಾನ್ಯಗಳೇಕೆ ।
ವಾಸಿಯು ನರೆದಲಗ ॥
ದೇಶವಾಸಿಗಳೆಲ್ಲರಾಶಿಪರಾತನ । ಪೋಷಿಸುವನು ಸರ್ವರ ॥ ೧೩ ॥

### ಸೌರಾಷ್ಟ್ರ – ತ್ರಿವುಡೆ

ಲೇಸನಾಡಿದೆ ಮುನಿಪ ಗೌತಮ । ದೋಷರಹಿತನು ಪಕ್ಷಪಾತವ ।
ನೀಸು ಪರಿಯಲಿ ಮಾಡುವರೆ ಶಿವ । ಮೋಸವಾಯ್ತು ॥ ೧೪ ॥
ನೆಲ್ಲು ನಾನಿರೆ ಗೋಧಿ ಮೊದಲಾ । ದೆಲ್ಲ ಧಾನ್ಯಗಳಿರಲುಯಿದರಲಿ ।
ಬಲ್ಲಿದನು ನರೆದಲಗನೆಂಬುದೆ । ಖುಲ್ಲನೀತ ॥ ೧೫ ॥
ಏನೆಲವೊ ನರೆದಲಗ ನೀನು ಸ । ಮಾನನೇ ಎನಗಿಲ್ಲಿ ನಮ್ಮನು ।
ದಾನವಾಂತಕ ಬಲ್ಲನಿಬ್ಬರ । ಸ್ಥಾನ ಮಾನ ॥ ೧೬ ॥

**ಮಾರವಿ – ಏಕ**

ಬಿಡು ಬಿಡು ಬಡಿವಾರದ ನುಡಿ ವ್ರೀಹಿಗ ।
ಬಡವರ ಕಡೆಗಣಿಸಿ ॥
ನಡೆದೆ ಧನಾಢ್ಯರ ಬೆಂಬತ್ತಿಯೆ ನೀ ।
ಪಡೆದೆ ಪ್ರತಿಷ್ಠೆಯನು ॥ ೧೭ ॥
ಅಕ್ಷತೆಯಿಲ್ಲದ ಮಂಗಲಕಾರ್ಯವ ।
ನೀಕ್ಷಿಸಿದವರುಂಟೆ ॥
ರಕ್ಷಿಪ ಮಂತ್ರಾಕ್ಷತೆ ನಾ ಲೋಕದಿ ।
ಭಕ್ಷ್ಯವು ದೇವರಿಗೆ ॥ ೧೮ ॥
ಹೆಣಗಳ ಬಾಯೊಳಗಿಡುವರು ನಿನ್ನನು ।
ತಣಿಪರು ಕಾಗೆಗಳ ॥
ದಿನದಿನ ಪಿಂಡಪ್ರದಾನದಿ ಪ್ರೇತಗ ।
ಳುಣುವರು ನಿನ್ನನ್ನು ॥ ೧೯ ॥
ಶಾಲಿಯನುಂಬರು ಮೇಲಾಗಿಹ ಜನ ।
ಮೇಲೋಗರದೊಡನೆ ॥
ಕೂಲಿಗಳುಂಬರು ಖಾರದ ಸಾರಿನ ।
ಲೋಲಾಡಿಸಿ ನಿನ್ನ ॥ ೨೦ ॥
ದುಡಿಯುವ ಜನಗಳ ಬೆವರೇ ನಿನ್ನಯ ।
ಒಡಲೊಳಗಿನ ಸಾರ ॥
ಬಡವರು ಬಲ್ಲಿದರೆನಗೆ ಸಮಾನರು ।
ದುಡಿವರಿಗಾಧಾರ ॥ ೨೧ ॥
ಕರಿಯನೆ ನಿನ್ನನು ಸುರಿಯುವ ಜನಗಳು ।
ಕರಡಿಗಳಂತಹರು ॥
ಮಿರಿ ಮಿರಿ ಮಿಂಚುವರೆನ್ನ ಪ್ರಭಾವದಿ ।
ಸಿರಿತನ ದೊರಕುವುದು ॥ ೨೨ ॥
ಮುದ್ದೆಯನುಂಬವನೆದ್ದರೆ ನಿನ್ನಯ ।
ಸದ್ದಡಗುವುದೈಸೆ ॥
ಇದ್ದರೆ ಸುಮ್ಮನೆ ಗದ್ದಲ ಮಾಡುವೆ ।
ಗೆದ್ದವ ತಾನೆನುತ ॥ ೨೩ ॥

**ಕಂದ**

ಹೆಚ್ಚುತ್ತಿರಲವರೊಳಗಂ ।
ಮಚ್ಚರದಗ್ನಿಯು ಕಿಡಿಗಳ ಸೂಸುತ್ತಿರಲಾ ॥
ಗಿಚ್ಚಿಸಿ ಕಲಹಕೆ ಕೊನೆಯಂ ।
ಸಚ್ಚರಿತನೆ ನೋಡೆನುತುಸುರಿದ ಗೌತಮನುಂ ॥ ೨೪ ॥

**ತುಜಾವಂತು – ರೂಪಕ**

ಕಂತುಜನಕ ನೀನು ಲಾಲಿಸು । ಈ ಕಲಹಕೆ ಕೊನೆ ।
ಯೆಂತು ಪಥವನೊಂದ ಸೂಚಿಸು ॥
ಇಂತು ಕಾದುತಿರುವರಿವರ । ನಂತ ಕಾಲದಿಂದ ಜಗದಿ ।
ಅಂತಗೊಳಿಪ ಸಮಯವೀಗ ।
ಬಂತೆನುತ್ತ ತಿಳಿವೆ ನಾನು ॥ ೨೫ ॥
ಅರಿಯದಾದೆನಿವರೊಳಂತರ । ತೀರ್ಮಾನಕಾಗಿ ।
ಕರೆಸಿಕೊಳುವೆ ಹರಸುರಾದ್ಯರ ॥
ಇರಲಿಯಾರು ತಿಂಗಳಿವರು । ಸೆರೆಯೊಳಕ್ಕೆ ಬಳಿಕ ನಾನು ।
ಪುರಕೆ ಬರಿಸಿಕೊಂಬೆ ಕಿರಿದು ।
ಹಿರಿದು ಭೇದವರಿಯಲೆಂದು ॥ ೨೬ ।

**ಕಂದ**

ಎಂದಾ ಮುನಿವರಗೊರೆಯುತ ।
ಲಿಂದೀವರಾಕ್ಷ ಜವದೊಳೇರ್ದು ಪುಷ್ಪಕಮಂ ॥
ಹಿಂದಾಗಿಸಿ ವನಬುವಿಯಂ ।
ಬಂದನಯೋಧ್ಯಾ ಪುರವರಕಂ ಸಂತಸದಿಂ ॥ ೨೭ ॥

**ವಾರ್ಧಕ**

ಭರತನಾತನ ಕಂಡು ಹರುಷದಿಂದಿರ್ಗೊಂಡು ।
ಚರಣಕಾನತನಾಗಿ ಧರಣಿಯನು ಪಾಲಿಸೆನೆ ।
ಗುರುಮತದಿ ಸುಮುಹೂರ್ತದಲಿ ಪಟ್ಟವೇರ್ದನಾ ಶ್ರೀರಾಮ ವೈಭವದಲಿ॥

ಧರೆಯ ಪರಿಪಾಲನೆಯ ಧರ್ಮದಿಂದೆಸಗುತ್ತ ।
ಲಿರಲಾರು ಮಾಸಗಳು ಕಳೆಯಲ್ಕೆ ನೆನೆದನಾ ।
ನರೆದಲಗ ವ್ರೀಹಿಯರ ಕಲಹಕಂತ್ಯವ ಪಾಡೆ ಮಾರುತಿಯ
ಕರೆದೆಂದನು ॥ ೨೮ ॥

**ಭೈರವಿ – ಝಂಪೆ**

ಬಾರಿತ್ತ ಹನುಮಂತ ಸಾರ ಸದ್ಗುಣವಂತ ।
ಸಾರು ಗೌತಮ ಮುನಿಪನಿದ್ದೆಡೆಗೆ ಬೇಗ ॥
ಕಾರದೊಳಗಿರುವಂಥ ಧಾನ್ಯಗಳ ಜೊತೆಗೂಡಿ ।
ಸ್ವಾರಿಯೈತಹುದೆಂದು ವಿನಯದಲಿ ಪೇಳು ॥ ೨೯ ॥
ಮನುಜಪತಿ ನಿನ್ನಾಜ್ಞೆಯೆನಗೆ ವೇದದ ವಾಕ್ಯ ।
ಮುನಿಪನಿದ್ದೆಡೆಗೈದು ಬರುವೆನತಿಜವದಿ ॥
ಎನುತ ಮಾರುತಿ ಹಾರಿ ವನದೇಶದೆಡೆ ಸಾರಿ ।
ಜನಪನೆಂದುದ ಪೇಳಲೈತಂದರವರು ॥ ೩೦ ॥

**ಕಲ್ಯಾಣಿ – ಅಷ್ಟ**

ಬಂದಿರೆ ಮುನಿವರರೆಲ್ಲ । ನೀವೈ ।
ತಂದುದು ತೋಷವಾಯ್ತಲ್ಲ ॥
ತಂದಿರೆ ಪ್ರತಿವಾದಿಗಳು ಬಲು ತೊಂದರೆ ।
ಯೆಂದರೆ ನೊಂದರೆ ನಿಂದಿರಿ ಚಣದಲಿ ॥ ೩೧ ॥
ಕರೆಸುವೆ ಪರಮೇಶನನ್ನು । ಮತ್ತೆ । ಬರಿಸುವೆ ಸುರವೃಂದವನ್ನು ॥
ಸುರಮುನಿ ನಾರದ ಕಪಿಲ ಮುಖ್ಯರನೆಲ್ಲ ।
ಸರಿಸದಿ ತೀರ್ಮಾನವಾಗಲೆನ್ನುತ ರಾಮ ॥ ೩೨ ॥

**ಕಂದ**

ಧ್ಯಾನಿಸಲೇಕೋಭಾವದೊ ।
ಞಾನತರಕ್ಷಕ ಹರ ಸುರಪತಿ ಸುಮನಸರುಂ ॥
ಬಾನಿಂದಿಳಿಯಲು ಕಾಣುತ ।
ಮಾನವಪತಿಯಾದರದೊಳಗುಪಚರಿಸುತ್ತಂ ॥ ೩೩ ॥

### ಸಾಂಗತ್ಯ – ರೂಪಕ

ವಂದಿಸಿ ಸುರ ಮುನಿ ವೃಂದಕೆ ಪೇಳುವೆ ।
ಚಂದದಿಂದವಧರಿಸುವುದು ॥
ಬಂದುದು ಕಲಹವಿಂದೀ ಧಾನ್ಯಗಳ ಮಧ್ಯೆ ।
ಹೊಂದಿದ ಶ್ರೇಷ್ಠತೆಗಾಗಿ ॥ ೩೪ ॥
ಗುಣಯುತರಾರೆಂಬುದನು ತಿಳಿಯದೆ ಮುನಿ ।
ಜನ ನೃಪಜನರೆಲ್ಲ ತೊಳಲಿ ॥
ವಿನುತ ಸರ್ವಜ್ಞರ ವಿನಯದಿ ಕರೆದೆವು ।
ಅನುವರಿತಿದನು ನೀವರುಹಿ ॥ ೩೫ ॥

### ಸುರುಟಿ – ಏಕ

ಗುಣಯುತರಾರೆಂದು । ತಿಳಿಯದ । ಜನರ ತೆರದೊಳಿಂದು ॥
ವನಜಾಕ್ಷನೆ ನಿನಗನುಮಾನವೊ ದಿಟ ।
ವನು ಪೇಳಲಿಕೆಂದೆನಗವಕಾಶವೊ ॥ ೩೬ ॥
ಮಾನ್ಯನು ನರೆದಲಗ । ಸತ್ವದಿ । ಧಾನ್ಯಗಳಲಿ ಸಲಗ ॥
ಗಣ್ಯರೆ ಸಾರದೊಳನ್ಯರು ಈತಗೆ ।
ಮನ್ನಿಪುದೀತನ ಸನ್ನುತಿಪಾತ್ರನ ॥ ೩೭ ॥

### ಮಧುಮಾಧವಿ – ತ್ರಿವುಡೆ

ಅಹುದು ಸುರಪನ ಮಾತು ನಿಶ್ಚಯ ।
ಮಹಿಯೊಳೀ ನರೆದಲಗನಿಗೆ ಸಮ ।
ನಹರ ಕಾಣೆನು ಸೆರೆಯೊಳಿಕ್ಕಲು ।
ಸಹಿಸಿಕೊಂಡಿಹ ಧೀರನು ॥ ೩೮ ॥
ಕುಂದದೀತನ ಕಾಂತಿ ನೋಡಲಿ ।
ಕೆಂದಿನಂತಿಹ ವ್ರೀಹಿ ಕಂದಿಹ । ಮಂದಸತ್ವತೆ ಸಿದ್ಧವಾಯ್ತಿದ ।
ರಿಂದ ಸಂಶಯ ಬೇಡವು ॥ ೩೯ ॥
ಎಲ್ಲ ನವಧಾನ್ಯಗಳಲೀತನೆ ।
ಬಲ್ಲಿದನು ಪುಸಿಯಲ್ಲ ಬಡವರ । ಬಲ್ಲಿದರನಾರೈದು ಸಲಹುವ ।
ನಿಲ್ಲವಿವಗೆ ಸಮಾನರು ॥ ೪೦ ॥

ನೆಲ್ಲಿನಲಿ ಗುಣವಿಲ್ಲ ಭಾಗ್ಯದಿ ।
ಬಲ್ಲಿದರ ಪತಿಕರಿಸುವನು ಅವ ।
ನಲ್ಲಿ ಸಾರವ ಕಾಣೆ ತಾನೆಂ ।
ದಲ್ಲಿ ನಾರದ ಪೇಳಿದ ॥ ೪೧ ॥

**ವಾರ್ಧಕ**

ಸುರಪ ಸುರಮುನಿಗಳಾಡಿದ ಮಾತ ಕಪಿಲಾದಿ ।
ವರಮುನಿಗಳಹುದೆನಲು ಸಭಿಕರನುಮೋದಿಸಲು ।
ಧರಣಿಪನು ನಗುತಂದು ನರೆದಲಗ ಬಾರೆಂದು ಕರೆತಂದು
ಕರಪೀಠದಿ ॥
ಇರಿಸಿಕೊಂಡಾತನನು ಕರೆದು ಕೊಟ್ಟನು ತನ್ನ ।
ಹಿರಿದಾದ ನಾಮವನು ಧರೆಗೆ ರಾಘವನೆಂದು ।
ಕಿರಿದಾಗಿ ರಾಗಿಯಾಗಿರಲಿತ್ತ ನಾಚಿರ್ದ ವ್ರೀಹಿಯಂ ಕಾಣುತಾಗ
॥ ೪೨ ॥

**ಜಂಜೂಟಿ – ಅಷ್ಟ**

ಮರುಗುವ ವ್ರೀಹಿಯ ಕಂಡು । ರಘು ।
ವರನೆಂದ ಕೊರಗದಿರಿಂದು ॥
ಧರೆಗೊದಗಿದ ಬರಗಾಲದೊಳೀತನು ।
ಹೊರೆವ ಲೋಕವನೆಂದು ನಾವ್ಪತಿ ।
ಕರಿಸಿದೆವು ಇವನನ್ನು ನೋಡೈ ॥ ೪೩ ॥
ದೇವರ ಪರಮಾನ್ನ ನೀನು । ಮನು ।
ಜಾವಳಿಗಿವನು ಪಕ್ವಾನ್ನ ॥
ಪಾವನರಹಿರಿ ನೀವೀರ್ವರು ಲೋಕದಿ ।
ನಾವು ಕೊಟ್ಟೆವು ವರವ ಮುಂದಕೆ ।
ನೀವು ಬಾಳ್ವುದು ಹಿತದೊಳೆನ್ನುತ ॥ ೪೪ ॥

**ವಾರ್ಧಕ**

ಕರುಣನಿಧಿಯಿಂತೆನಲು ಹರಸುರಾದಿಗಳು ಮುನಿ ।
ವರರು ವಾನರರು ದಾನವರು ಧಾರಿಣೀಪತಿ ।
ಯರುಗಳಾರಾಮನಾಡಿದ ಮಾತಿಗಸ್ತೆನುತ ಜಯಘೋಷ
ಮೊಳಗಿಸಲ್ಕೆ ॥
ಧರಣಿಗಿಳಿತಂದ ದಿವಿಜರನೆಲ್ಲ ಮನ್ನಿಸುತ ।
ಮರಳಿ ಕಳುಹಿಸಿ ಬಳಿಕ ಮುನಿವರರನಾದರಿಸಿ ।
ಧರಣಿಪರ ಸಂತೈಸಿ ಭುವನವನು ಪಾಲಿಸುತಲಿರ್ದನಾ
ರಘುನಾಥನು ॥ ೪೫ ॥

***** **ಶುಭಂ** *****

# ಖಾಂಡವ ದಹನ

ಪ್ರಸಂಗ ವಿಧ :
ಪೌರಾಣಿಕ

ಆಧಾರ ಗ್ರಂಥ :
ಮಹಾಭಾರತ

ಭಾಷೆ :
ಕನ್ನಡ

ದೃಶ್ಯಸಂಯೋಜನೆ:
ಕೆರೆಮನೆ ಶಿವಾನಂದ ಹೆಗಡೆ

ಒಟ್ಟು ಪದ್ಯಗಳು :
೮೩

# ಖಾಂಡವ ದಹನ

## ಪಾತ್ರಗಳು

ಇಂದ್ರ

ಅಗ್ನಿ

ನಾರದ

ಕೃಷ್ಣ

ಅರ್ಜುನ

ಬ್ರಾಹ್ಮಣರೂಪಿ ಅಗ್ನಿ

ತಕ್ಷಕನ ಪತ್ನಿ

ಅಶ್ವಸೇನ

ವನದೂತರು

# ಖಾಂಡವ ದಹನ

## ಕಥಾ ಸಾರಾಂಶ

**ಇಂದ್ರನ ಓಲಗ:** ಇಂದ್ರನು ಓಲಗದಲ್ಲಿರುವಾಗ ಅಗ್ನಿಯು ಬಂದು ಶ್ವೇತಕಿಯ ಯಾಗದಲ್ಲಿ ಸತತವಾಗಿ ಹವಿಯನ್ನುಂಡ ಕಾರಣದಿಂದ ಅಜೀರ್ಣ ವಾಗಿ ಅದರಿಂದ ತೇಜಸ್ಸು ಕುಂದಿದೆ. ಬ್ರಹ್ಮನಲ್ಲಿ ಹೋಗಿ ಪರಿಹಾರವನ್ನು ಕೇಳಿದರೆ ಖಾಂಡವ ವನವನ್ನು ಭಕ್ಷಿಸಿದರೆ ರೋಗವು ಗುಣವಾಗುವುದೆಂದು ಹೇಳಿದ್ದಾನೆ. ಅದಕ್ಕೆ ಅನುಮತಿಯನ್ನು ನೀಡಬೇಕೆನ್ನುವನು. ಇಂದ್ರನು ಅಲ್ಲಿ ತಕ್ಷಕನು ವಾಸಿಸುತ್ತಿದ್ದಾನೆ, ಅವನು ಗರುಡನ ಭಯದಿಂದ ಅಭಯವನ್ನು ಬೇಡಿದಾಗ ಮಾತುಕೊಟ್ಟಿದ್ದೇನೆ, ವಚನಬದ್ಧನಾಗಿರುವುದರಿಂದ ವನದಹನಕ್ಕೆ ಅನುಮತಿಯನ್ನು ಕೊಡಲಾರೆನೆನ್ನುತ್ತಾನೆ. ಅವರಿಬ್ಬರಲ್ಲಿ ವಾಗ್ವಾದ ನಡೆದು ಅಗ್ನಿಯು ವನದಹನವನ್ನು ಮಾಡದೆ ಬಿಡುವುದಿಲ್ಲ ವೆಂದರೆ ಇಂದ್ರ ಅದನ್ನು ರಕ್ಷಿಸಲು ಬದ್ಧನೆನ್ನುತ್ತಾನೆ. ಅಗ್ನಿಯು ವನದಹನಕ್ಕೆ ಪ್ರಯತ್ನಿಸಿ ಸೋಲುತ್ತಾನೆ.

**ನಾರದನ ಸಲಹೆ:** ಅಗ್ನಿಯು ಸೋತಮುಖದಿಂದ ಬರುವಾಗ ನಾರದ ಅವನನ್ನು ಮಾತಾಡಿಸಿ ವಿಷಯವನ್ನು ತಿಳಿದು ಕೃಷ್ಣಾರ್ಜುನರ ನೆರವನ್ನು ಪಡೆಯುವ ಸಲಹೆ ಕೊಡುತ್ತಾನೆ. ಅಗ್ನಿಯು ಸಂಶಯಪಟ್ಟಾಗ ಅವರೇ ನರ ನಾರಾಯಣರೆಂದು ಪರಿಚಯಿಸುತ್ತಾನೆ. ಮುಂದೆ ಅವರನ್ನು ಒಲಿಸಿಕೊಳ್ಳುವ ಉಪಾಯವನ್ನೂ ಹೇಳುತ್ತಾನೆ.

**ಕೃಷ್ಣಾರ್ಜುನರ ಪ್ರವೇಶ:** ಕೃಷ್ಣಾರ್ಜುನರು ವನವಿಹಾರಕ್ಕೆ ಹೊರಟಿದ್ದಾರೆ. ಖಾಂಡವವನದ ಸಮೀಪ ಬಂದಾಗ ಅಲ್ಲಿನ ಪರಿಸರದ ಭಯಾನಕತೆಯ ಅರಿವಾಗುತ್ತದೆ. ಸರ್ಪಭೂಯಿಷ್ಠಪ್ರದೇಶ. ಇಂದ್ರಪ್ರಸ್ಥದ ಬಳಿಯಲ್ಲಿದೆ. ಅಪಾಯಕಾರಿಯಾದ ಪ್ರದೇಶ. ಪ್ರಜೆಗಳ ರಕ್ಷಣೆಯ ಚಿಂತೆ ಆವರಿಸುತ್ತದೆ. ಕೃಷ್ಣನಿಗೆ ಬಾಯಾರಿಕೆಯಾಗಿ ನೀರನ್ನು ಕುಡಿದು ಬರಲು ಹೋಗುತ್ತಾನೆ.

ಅರ್ಜುನ ಒಬ್ಬನೇ ಇರುವಾಗ ಬ್ರಾಹ್ಮಣನೊಬ್ಬ ಆಗಮಿಸುತ್ತಾನೆ. ತನ್ನ ಹಸಿವೆಯನ್ನು ನೀಗಿಸಲು ಕೇಳುತ್ತಾನೆ. ಅರ್ಜುನ ಒಪ್ಪುತ್ತಾನೆ. ಬ್ರಾಹ್ಮಣ ಭಾಷೆಯನ್ನು ಕೊಡುವಂತೆ ಕೇಳಿದಾಗ ಅರ್ಜುನ ಪ್ರತಿಜ್ಞೆಯನ್ನು ಮಾಡುತ್ತಾನೆ. ಅಷ್ಟು ಹೊತ್ತಿಗೆ ಕೃಷ್ಣ ಬಂದು ಅರ್ಜುನನಿಗೆ ನೀನು ಮೋಸಹೋದೆ, ಇವನಾರೆಂಬುದನ್ನರಿಯದೆ ಭಾಷೆ ಕೊಟ್ಟೆಯೆನ್ನುತ್ತಾನೆ. ಆಗ ಅಗ್ನಿಯು ಪ್ರಕಟ ವಾಗಿ ತನ್ನ ಬೇಡಿಕೆಯನ್ನು ವಿವರಿಸಿದಾಗ ಕೃಷ್ಣ ತಮ್ಮ ಬಳಿ ಸರಿಯಾದ ಸಲಕರಣೆ ಗಳಿಲ್ಲದಿರುವುದನ್ನು ಹೇಳುತ್ತಾನೆ. ಅಗ್ನಿಯು ರಥ, ಗಾಂಡೀವ, ಅಕ್ಷಯತೂಣೀರ, ಸುದರ್ಶನಚಕ್ರಗಳನ್ನು ಅನುಗ್ರಹಿಸುತ್ತಾನೆ. ವನದಹನ ಪ್ರಾರಂಭವಾಗುತ್ತದೆ.

**ಮಯನ ಪ್ರವೇಶ:** ವನದಹನವನ್ನು ಮಯನು ಕಂಡು ಕೆರಳಿ ದಂಡಿಸಲು ಬರುತ್ತಾನೆ. ಯುದ್ಧ, ಮಯನ ಸೋಲು. ಶರಣಾಗತಿ. ಅಭಯದಾನ. ಮಯನ ನಿರ್ಗಮನ.

**ತಕ್ಷಕಪತ್ನಿಯ ಪ್ರವೇಶ:** ತಕ್ಷಕನ ಪತ್ನಿಯು ತನ್ನ ಸಂತಾನದ ನಾಶದಿಂದ ಕಂಗಾಲಾಗಿ ಅಶ್ವಸೇನನನ್ನು ನುಂಗಿ ಹೊರಗೆ ಹಾರುತ್ತಾಳೆ. ಆಕೆಯ ತಲೆಯನ್ನು ಅರ್ಜುನನ ಬಾಣ ಕತ್ತರಿಸುತ್ತದೆ. ಅಶ್ವಸೇನನ ಬಾಲವನ್ನು ಕತ್ತರಿಸುತ್ತದೆ. ಅವನು ಅರ್ಜುನನ್ನು ಕೊಲ್ಲುವುದಾಗಿ ಪ್ರತಿಜ್ಞೆ ಮಾಡಿ ಹೋಗುತ್ತಾನೆ.

**ಇಂದ್ರನ ಪ್ರವೇಶ:** ದೂತರು ಬಂದು ವನದಹನದ ಬಗ್ಗೆ ಹೇಳಿದಾಗ ಇಂದ್ರ ಯುದ್ಧಕ್ಕೆ ಹೊರಡುತ್ತಾನೆ. ಸಂವಾದ. ಯುದ್ಧ. ಅಶರೀರವಾಣಿಯ ಮೂಲಕ ತಕ್ಷಕನು ಸುರಕ್ಷಿತನಾಗಿರುವ ಸಂಗತಿ ತಿಳಿಯುತ್ತದೆ. ಯುದ್ಧದಿಂದ ಫಲವಿಲ್ಲವೆಂಬುದು ತಿಳಿದು ಯುದ್ಧ ನಿಲ್ಲಿಸಿ ಇಂದ್ರನು ವರವನ್ನು ಕೇಳಲು ಹೇಳುತ್ತಾನೆ.

ಅರ್ಜುನ ಸಕಲ ಅಸ್ತ್ರಜ್ಞಾನವನ್ನು ಕೇಳಿದಾಗ ಹರನ ದರ್ಶನವಾದ ಮೇಲೆ ದೇವಲೋಕಕ್ಕೆ ಬಂದಾಗ ದೊರೆಯುವುದೆನ್ನುತ್ತಾನೆ. ಕೃಷ್ಣನನ್ನೂ ವರ ಪಡೆಯಲು ಕೇಳಿಕೊಂಡಾಗ ಆತ, ಅರ್ಜುನನೊಂದಿಗೆ ಇಂದ್ರನ ಶಾಶ್ವತ ಮೈತ್ರಿಯನ್ನು ಯಾಚಿಸುತ್ತಾನೆ. ಇಂದ್ರ ಅನುಗ್ರಹಿಸಿ ಖಾಂಡವ ವನವು ಪುನಃ ಚಿಗುರಲೆಂದೂ ಸುಸೇವ್ಯವಾಗಲೆಂದೂ ವರವಿತ್ತು ತೆರಳುತ್ತಾನೆ.

**ಸಮಾಪ್ತ.**

# ಖಾಂಡವ ದಹನ

## ಪ್ರಸಂಗ ಸಾಹಿತ್ಯ

### ಇಂದ್ರನ ಓಲಗ
### ಇಂದ್ರ – ಅಗ್ನಿ

**ಸೌರಾಷ್ಟ್ರ – ತ್ರಿವುಡೆ**

ಒಂದು ದಿನ ದೇವೇಂದ್ರ ವಿಭವದಿ ।
ಬಂದು ಸಿಂಹಾಸನದಿ ಮಂಡಿಸೆ ।
ವಂದಿಸಿದ ಸುರರನ್ನು ಮನ್ನಿಸು । ತಿಂದ್ರನಿರಲು ॥ ೧ ॥
ಪ್ರಾಯಸಂದವನಂತೆ ಬಳಲುತ । ಲಾಯಸಂಬಡುತ್ತೈತರುವ ನಿಜ ।
ಛಾಯೆ ಮಸಳಿದ ಪಾವಕನ ಸುರ । ರಾಯ ನೋಡಿ ॥ ೨ ॥ ೨ ॥

**ಕೇದಾರಗೌಳ – ಅಷ್ಟ**

ಏನಯ್ಯ ಪಾವಕ ನೀನಿಂತು ಬಳಲುವೆ । ಕ್ಷೀಣನಾಗಿಹೆ ತೇಜದಿ ॥
ಮೌನವಾಗಿಹುದೇಕೆ ಮೌನಿಶಾಪವೊ ಮತ್ತೆ ।
ಹಾನಿಯಾರಿಂದಾಯಿತು ॥ ೧ ॥ ೩ ॥

**ದೇಶಿ – ಅಷ್ಟ**

ಕೇಳಯ್ಯ ಸುರಪಾಲ ಬಂದಿರ್ಪ ವ್ಯಥೆಯ ।
ಗೋಳಾಯ್ತು ಬಾಳಿದು ಹೇಳುವೆ ಕಥೆಯ ॥ ಪ ॥
ಮನುಜೇಶ ಶ್ವೇತಕಿ ಗೈದ ಯಾಗದಲಿ ।
ಅನುವಿಡದಾಜ್ಯವ ಸೇವಿಸಲಲ್ಲಿ ॥
ತನುಕಾಂತಿ ತಗ್ಗಿತಜೀರ್ಣದ ಬಾಧೆ ।
ಎನಗಾಗೆ ಬ್ರಹ್ಮನ ಬಳಿಗಾನು ಹೋದೆ ॥ ೧ ॥

ಖಾಂಡವ ವನವನ್ನು ಭುಂಜಿಸಲಾನು ।
ತಾಂಡವವಾಡುವಜೀರ್ಣ ಬಾಧೆಯನು ॥
ಖಂಡಿತವಾಗಿಯು ನೀಗಿಸಬಹುದು ।
ಉಂಡುಬರಲಿಕೆನಗಪ್ಪಣೆ ನೀಡು ॥ ೨ ॥ ೫ ॥

**ಕೇದಾರಗೌಳ – ಝಂಪೆ**

ಮಿತ್ರ ತಕ್ಷಕನು ನೆಲಸಿ । ಕೊಂಡಿರುವ । ಪುತ್ರಾದಿ ಬಳಗವೆರಸಿ ॥
ಇತ್ತಿರುವೆನಭಯವನ್ನು । ನಾನೆಸಗೆ ।
ಮಿತ್ರನಿಗೆ ದ್ರೋಹವನ್ನು ॥ ೧ ॥ ೬ ॥

**ಮಧುಮಾಧವಿ – ಏಕ**

ಕಳುಹಿಸೆ ಬೇರೊಂದು ಕಡೆಗಾತನನ್ನು ।
ನೆಲಸುವ ಸತಿಸುತರೊಡನೆ ತಕ್ಷಕನು ॥
ಕಳೆದರೆ ಬಾಧೆಯು ಕರ್ತವ್ಯ ಪಥದಿ ।
ಚಲಿಸುವೆ ನಿಶ್ಚಿಂತೆಯಿಂದಾನು ದೃಢದಿ ॥ ೧ ॥ ೭ ॥

**ಕೇದಾರಗೌಳ – ಝಂಪೆ**

ಗರುಡನಲಿ ಭೀತಿಗೊಂಡು । ಖಾಂಡವದೊ ।
ಳಿರುತಿಹನು ರಕ್ಷೆಗೊಂಡು ॥
ತೊರೆಯಲಾರೆನು ಭಾಷೆಯ । ಹುಡುಕು ನೀ ।
ಪರಿಹಾರಕನ್ಯ ವಿಧಿಯ ॥ ೧ ॥ ೮ ॥

**ಮಾರವಿ – ಏಕ**

ಸುಡುವೆನು ಖಾಂಡವವನವನು ಸುಮ್ಮನೆ । ತಡೆಯದಿರೆನ್ನುವನು ॥
ಜಡಜಭವಾಖ್ಯನು ಪೇಳಿದುಪಾಯದಿ ।
ಪಡೆವೆನು ನೆಮ್ಮದಿಯ ॥ ೧ ॥
ಸುರಿಸಿ ಮಳೆಯನಾ ರಕ್ಷಿಪೆ ವನವನು । ಹರಿ ಹರರೈತರಲಿ ॥
ಉರಗಪತಿಗೆ ನಾನಿತ್ತಿಹ ವಚನವ ।
ಪರಿಪಾಲಿಪೆ ದಿಟದಿ ॥ ೨ ॥ ೧೦ ॥

**ವಾರ್ಧಕ**

ಉರುಹುವೆನು ತಾನೆನುತ ಮುಂಬರಿಯೆ ಪಾವಕನು ।
ಸುರಿಸಿದನು ಮಳೆಯನ್ನು ಸುರಪಾಲನಾಕ್ಷಣದಿ ।
ಮರಳಿದನು ಮತ್ತಗ್ನಿ ಮುಂಬರಿಯಲಾರದಲೆ ಚಿತ್ತದಲಿ ಕಳವಳಿಸುತ॥
ಮರಳಿ ಯತ್ನವ ಗೈದು ಮರಳಿ ವಿಫಲತೆಯಿಂದ ।
ಪರಿಹಾರ ಕಾಣದಿರೆ ಮರುಗಿದನು ಮನದಲ್ಲಿ ।
ತೆರಳುವೆನು ತಾನೆಂದು ಮರಳುತಿರೆ ಮಾರ್ಗದಲಿ ಸುರಮುನಿಪ
ಕಾಣುತವನ ॥ ೧ ॥ ೧೧ ॥

**ನಾರದ – ಅಗ್ನಿ**

**ಸಾಂಗತ್ಯ – ರೂಪಕ**

ಚಂಡತೇಜನೆ ನಿನ್ನ ಕಂಡು ಸೋಜಿಗವಾಯ್ತು ।
ಹಿಂಡಿದ ತೆರನಿದೆ ವದನ ॥
ಮಂಡೆಯ ತಗ್ಗಿಸಿಕೊಂಡೆಲ್ಲಿ ಪೊರಟಿಹೆ ।
ದಂಡನೆಯಾಯ್ತೇನು ಹದನ ॥ ೧ ॥
ಏನ ಪೇಳಲಿ ತೇಜ ಹಾನಿಯ ಕಳೆಯಲು ।
ಕಾನನವನು ಸುಡಬಯಸಿ ॥
ತಾಣವ ಸೇರಲು ಸೋನೆಯ ಸುರಿಸುತ ।
ಕ್ಷೀಣನಾಗಿಸುವ ದೇವೇಂದ್ರ ॥ ೨ ॥ ೧೨ ॥

**ಕೇದಾರಗೌಳ – ಅಷ್ಟ**

ಬಲವಂತರಾದರ ಹುಡುಕಿ ರಕ್ಷಣೆಯನ್ನು ।
ಗಳಿಸುವುದೊಳಿತೆಂಬೆನು ॥
ಸುಲಭವು ಸುಡಲಿಕ್ಕೆ ಖಾಂಡವವನವನ್ನು ।
ಬಳಸು ನೀ ಯುಕ್ತಿಯನು ॥ ೧ ॥
ಮಘವನ ತಡೆಯುವಮೋಘ ಪರಾಕ್ರಮಿ । ಜಗದೊಳಗೆಲ್ಲಿಹನು ॥
ಹಗೆತನವೆಣಿಸಲು ಬಗೆಯುವರನು ಕಾಣೆ ।
ಮುಗಿಯದ ಹುಡುಕಾಟವು ॥ ೨ ॥

ಧರೆಯೊಳಗಿರ್ಪರು ಧುರಧೀರರೀರ್ವರು ।
ಹರಿ ಪಾರ್ಥರೆಂಬವರು ॥
ಶರಣಾಗು ಬೇಗದಿ ಪೊರೆವರು ಶೌರ್ಯದಿ ।
ಪುರುಹೂತನನು ಗೆಲ್ವರು ॥ ೩ ॥
ನರರಿಗೀ ಬಲುಹೆಲ್ಲಿ ಸುರಪನ ಗೆಲುವರೆ ।
ಪರಿಹಾಸ್ಯ ಗೈಯದಿರು ॥
ಪರರನು ಬಲಿಗೊಟ್ಟು ಪರಿಹಾರ ಪಡೆಯಲ್ಕೆ ।
ಸುರಮುನಿ ಪೇಳದಿರು ॥ ೪ ॥
ಮರುಳಾದೆಯೇನಯ್ಯ ನರರೂಪವನು ಕಂಡು ।
ಪರಮಪುರುಷರವರು ॥
ನರನಾರಾಯಣರೆಂಬುದರಿತು ನೀನವರನ್ನು ।
ತ್ವರೆಯಿಂದಲಾಶ್ರಯಿಸು ॥ ೫ ॥ ೧೮ ॥

**ಭಾಮಿನಿ**

ಮಾರುವೇಷದಿ ಪೋಗಿ ನರನನು ।
ಚಾರು ವಚನದ ಬಲೆಗೆ ಸಿಲುಕಿಸಿ ।
ಕಾರಿಯವ ಸಾಧಿಪುದು ನೀನೆನಲೊಪ್ಪಿ ಕೈಮುಗಿದು ॥
ದಾರಿಗಾಣದೆ ತೊಳಲುತಿರುವಗೆ ।
ತೋರಿಸಿದೆ ಸತ್ಪಥವ ಮುನಿಪನೆ ।
ಸಾರಿ ಕಾಣುವೆನೆನುತಲಗ್ನಿಯು ಪೊರಟನವರೆಡೆಗೆ ॥ ೧ ॥ ೧೯ ॥

**ಕೃಷ್ಣಾರ್ಜುನರ ಪ್ರವೇಶ**

**ಸೌರಾಷ್ಟ್ರ – ತ್ರಿವುಡೆ**

ಇತ್ತಲಿಂದ್ರಪ್ರಸ್ಥ ಪುರದಲಿ ।
ಮಿತ್ರರಾಗಿಹ ಕೃಷ್ಣ ಪಾರ್ಥರು ।
ಚಿತ್ತ ಹರುಷದಿ ಪೊರಟು ವನ ಚರಿ ।
ಸುತ್ತ ಬಂದು ॥ ೧ ॥ ೨೦ ॥

## ತೋಡಿ – ಅಷ್ಟ

ಕಂಡೆಯಾ । ಪಾರ್ಥ । ಕಂಡೆಯಾ ॥ ಪ ॥
ಕಂಡೆಯ ರುದ್ರ ಭಯಂಕರ ವನವ ।
ಹಿಂಡಾಗಿಯಲೆಯುವ ಶ್ವಾಪದ ವರ್ಗವ ॥ ಅ.ಪ. ॥
ಎಲ್ಲಿ ನೋಡಿದರಲ್ಲಿ ಸರ್ಪಸಂತಾನ ।
ಕೊಲ್ಲಲೆಂದೆತ್ತಿದ ಹೆಡೆಗಳ ತಾಣ ॥
ಎಲ್ಲು ಕಾಣದ ಚಿತ್ರ ವನವಿದು ನೋಡು ।
ಝುಲ್ಲೆನಿಸುವುದೆದೆ ಕಂಡರೆ ಕಾಡು ॥ ೧ ॥
ಆನೆಯ ನುಂಗುವ ಹೆಬ್ಬಾವ ನೋಡು ।
ಪ್ರಾಣಘಾತಕವಲ್ಲಿ ಬಳ್ಳಿಯ ಮಾಡು ॥
ಏಣನ ಸುತ್ತಿದೆ ಹಾವಿನ ಜೋಡು ।
ಕಾನನವಿದು ಯಮನಾಳ್ಗಳ ಬೀಡು ॥ ೨ ॥
ಪುರದ ಸಮೀಪದೊಳಿರುವುದೀ ವನವು ।
ಅರಿಯದೆ ಪೊಕ್ಕರೇನುಳಿವುದೆ ಜನವು ॥
ಪರಿಹಾರವೇನಿದಕೆಂಬುದನರಿಯೆ ।
ಪರಿಪೂರ್ಣದಯದಿಂದ ಪೊರೆಯೊ ಶ್ರೀಹರಿಯೆ ॥ ೩ ॥ ೨೩ ॥

## ಭಾಮಿನಿ

ಕಟ್ಟಿ ಕೆಟ್ಟೆವು ಪುರವನೀವನ । ದುಷ್ಟ ಭುಜಗ ನಿವಾಸವೆಂಬುದು ।
ಸೃಷ್ಟಿಪಾಲಗೆ ತಿಳಿಯದರಿದರದೇನ ಗೈಯುವನೋ ॥
ಶಿಷ್ಟಪಾಲನೆಗೊದಗಿದೀ ಸಂ ।
ಕಷ್ಟವನು ಪರಿಹರಿಪುಪಾಯವ ।
ಶಿಷ್ಟರಕ್ಷಕ ನೀನೆ ಸೂಚಿಪುದೆಂದು ಬೇಡಿದನು ॥ ೧ ॥ ೨೪ ॥

## ಸುರುಟಿ – ಏಕ

ಬಿಡು ಚಿಂತೆಯ ನೀನು । ಫಲುಗುಣ ।
ಹುಡುಕಲು ಪಥವನ್ನು ॥
ಪಡೆವುದು ದೊಡ್ಡಿತೆ ದೃಢಸಂಕಲ್ಪದಿ ।
ತೊಡಗಲು ಕುಡಿಯಲುಬಹುದ್ಯೆ ಕಡಲನು॥ ೧ ॥

ಬಳಲಿಹೆ ನಾನೀಗ । ತೃಷೆಯನು । ಕಳೆದು ಬರುವೆ ಬೇಗ ॥
ಬಳಿಕ ವಿಚಿಂತಿಸಿ ತಿಳಿವುದುಪಾಯವ ।
ಕುಳಿತಿರು ಬರುವೆನು ಜಲವನು ಸೇವಿಸಿ॥ ೨ ॥ ೨೬ ॥

**ಸಾಂಗತ್ಯ – ರೂಪಕ**

ಹರಿಯತ್ತ ಹರಿಯಲು ಹರಿಮಯ ತೇಜದಿ ।
ಮಿರುಗುವ ವರವಿಪ್ರನೋರ್ವ ॥
ನರನತ್ತ ಬರುವುದ ಪರಿಕಿಸಿ ವರಪಾರ್ಥ ।
ಶಿರಬಾಗಿ ಕರಜೋಡಿಸುತ್ತ ॥ ೧ ॥
ಭೂಸುರವರ್ಯನೆ ಸಾಸಿರ ನಮನವು ।
ದಾಸನು ನಿನ್ನಡಿಗಳ್ಗೆ ॥
ತೋಷದಿ ಸೇವೆಯ ಗೈವಾಸೆಯೆನಗುಂಟಾ ।
ದೇಶವ ನೀಡುವುದೆನಗೆ ॥ ೨ ॥
ದೇಶಕೋಶಗಳೆಂಬ ಪಾಶವನೊಲ್ಲೆನು ।
ದೋಷಕ್ಕೆ ಹೆದ್ದಾರಿಯೆಂಬೆ ॥
ಪೋಷಣೆಯಿಲ್ಲದೆ ನಾಶಿಪ ದೇಹಕಾ ।
ನಾಶಿಪೆನಶನವನಿಷ್ಟು ॥ ೩ ॥
ಅದಕೆ ಚಿಂತೆಗಳೇಕೆ ಹದನಾದ ಭೋಜನ ।
ವೊದಗಿಪೆನರಮನೆಯೊಳಗೆ ॥
ಸದನದೊಳಿಹನಣ್ಣ ಮುದದಿಂದ ಪೂಜಿಸಿ ।
ಮಧುರ ಭೋಜನವಿತ್ತು ತಣಿಪ ॥ ೪ ॥
ಇಷ್ಟಭೋಜನವಿತ್ತು ತುಷ್ಟಿಪಡಿಸುವಂಥ ।
ಶ್ರೇಷ್ಠರನೀವರೆಗಾನು ॥
ಸೃಷ್ಟಿಯೊಳ್ಕಾಣೆನು ಕೊಟ್ಟರೆ ಭಾಷೆಯ ।
ಥಟ್ಟನೆ ನಂಬುವೆ ನಿನ್ನ ॥ ೫ ॥ ೩೧ ॥

**ಸೌರಾಷ್ಟ್ರ – ತ್ರಿವುಡೆ**

ವಿಪ್ರ ಕೇಳ್ನಿನಗಿತ್ತು ಭೋಜನ । ತೃಪ್ತಿಪಡಿಸದೆ ಪೋದೆನಾದರೆ ।
ಅಪ್ರಯೋಜಕ ತನುವ ನೀಗುವೆ । ನಗ್ನಿಯೊಳಗೆ ॥ ೧ ॥ ೩೨ ॥

**ಭಾಮಿನಿ**

ಕೆಡುವೆ ಭಾಷೆಯ ನೀಡದಿರು ತಡೆ ।
ದುಡುಕದಿರು ಮತ್ತಿವನ ನೀನರಿ ।
ಬಡಬನೀತನು ಬಡವನಲ್ಲೆನುತೊಡನೆ ಗೋವಿಂದ ॥
ನುಡಿಯುತೈತರೆ ಪಾರ್ಥನಚ್ಚರಿ ।
ವಡುತ ಪೇಳಿದ ಹವ್ಯವಾಹನ ।
ನೊಡಲ ತುಂಬುವ ಪರಿಯದೇನೆನೆ ಶಿಖಿಯು ಮೈದೋರಿ
॥ ೧ ॥ ೩೩ ॥

**ಕಲ್ಯಾಣಿ – ಅಷ್ಟ**

ವನವಿದೆ ನಿನ್ನೆದುರಲ್ಲಿ । ಅದ ।
ನುಣುವಾಸೆಯಿಂ ಬಂದೆನಿಲ್ಲಿ ॥
ಅನುವೀಯದಿಂದ್ರನು ಸುರಿಸುವ ಮಳೆಯನ್ನು ।
ಮನದಾಸೆ ಹಿಂಗಲು ರಕ್ಷಣೆಯೀವುದು ॥ ೧ ॥
ಎನೆ ಕೇಳುತೆಂದನು ಪಾರ್ಥ । ನಿನ್ನ ।
ಮನದಾಸೆಯೊಳಗೇನು ಸ್ವಾರ್ಥ ॥
ಅನುಗೊಡನೇಕಿಂದ್ರ ತಿಳುಹೆಲ್ಲ ವಿವರವ ।
ತನಗೆಂದು ಪೇಳಲು ಪೇಳಿದನೆಲ್ಲವ ॥ ೨ ॥ ೩೪ ॥

**ಶಂಕರಾಭರಣ – ರೂಪಕ**

ಮೋಸವಾಯಿತು । ಪಾರ್ಥ ನಮಗೆ ।
ಮೋಸವಾಯಿತು ॥ ಪ ॥
ವೇಷಮರೆಸಿಕೊಂಡು ಬಂದು ।
ಭಾಷೆಗೊಂಡು ಬಳಿಕ ನಮ್ಮ ।
ನಾಶಗೈವುಪಾಯವೆಂಬ ।
ಪಾಶ ನಿಶ್ಚಯ ॥ ಮೋಸವಾಯಿತು ॥ ೧ ॥
ಮಾತಿನೊಂದು ಬಲೆಯನೊಡ್ಡಿ । ತಾತನೆದುರು ನಿಲಿಸಿ ಧುರದಿ ।
ಘಾತಗೈಸಿ ನಗಲು ಬಂದ ।
ಧೂರ್ತನೀತನು ॥ ಮೋಸವಾಯಿತು ॥ ೨ ॥ ೩೫ ॥

## ಭೈರವಿ – ಝಂಪೆ

ಯಾತಕೀ ಪರಿ ನುಡಿವೆ ನೀ ತಿಳಿಯದವನಂತೆ ।
ಏತರವ ನಿನಗಿಂದ್ರ ತೃಣಕೆ ಸಮನಲ್ತೆ ॥
ಈ ತನಕ ತೊಳಲಿರುವೆ ಸುರಮುನಿಪ ನುಡಿದಂತೆ ।
ಕಾತರಿಸಿ ನಾ ಬಂದೆ ಪೊರೆಯೊ ಶ್ರೀಹರಿಯೆ ॥ ೧ ॥
ಒಳಿತು ನಿನ್ನಿಚ್ಛೆಯನು ಸಲಿಸುವೆವು ನಾವಿನ್ನು ।
ಸಲಕರಣೆಗಳನಷ್ಟು ನಮಗೆ ಕೊಡಬೇಕು ॥
ಚಲಿಸುವೊಡೆ ವೇಗದಲಿ ರಥ ತುರಗವಿಲ್ಲಿಲ್ಲ ।
ಹುಲು ಬಿಲ್ಲು ಬಾಣಗಳು ಸಾಕೆ ಸಂಗರಕೆ ॥ ೨ ॥
ಕೊಡುವೆ ನಾ ದಿವ್ಯಾಶ್ವ ರಥಗಳನು ಪಾರ್ಥನಿಗೆ ।
ಪೊಡವಿಯೊಳಗತಿಶಯದ ಗಾಂಡೀವವನ್ನು ॥
ಒಡನೀವೆನಕ್ಷಯದ ತೂಣೀರವನ್ನಿವಗೆ ।
ಹಿಡಿ ಸುದರ್ಶನ ಚಕ್ರವನ್ನಿತ್ತೆ ನಿನಗೆ ॥ ೩ ॥ ೪೦ ॥

## ವಾರ್ಧಕ

ಎನುತ ಶಿಖಿ ಕಣ್ಮುಚ್ಚಿ ವರುಣದೇವನ ಮನದಿ ।
ನೆನೆಯಲ್ಕೆ ಮೈದೋರಿ ಕರೆದ ಕಾರಣವೇನು ।
ತನಗರುಹಬೇಕೆನಲು ಕರುಣಿಪುದು ಕಾಮಿತದ
ವಸ್ತುಗಳನೆನಗೆನ್ನಲು ॥
ವನಧಿಪತಿಯಸ್ತೆನುತ ಬೇಕಾದುದೆಲ್ಲವನು ।
ವಿನಯದಿಂದವಗಿತ್ತು ಮರೆಯಾಗೆ ಪಾವಕನು ।
ಧನು ಶರಾಸನಗಳನು ಕೊಳ್ಳು ಬಾ ನೀನೆನಲು ಫಲುಗುಣನು
ಬೆರಗಾಗುತ ॥ ೧ ॥ ೪೧ ॥

## ತೋಡಿ – ಅಷ್ಟ

ನೋಡಿದ । ಪಾರ್ಥ । ನೋಡಿದ ॥ ಪ ॥
ನೋಡಿದ ಕಲಿಪಾರ್ಥ ಬೆರಗಾಗಿ ಧನುವ ।
ಕೂಡಿದ ತೇಜದಿ ಬೆಳಗುವ ತನುವ ॥ ಅ. ಪ. ॥

ದೇವಶಿಲ್ಪಿಯ ಕೈಯ ಚಳಕದ ಫಲವು ।
ಪಾವನತರಧನುವಿದರಿಂದ ಗೆಲುವು ॥
ಪಾವಕನೆನಗೀವ ಜೀವನ ಧನ್ಯ ।
ಗೋವಿಂದ ಸಖನಿಂದು ಜಗದಲಿ ಮಾನ್ಯ ॥ ೧ ॥ ೪೨ ॥

**ಕೇದಾರಗೌಳ – ಅಷ್ಟ**

ಧನುವನ್ನು ಪಿಡಿವುತ್ತ ಪುಳಕದಿ ಮುಳುಗೆದ್ದು ।
ತನುವುಬ್ಬಿ ಕುಣಿದಾಡುತ ॥
ಅನಲನಿಗೆರಗುತ್ತ ವನಜಾಕ್ಷ ದಯವೆಂದು ।
ಘನತೋಷದೊಳಗೆಂದನು ॥ ೧ ॥ ೪೩ ॥

**ಮಾರವಿ – ಏಕ**

ಸುಡುಸುಡು ವನವನು ಇನ್ನೇನಂಜಿಕೆ ।
ಬಡಬನೆ ನಾವಿನ್ನು ॥
ಬಿಡದೊದಗಿಸುವೆವು ರಕ್ಷಣೆಯನು ನಿ ।
ನ್ನೊಡಲನು ತುಂಬಿಸಲು ॥ ೧ ॥
ಕಟ್ಟುವೆ ಬಾಣದಿ ಕೋಟೆಯ ಸುತ್ತಲು ।
ದಿಟ್ಟಿಸಿ ನೋಡೀಗ ॥
ಸುಟ್ಟುರುಹೆಲ್ಲವ ದಿಟ್ಟತೆಯಿಂದಲಿ ।
ಇಷ್ಟಕೆ ಬಂದಂತೆ ॥ ೨ ॥ ೪೪ ॥

**ಸೌರಾಷ್ಟ್ರ – ತ್ರಿವುಡೆ**

ವನದಿ ನೆಲಸಿಹ ದನುಜಶಿಲ್ಪಿಯು ।
ಅನುಚರರ ಕೂಡಿರಲು ಮುದದಲಿ ।
ಘನತರದ ಧೂಮವನು ಕಾಣುತ । ಲಿಣುಕಿ ನೋಡಿ॥ ೧ ॥
ಅರರೆ ಏನಾಶ್ಚರ್ಯವೀವನ ।
ಕುರಿಯನಿಟ್ಟವರಾವ ಧೂರ್ತರು ।
ಪರಿಕಿಸುವೆ ತಾನೆನುತ ಬರೆ ಹರಿ ।
ನರರ ಕಂಡ ॥ ೨ ॥ ೪೫ ॥

**ಘಂಟಾರವ – ಅಷ್ಟ**

ಯಾರೋ ನಮ್ಮಯ ವನವ ಪ್ರವೇಶಿಸಿ। ಕ್ರೂರತನದೊಳಗುರಿಯನಿಕ್ಕಿದ।
ಕಾರಣಂಗಳ ಪೇಳ್ವುದು॥ ೧ ॥ ೪೮ ॥

**ಕೇದಾರಗೌಳ – ಝಂಪೆ**

ದೇವಕಿಯ ಸಂಜಾತನು । ದನುಜಹರ । ದೇವವಂದಿತ ಕೃಷ್ಣನು ॥
ಭಾವಿಸುವ ಜನರ ಕಾಯ್ವೆ । ದುರುಳರನು ।
ಭಾವಿಸದೆ ಕೊಂದು ಕಳೆವೆ ॥ ೧ ॥
ಪಾಂಡುಸುತ ಪಾರ್ಥ ನಾನು । ಮೂರ್ಲೋಕ ।
ಗಂಡನೆನ್ನುವರೆನ್ನನು ॥
ದಂಡಧರನಿದಿರಾದರು । ಲೆಕ್ಕಿಸದ ।
ಗಂಡುಸಾಗಿಹೆ ತಿಳಿದಿರು ॥ ೨ ॥ ೫೦ ॥

**ಭೈರವಿ – ಅಷ್ಟ**

ಬಣಗು ದಾನವ ನಾನಲ್ಲ । ತ್ರೈಜಗಖ್ಯಾತ ।
ದನುಜಶಿಲ್ಪಿಯು ಸುಳ್ಳಲ್ಲ ॥
ಮನುಜರು ಗಣ್ಯವೆ ಹೊಸಕಿ ಹಾಕುವೆ ನಿಮ್ಮ ।
ಸೆಣಸು ಬೇಡೆಮ್ಮೊಡನೆ ॥ ೧ ॥ ೫೧ ॥

**ಕೇದಾರಗೌಳ – ಝಂಪೆ**

ಥರಥರದ ಶಿಲ್ಪಗಳನು । ಮಾಡುತಿರು । ಬರಿದೆ ಕೆಣಕದಿರೆಮ್ಮನು ॥
ಶರಣಾದರೊಳಿತು ನಿನ್ನ । ಪೊರೆಯುವೆವು ।
ಪರಿಪೂರ್ಣ ದಯದಿ ಮುನ್ನ ॥ ೧ ॥ ೫೨ ॥

**ಭೈರವಿ – ಅಷ್ಟ**

ನರಗುರಿಗಳು ನಿಮ್ಮಲಿ । ತುಂಬಿರುವಂಥ ।
ಗರುವವ ಮುರಿಯುವಲ್ಲಿ ॥
ಅರೆಚಣ ಸಾಕಿನ್ನು ಗಳಹದಿರೆನ್ನುತ ।
ಉರುತರ ಕ್ರೋಧದಲಿ ॥ ೧ ॥ ೫೩ ॥

**ಭಾಮಿನಿ**

ಕಾದಿದನು ಮಯ ಹಲವು ವಿಧದಲಿ ।
ಬೋಧ ತಪ್ಪಿತು ಶರದ ಹತಿಯಲಿ ।
ಕಾದಲಸದಳವೆಂಬುದರಿಯುತ ಮನದಿ ಚಿಂತಿಸುತ ॥
ಆದಿಪುರುಷರ ನಿಜವನರಿಯದೆ । ಹಾದಿ ತಪ್ಪಿದೆನಕಟ ಎನ್ನಪ ।
ರಾಧ ಪರಿಹರಕಿವರ ಪಾದವೆ ಶರಣು ತನಗೆನುತ ॥ ೧ ॥ ೫೪ ॥

**ಕಾಪಿ – ಅಷ್ಟ**

ಕರುಣದಿ ರಕ್ಷಿಸಬೇಕು । ನಿಜ ।
ವರಿಯದೆ ಗರ್ವದಿ ಸೆಣಸಿದ್ದು ಸಾಕು ॥
ನರರೂಪ ಧರಿಸಿದ ನೀವು । ಅವ ।
ತರಿಸಿದ ದಿವ್ಯಾತ್ಮರೆಂಬುದು ದಿಟವು ॥ ೧ ॥
ಸೇವೆಯ ಮಾಡುತ ನಿಮ್ಮ । ಮುಂದೆ ।
ಜೀವನ ಕಳೆಯುವ ಮನವಿಹುದೆಮ್ಮ ॥
ಭಾವವನರಿತೀಗಲೆನಗೆ । ಮುಂದೆ ।
ಗೈವುದಕಾದೇಶವೀವುದು ಕಡೆಗೆ ॥ ೨ ॥ ೫೬ ॥

**ಶಂಕರಾಭರಣ – ರೂಪಕ**

ಭಯವು ಬೇಡ ಮಯನೆ ನಿನಗೆ ಅಭಯವಿತ್ತೆನು ।
ನಯದ ನುಡಿಯ ಕೇಳಿ ಮನದಿ ।ಹರುಷಗೊಂಡೆನು ॥ ನಿ ।
ಭಯದಿ ಸೇರು ಮನಕೆ ಬಂದ ನೆಲೆಯನೀದಿನ ।
ಬಯಸಿದಾಗ ಬಂದು ಕಾರ್ಯ ಗೈವುದಾದಿನ ॥ ೧ ॥ ೫೭ ॥

**ಕಂದ**

ಎನಲಾ ನುಡಿಗೊಪ್ಪುತ ಮಯ ।
ವನಭುವಿಯಂ ತೊರೆದು ತಾಣವನರಸಿ ಪೋಗಲ್ ॥
ಅನಲನ ಕೆನ್ನಾಲಗೆಯುರಿ ।
ತಾನಧಿಕವಾಗಿರೆ ತಕ್ಷಕನರಸಿ ಕಂಡುಂ ॥ ೧ ॥ ೫೮ ॥

### ಸಾವೇರಿ – ಆದಿ

ಹರಹರ ಕಾಡಿನೊಳು । ಹಬ್ಬಿದ ಬೆಂಕಿ ।
ಯುರುಹುತಲಿದೆಯೀಗಳು ॥
ಹರಣವುಳಿವುದೆಂತು । ಮತ್ತೆನ್ನಯ । ತರಳರ ಕಾವುದೆಂತು ॥ ೧ ॥
ನಲ್ಲನು ಪಾತಾಳಕೆ । ಪೋಗಿರುವಾಗ । ಇಲ್ಲಿ ಸಂಕಟ ಬಂತೇಕೆ ॥
ಇಲ್ಲಿರೆ ಸಂತತಿಯು । ಬೆಂಕಿಗೆ ಒಣ । ಹುಲ್ಲಿನ ತೆರನಪ್ಪುದು ॥ ೨ ॥
ಸುತ್ತ ಬಾಣದ ಕೋಟೆಯು । ಇಂಬಿಲ್ಲವು ।
ಎತ್ತರ ಮುಗಿಲ ಮುಟ್ಟುವುದು ॥
ಹತ್ತಲು ಜಾರುವುದು । ಜಿಗಿಯುವುದೆಂತು ।
ದೈತ್ಯ ಬಲವೂ  ಸಾಲದು ॥ ೩ ॥
ಸಣ್ಣವನಶ್ವಸೇನ । ಆತನ ನುಂಗಿ । ಠಣ್ಣನೆ ಜಿಗಿವೆ ಪ್ರಾಣ ॥
ಎನ್ನದು ಹೋದರೇನು । ಮುಂದೆನ್ನಯ ।
ಚಿಣ್ಣನು ಬದುಕುವನು ॥ ೪ ॥ ೬೨ ॥

### ದ್ವಿಪದಿ

ಎನುತಲಾ ತಕ್ಷಕಿಯು ನಿಶ್ಚಯವಗೈದು ।
ತನುಜನನು ನುಂಗಿದಳು ತನ್ನೊಳಗೆ ತಿಳಿದು ॥ ೧ ॥
ಆಗಸಕೆ ಜಿಗಿವುದನು ಶ್ರೀಕೃಷ್ಣ ಕಂಡು ।
ಆಗಮವ ಸೂಚಿಸಲು ಪಾರ್ಥ ಬಿಲ್ಗೊಂಡು ॥ ೨ ॥
ಶರವೆಸೆಯೆ ತುಂಡಾಯ್ತು ತಕ್ಷಕಿಯ ಕೊರಳು ।
ತರಳನಾ ಬಾಲವನು ಖಂಡಿಸಿತು ಸರಳು ॥ ೩ ॥ ೬೩ ॥

### ಭೈರವಿ – ಏಕ

ಉರಿಯುಗುಳುತ ಹರಿತಂದ । ಹರಿ । ನರರನು ನೋಡುತಲೆಂದ ॥
ದುರುಳನೆ ಮಾತೆಯ ಕೊಂದೆ । ಎನ ।
ಗುರುತರ ಸಂಕಟ ತಂದೆ ॥ ೧ ॥
ಕತ್ತರಿಸಿದೆ ಮಮಪುಚ್ಛ । ಇದ । ಕುತ್ತರ ನೀಡುವೆ ತುಚ್ಛ ॥
ಕತ್ತನು ಕಡಿಯುವ ಜನರ । ಹುಡು ।
ಕುತ್ತಲಿ ಸೇರುವೆನವರ ॥ ೨ ॥

ಕೇಡನು ತರುವೆನು ನಿನಗೆ । ಮಮ ।
ಸೇಡನು ತೀರ್ಚುವೆ ಬಿಡದೆ ॥
ಆಡಲು ಫಲವೇನಿಲ್ಲ । ನಾ ।
ಮಾಡುವೆ ಕಾರ್ಯವನೆಲ್ಲ ॥ ೩ ॥ ೬೮ ॥

### ಭಾಮಿನಿ

ಛಲದ ನುಡಿಗಳ ಕೇಳಿ ಮನವದು ।
ಚಲಿಸೆ ಪಾರ್ಥಗೆ ಹರಿಯು ಪೇಳಿದ ।
ನಳುಕಬೇಡೆಲೆ ನರನೆ ವಿಧಿಬರಹವನು ತಪ್ಪಿಸಲು ॥
ಛಲದೊಳಾಪುದೆ ಧರ್ಮಸೂಕ್ಷ್ಮದ ।
ನೆಲೆಯ ಬಲ್ಲವರಾರು ಬರಿದೇ ।
ಗಳಹಲೆಲ್ಲವು ಸಂಭವಿಸುವುದೆ ಧೈರ್ಯ ತಾಳೆಂದ ॥ ೧ ॥ ೬೯ ॥

## ದೇವೇಂದ್ರನ ಓಲಗ

### ನಾದನಾಮಕ್ರಿಯೆ – ಅಷ್ಟ

ಇತ್ತ ದೇವೇಂದ್ರಗೆ ದೂತರು । ಬಂದು ।
ತತ್ತರಗುಟ್ಟುತಲೆಂದರು ॥
ಹತ್ತಿದೆ ಬೆಂಕಿಯು ಕಾಡಿಗೆ । ನಡು ।
ಗುತ್ತಿದೆ ನಮ್ಮಯ ಗುಂಡಿಗೆ ॥ ೧ ॥
ರಥವೇರಿ ನಿಂದಿಹ ವೀರರು । ನಮ ।
ಗತಿಶಯ ಭೀತಿಯ ತಂದರು ॥
ಖತಿಯಿಂದ ಬಾಣವನೆಸೆದರು । ಶರ ।
ಹತಿಯಿಂದ ಬಳಲಿಕೆ ತಂದರು ॥ ೨ ॥
ಬಾಣದ ಕೋಟೆಯು ಸುತ್ತಲು । ಗತಿ ।
ಗಾಣವು ಪ್ರಾಣಿಗಳೆತ್ತಲು ॥
ಸೋನೆಯು ಜರುಗದ ಚಪ್ಪರ । ಕೊನೆ ।
ಗಾಣದು ಬೆಂಕಿಯ ಅಬ್ಬರ ॥ ೩ ॥ ೭೦ ॥

**ಸೌರಾಷ್ಟ್ರ – ತ್ರಿವುಡೆ**

ಅರರೆ ಮಾನವರಿಂತು ಗರ್ವದಿ ।
ಸುರಪವನವನು ಸೂರೆಗೊಳ್ಳಲು ।
ನೆರವನಿತ್ತರೆ ಹವ್ಯವಾಹಗೆ । ಪರಿಕಿಸುವೆನು ॥ ೧ ॥
ಕರೆಸಿ ಸೇನಾಜಾಲವೆಲ್ಲವ ।
ಬರಿಸಿ ವರುಣಾದಿಗಳ ಬೇಗದಿ ।
ಪೊರಟನೈರಾವತವನೇರುತ । ಸುರಪ ಭರದಿ ॥ ೨ ॥ ೭೪ ॥

**ಕಲ್ಯಾಣಿ – ಅಷ್ಟ**

ಬಂದ ದೇವೇಂದ್ರನ ಕಂಡು । ಮುದ ।
ದಿಂದಲಿ ಹತ್ತಿರ ಬಂದು ॥
ವಂದಿಸುವೆವು ಪದ ವೃಂದಕೆ ಸುರಪಾಲ ।
ಸಂದರುಶನ ಮುದ ತಂದಿತು ಶಚಿಲೋಲ ॥ ೧ ॥
ಏನಾಗಬೇಕು ನಮ್ಮಿಂದ । ಸುರ ।
ಸೇನೆಯ ಸಹಿತಿಲ್ಲಿ ಬಂದ ॥
ಕೇಣಮನರಿಯೆವು ದಾನವರಿಲ್ಲಿಲ್ಲ ।
ಕಾನನ ಭುವಿಯೊಳು ಕಾಣಿಸಿಕೊಳುತಿಹೆ ॥ ೨ ॥ ೭೬ ॥

**ಶಂಕರಾಭರಣ – ಏಕ**

ಅನಲನಿಂಗೆ ಸಹಯವಿತ್ತು ।
ವನವ ಸುಡುತ ನಿಂತು ನಮ್ಮ ।
ನಣಕಿಸಲ್ಕೆ ಬಂದುದೇತ ।
ಕೆನಗೆ ಪೇಳಿರಿ ॥ ೧ ॥ ೭೭ ॥

**ಕಲ್ಯಾಣಿ – ಅಷ್ಟ**

ಅರಿಯದೆ ಭಾಷೆಯನಿತ್ತೆ । ಹಿಂದೆ ।
ಸರಿವುದೇನುಚಿತವೆ ಮತ್ತೆ ॥
ಸುರಪನ ಸುತನಾಗಿ ಮುರಿದರೆ ವಚನವ ।
ಸುರರೆಲ್ಲ ನಗರೇನು ಸುರರಾಯ ಪೇಳಿಂದು ॥ ೧ ॥ ೭೮ ॥

**ಶಂಕರಾಭರಣ – ಏಕ**

ಪಿತನು ಕೊಟ್ಟ ಮಾತನುಳಿಸೆ ।
ಸುತನು ರಾಮ ವನಕೆ ನಡೆದ ।
ಹಿತದಿ ಪೇಳ್ವೆ ಮಾತ ಮೀರಿ ।
ಖತಿಯ ತರದಿರು ॥ ೧ ॥ ೭೯ ॥

**ಮಾರವಿ – ಏಕ**

ಕೊಟ್ಟಿಹೆ ಭಾಷೆಯ ತೊಟ್ಟಿಹೆ ಶಪಥವ ।
ಎಷ್ಟೆಂದರು ಬಿಡೆನು ॥
ಸೃಷ್ಟಿಯ ಜನರೊಳು ಭ್ರಷ್ಟನು ನಾನಹೆ ।
ನಷ್ಟವು ಬದುಕೆಲ್ಲ ॥ ೧ ॥ ೮೦ ॥

**ಕೇದಾರಗೌಳ – ಝಂಪೆ**

ಇಷ್ಟು ಪೌರುಷ ನಿನ್ನಲಿ । ಇರಲಿನ್ನು ।
ನಷ್ಟವಾಗುವೆ ಧುರದಲಿ ॥
ಸೃಷ್ಟಿಯಲಿ ಕಡೆಯ ಕಾಲ । ಎನುತಲವ ।
ಸೃಷ್ಟಿಸಿದ ಶರದ ಜಾಲ ॥ ೧ ॥ ೮೧ ॥

**ವಾರ್ಧಕ**

ತುಡುಕಿದನು ಕಲಿಪಾರ್ಥ ಗಾಂಡೀವ ಧನುವನ್ನು ।
ಪೊಡವಿ ಕಂಪಿಸಲಂದು ಶರವರ್ಷಗಳು ಸುರಿದು ।
ದಡಗಿರಲು ದಿಗ್ದೇಶ ಬಾಣಮಯವಾಯ್ತುಖಿಲ ಲೋಕಗಳು ಸಂಗ್ರಾಮದಿ ॥
ನುಡಿಯೊಂದು ಕೇಳಿಸಿತು ನಭದಲ್ಲಿ ದೇವೇಂದ್ರ ।
ದುಡುಕದಿರು ತಕ್ಷಕನು ಸುಕ್ಷೇಮದಿಂದಿಹನು ।
ಕಡೆಗಾಣದೀಯುದ್ಧ ನಿನಗೆ ಸೋಲುವನಲ್ಲ ಬರಿದೇಕೆ ಸೆಣಸಾಟವು ॥ ೧ ॥ ೮೨ ॥

**ಕೇದಾರಗೌಳ – ಅಷ್ಟ**

ಮೆಚ್ಚಿದೆ ನಾ ನಿನ್ನ ಹೆಚ್ಚಿನ ಯುದ್ಧಕೆ ।
ಸಚ್ಚರಿತನೆ ಫಲ್ಗುಣ ॥
ಉಚ್ಚರಿಸೈ ಮನದಿಚ್ಛೆಯ ಸಲಿಸುವೆ ।
ನಿಚ್ಚಟದಲಿ ನಾನು ॥ ೧ ॥ ೮೩ ॥

**ಕಾಂಬೋಧಿ – ಝಂಪೆ**

ಸಲ್ಲದಿಹ ಕಾರ್ಯವನು ಗೈದಿರುವ ತರಳನನು ।
ಬಲ್ಲವನು ನೀ ಮನ್ನಿಸಿಹೆಯ ॥
ಎಲ್ಲ ದಿವ್ಯಾಸ್ತ್ರಗಳ ಪಡೆವಾಸೆಯೆನಗುಂಟು ।
ಇಲ್ಲವೆನ್ನದೆ ಕರುಣಿಸೆನಗೆ ॥ ೧ ॥
ದೊರಕುವವು ದಿವ್ಯಾಸ್ತ್ರಗಳು ನಿನಗೆ ನಿಶ್ಚಿತವು ।
ಬರಲಿಹುದು ಮುಂದೊಂದು ಕಾಲ ॥
ಹರನ ದರ್ಶನವಾದಮೇಲೆ ನಿನ್ನನು ಕರೆಸಿ ।
ಹರಸುವೆವು ದಿವ್ಯಾಸ್ತ್ರವಿತ್ತು ॥ ೨ ॥
ಹರಿ ನಿನ್ನ ಮಹಿಮೆಯನ್ನರಿತವರದಾರುಂಟು ।
ಪೊರೆದಿರುವೆ ಪಾಂಡವರ ದಯದಿ ॥
ವರವೊಂದ ಕೊಡುವಾಸೆ ಕೊರತೆಯಿಲ್ಲದ ನಿನಗೆ ।
ಒರೆವುದೊಂದಾಸೆಯನು ಮುದದಿ ॥ ೩ ॥
ನರನೊಡನೆ ಸ್ನೇಹವನು ಬಯಸುವೆನು ಶಾಶ್ವತದಿ ।
ಕರುಣಿಸಿನ್ನೀ ವರವನೆನಗೆ ॥
ಮೆರೆಸಿದಿರಿ ವಚನಬದ್ಧತೆ ಧರ್ಮವೆಂಬುದನು ।
ಮರೆಯದಿರಲೀಲೋಕವಿದನು॥ ೪ ॥
ಅನಲನುರುಹಿದ ವನವು ಚಿಗಿತುಕೊಳ್ಳಲಿ ಮತ್ತೆ ।
ವನನಾಶ ತರವಲ್ಲ ಜಗದಿ ॥
ಅನಿವಾರ್ಯ ವನವ ನಿರ್ಮಿಸಿ ಪೋಷಿಸಿದ ಬಳಿಕ ।
ಜನರು ನೆಮ್ಮದಿಯುಣಲಿ ಮನದಿ ॥ ೫ ॥ ೮೮ ॥

## ವಾರ್ಧಕ

ಎನುತ ಹರಿ ನುಡಿಯಲ್ಕೆ ಮನಮೆಚ್ಚಿ ದೇವೇಂದ್ರ ।
ಸನುಮತವು ಸರ್ವರಿಗೆ ವರವಿತ್ತೆ ನಿನಗೆಂದು ।
ವನಜನಾಭಗೆ ಪೇಳಿ ಮರಳಿದನು ಗಜವೇರಿ ಸುರರೊಡನೆ
ಸುರಲೋಕಕೆ ॥
ಅನಲನಾಶೀರ್ವಾದ ದೊರಕಿದುದು ತನಗಿಂದು ।
ವನಭೂಮಿಯೊಳಗಿರ್ದ ಕಂಟಕವು ದೂರಾಯ್ತು ।
ವನಜಾಕ್ಷನೊಲುಮೆಯಿರೆ ಸರ್ವವೂ ಶುಭವೆಂದು ಮಣಿದನರ್ಜುನ
ಕೃಷ್ಣಗೆ ॥ ೧ ॥ ೮೯ ॥

## ಮಂಗಲ ಪದ್ಯ

*ಸತ್ಯದಿ ಸಲಹುವ ಪ್ರಹ್ಲಾದನಿಗೆ ।*
*ಸತ್ಯದಿ ನೆನೆಯೆಬಂದ ನರಸಿಂಹನಿಗೆ ।*
*ಪೃಥ್ವಿಯನೆತ್ತಿ ತಂದ ವರಹವತಾರನಿಗೆ ।*
*ಮಂಗಳಂ ಶುಭ ಮಂಗಳಂ ॥ ೧ ॥*
*ಕಂಬದಲುದಿಸಿದ ನರಹರಿಗೆ ।*
*ಮಗುವನು ಕಾಯ್ದು ದುರುಳನ ಕೊಂದ ಶ್ರೀಹರಿಗೆ ।*
*ಹತ್ತವತಾರದಿ ಭಕ್ತರ ಸಲಹುವ ।*
*ಮುದ್ದು ಶ್ರೀ ವಿಠಲಗೆ ಮಂಗಳಂ ॥ ೧ ॥*

***** **ಶುಭಂ** *****

# “ನಮ್ಮ ಪ್ರಕಟಣೆಗಳು”

| ಕ್ರ. ಸಂ. | ಪುಸ್ತಕಗಳ ಹೆಸರು | ಲೇಖಕರ/ಸಂಪಾದಕರ ಹೆಸರು | ನಿಗದಿಪಡಿಸಿದ ದರ (ರೂ.ಗಳಲ್ಲಿ) | 15% ರಿಯಾಯಿತಿ ದರ |
|---|---|---|---|---|
| 1. | ಯಕ್ಷೋಪಾಸಕರು (ಭಾಗ–1) | ತೆಂಕು ಮತ್ತು ಬಡಗು ಯಕ್ಷ ಕಲಾವಿದರ ಪರಿಚಯ | 100/– | ಮಾರಾಟಕ್ಕೆ |
| 2. | ಯಕ್ಷೋಪಾಸಕರು (ಭಾಗ–2) | ತೆಂಕು ಮತ್ತು ಬಡಗು ಯಕ್ಷ ಕಲಾವಿದರ ಪರಿಚಯ | 100/– | ಲಭ್ಯವಿಲ್ಲ |
| 3. | ತೆಂಕನಾಡ ಯಕ್ಷಗಾನ | ಡಾ॥ ಉಪ್ಪಂಗಳ ಶಂಕರ ನಾರಾಯಣ ಭಟ್ | 700/– | 595/– |
| 4. | ವರ್ಣವೈಷಮ್ಯ | ಶ್ರೀ ಸಿದ್ಧಕಟ್ಟೆ ವಿಶ್ವನಾಥ ಶೆಟ್ಟಿ | 40/– | 34/– |
| 5. | ಉಲ್ಲಾಸದತ್ತ ವಿಜಯ ಹಾಗೂ ಇತರೆ ಯಕ್ಷಗಾನ ಪ್ರಸಂಗಗಳು | ಶ್ರೀ ಹೊಸ್ತೋಟ ಮಂಜುನಾಥ ಭಾಗವತ | 80/– | 68/– |
| 6. | ಎರಡು ಯಕ್ಷಗಾನ ಪ್ರಸಂಗಗಳು | ಪ್ರೊ. ಎಂ.ಎ.ಹೆಗಡೆ | 60/– | 51/– |
| 7. | ದೀಕ್ಷಾಕಂಕಣ | ಡಾ. ಎನ್. ನಾರಾಯಣ ಶೆಟ್ಟಿ | 70/– | 59/– |
| 8. | ಯಕ್ಷಲೋಕದ ಮಾಸದ ಬಣ್ಣ (ಸಕ್ಕಟ್ಟುರವರ ಆತ್ಮಕಥನ ಮತ್ತು ಲೇಖನಗಳು) | ಶ್ರೀ ಕಂದಾವರ ರಘುರಾಮ ಶೆಟ್ಟಿ | 140/– | 119/– |
| 9. | ಮಹಾನ್ ಕಲಾವಿದ ಅಳಿಕೆ ರಾಮಯ್ಯ ರೈ ಶತಕ ಸ್ಮೃತಿ | ಶ್ರೀ ಭಾಸ್ಕರ ರೈ ಕುಕ್ಕುವಳ್ಳಿ ಮತ್ತು ಶ್ರೀ ಪಿ.ಕಿಶನ್ ಹೆಗಡೆ | 100/– | 85/– |
| 10. | ಪುರುಷವೇಷದ ಪೊಗರು ಹಾರಾಡಿ ಕುಷ್ಟ ಗಾಣಿಗ | ಶ್ರೀ ಎಸ್.ವಿ. ಉದಯಕುಮಾರ್ ಶೆಟ್ಟಿ | 70/– | 59/– |
| 11. | ಶೇಣಿ ಭಾರತ | ಡಾ. ಗೋಪಾಲಕೃಷ್ಣ ಎಲ್. ಹೆಗಡೆ | 200/– | 170/– |
| 12. | ಮಹಾಭಾರತ ಯಕ್ಷಗಾನ ಪ್ರದರ್ಶನಗಳ ರಂಗಭಾಷೆ | ಡಾ. ಚಂದ್ರಶೇಖರ ದಾಮ್ಲೆ | 150/– | 127/– |
| 13. | ಯಕ್ಷಗಾನ ಪ್ರಸಂಗ ಪಂಚಮಿ | ಶ್ರೀ ಕಂದಾವರ ರಘುರಾಮ ಶೆಟ್ಟಿ | 75/– | 63/– |
| 14. | ಪಂಚಭೂತ ಪ್ರಪಂಚ | ಶ್ರೀ ಅಂಬಾತನಯ ಮುದ್ರಾಡಿ | 40/– | 34/– |
| 15. | ಪಂಚದ್ರುಮ | ಶ್ರೀ ಜಿ.ಎಂ. ಭಟ್ಟ, ಕೆ.ವಿ. | 70/– | 59/– |
| 16. | ಇಟಗಿಯವರ 5 ಯಕ್ಷಗಾನ ಪ್ರಸಂಗಗಳು | ಶ್ರೀ ಇಟಗಿ ಮಹಾಬಲೇಶ್ವರ ಭಟ್ | 80/– | 68/– |
| 17. | ಮೂಡಲಪಾಯ ಯಕ್ಷಗಾನ ಭಾಗವತಿಕೆಯ ಪ್ರವೇಶಿಕೆ | ಶ್ರೀ ಕಲ್ಮನೆ ನಂಜಪ್ಪ | 175/– | 148/– |
| 18. | ಸ್ತ್ರೀ ಸ್ವಗತ | ಶ್ರೀ ಕುಮಾರ ಶಂಕರನಾರಾಯಣ | 50/– | 42/– |

| | | | |
|---|---|---|---|
| 19. ಮಂಜಯ್ಯ ಗಣಪತಿ ಶೇಣ್ವಿಯವರ ಎರಡು ಯಕ್ಷಗಾನ ಪ್ರಸಂಗಗಳು | ಶ್ರೀ ಶಾ.ಮಂ.ಕೃಷ್ಣರಾಯ | 80/– | 68/– |
| 20. ಕೆರೋಡಿ ಸುಬ್ಬರಾಯರ ಯಕ್ಷಗಾನಗಳು ಮತ್ತು ಲೇಖನಗಳು | ಡಾ. ಹಾ.ತಿ.ಕೃಷ್ಣೇಗೌಡ | 125/– | 106/– |
| 21. ಯಕ್ಷಗಾನ ಕವಿಗಳ ಚಿತ್ರಕಾವ್ಯ | ಡಾ. ಕಬ್ಬಿನಾಲೆ ವಸಂತ ಭಾರಾದ್ವಾಜ್ | 75/– | 64/– |
| 22. ಯಕ್ಷಗಾನ ಪಂಚರಾತ್ರ | ಪ್ರೊ. ಬಿ.ಎಚ್.ಶ್ರೀಧರ | 40/– | 34/– |
| 23. ಯಕ್ಷಗಾನ ಕೃತಿ ಸಂಪುಟ | ಶ್ರೀ ಕೊರ್ಗಿ ಸೂರ್ಯ ನಾರಾಯಣ ಉಪಾಧ್ಯಾಯ | 130/– | 110/– |
| 24. ಪಾರ್ತಿಸುಬ್ಬ ಬದುಕು ಬರಹ [ವಿಚಾರ ಸಂಕಿರಣದ ಪ್ರಬಂಧಗಳ ಸಂಕಲನ] | ಪ್ರೊ. ಎಂ.ಎ.ಹೆಗಡೆ | 75/– | 64/– |
| 25. ಸುಘಾತ | ಶ್ರೀ ಕೃಷ್ಣಪ್ರಕಾಶ ಉಳಿತ್ತಾಯ | 75/– | 64/– |
| 26. ಸಂವಾದ ಭೂಮಿಕೆ | ಡಾ. ರಮಾನಂದ ಬನಾರಿ | 160/– | 136/– |
| 27. ಭಾರತೀಯ ನಾಟ್ಯ ಸಂಪ್ರದಾಯಗಳು ಮತ್ತು ಯಕ್ಷಗಾನ [ವಿಚಾರ ಸಂಕಿರಣದ ಪ್ರಬಂಧ ಸಂಕಲನಗಳು) | ಡಾ. ಮನೋರಮಾ ಬಿ.ವೈ. | 100/– | 85/– |
| 28. ಶ್ರೀರಾಮಕಥಾನಮನ [ಯಕ್ಷಗಾನ ಪ್ರಸಂಗಗಳ ಅರ್ಥ ನಿರೂಪಣೆ] | ಶ್ರೀ ಕೆ. ಸುರೇಶ ಕುದ್ರೆಂತ್ತಾಯ | 300/– | 255/– |
| 29. ತುಳು ಯಕ್ಷಗಾನ ಪ್ರಸಂಗ ಸಂಪುಟ | ಶ್ರೀ ಕದ್ರಿ ನವನೀತ ಶೆಟ್ಟಿ | 145/– | 123/– |
| 30. ಯಕ್ಷನೂಪುರ : ಯಕ್ಷಗಾನ ಶೋಧ ಲೇಖನಗಳು | ಡಾ. ಮನೋರಮಾ ಬಿ.ವೈ. | 160/– | 136/– |

**ವಿ.ಸೂ: ಪುಸ್ತಕಗಳನ್ನು ಪಡೆಯಲಿಚ್ಛಿಸುವವರು ಈ ಕೆಳಕಂಡ ರೀತಿಯಲ್ಲಿ ಮೊತ್ತವನ್ನು ಪಾವತಿಸಿ ಪುಸ್ತಕಗಳನ್ನು ಪಡೆಯಬಹುದು.**

1. ಅಕಾಡೆಮಿಯ ಬ್ಯಾಂಕ್ ಖಾತೆ ಸಂಖ್ಯೆ: 0413101500213.
   ಐ.ಎಫ್.ಎಸ್.ಸಿ. – CNRB0000413
2. ಅಕಾಡೆಮಿಯಲ್ಲಿ ಚೆಕ್ / ಡಿ.ಡಿ. / RTGS / NEFT ಮೂಲಕ ಹಣವನ್ನು ಸ್ವೀಕರಿಸಲಾಗುವುದು.

## ಪ್ರೊ. ಎಂ.ಎ. ಹೆಗಡೆಯವರ ಪ್ರಸಂಗ ದರ್ಶನ

- ಆದಿಚುಂಚನಗಿರಿ ಕ್ಷೇತ್ರ ಮಹಾತ್ಮೆ
- ಖಾಂಡವ ದಹನ
- ಗಣಪತಿ ಪ್ರಾದುರ್ಭಾವ
- ಗಯ ಯಜ್ಞ
- ಚಕ್ರ ಗ್ರಹಣ
- ಜಲನಿರ್ಮಲ (ಕಾಳೀಯ ಮರ್ದನ)
- ಜಾಗೃತಿ
- ತ್ರಿಶಂಕು ಚರಿತ್ರೆ
- ಧರ್ಮದುರಂತ
- ಪಾಪಾತ್ಮಾಪಾಪಸಂಭವ
- ಪ್ರಚಂಡ ಚಾಣಕ್ಯ
- ಭಕ್ತ ಕನಕದಾಸ
- ಮರುತ್ ಜನ್ಮ
- ರಾಜಾ ಕರಂಧಮ
- ರಾಮಧಾನ್ಯ ಚರಿತೆ
- ವಜ್ರ ಕಿರೀಟ
- ವಿಜಯೀ ವಿಶ್ರುತ
- ವಿಷಯವಿಲಾಸ
- ವೈಶಾಲಿನೀ ಪರಿಣಯ
- ಶಬರಿಮಲೈ ಅಯ್ಯಪ್ಪನ್
- ಶಿಖಂಡಿ ವಿವಾಹ
- ಸೀತಾ ವಿಯೋಗ
- ಸೌಭಾಗ್ಯ ಸೋಪಾನ (ಋಷ್ಯಶೃಂಗ / ಪರಿಸರ ರಕ್ಷಣೆ)

ಇವಲ್ಲದೇ **ಕೃಷ್ಣಂ ವಂದೇ** ಮತ್ತಿನ್ನೆರೆಡು ಕೃಷ್ಣನ ಮೇಲಿನ ರೂಪಕಗಳು, **ಪರಿವರ್ತನೆ ಜಗದ ನಿಯಮ, ವಿಶ್ವಶಂಕರಾಕ್ಷರ** ಮುಂತಾದ ಏಕವ್ಯಕ್ತಿ ಪ್ರಯೋಗಕ್ಕೆ ಸರಿಹೊಂದುವ ಯಕ್ಷರೂಪಕಗಳನ್ನು ಬರೆದಿದ್ದಾರೆ.



**ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು**